# ಅಧ್ಯಾಯ 5

# ಕ್ರಿಸ್ತನು, ನಮ್ಮ ಮಯಾಹಾಜಕ

## (ಭಾಗ 2)

## ಆರೋನನಿಗಿಂತ ಮಹಾಯಾಜಕನಾಗಿ ಕ್ರಿಸ್ತನ ಶ್ರೇಷ್ಠತೆ (4:14-5:10) (ಮುಂದುವರೆದ ಭಾಗ)

### ಮಹಾಯಾಜಕನ ಪಾತ್ರ (5:1-4)

[1]ಪ್ರತಿಯೊಬ್ಬ ಮಹಾಯಾಜಕನು ಮನುಷ್ಯರೊಳಗಿಂದ ಆರಿಸಲ್ಪಟ್ಟವನಾಗಿ ಮನುಷ್ಯರಿಗೋಸ್ಕರ ದೇವರ ಕಾರ್ಯಗಳನ್ನು ಜರುಗಿಸುವದಕ್ಕಾಗಿ ನೇಮಿಸಲ್ಪಡುತ್ತಾ ನಲ್ಲಾ. ಅವನು ಅವರಿಗೋಸ್ಕರ ಕಾಣಿಕೆಗಳನ್ನೂ ಪಾಪನಿವಾರಣಕ್ಕಾಗಿ ಯಜ್ಞಗಳನ್ನೂ ಸಮರ್ಪಿಸಬೇಕು. [2]ತಾನೂ ಬಲಹೀನನಾಗಿರುವದರಿಂದ ಅವನು ಜ್ಞಾನವಿಲ್ಲದವರನ್ನೂ ಮಾರ್ಗತಪ್ಪಿ ನಡೆಯುವವರನ್ನೂ ತಾಳ್ಮೆಯಿಂದ ಸಹಿಸಿಕೊಳ್ಳುವದಕ್ಕೆ ಶಕ್ತನಾಗಿರುವನು. [3]ಆ ಬಲಹೀನತೆಯ ಕಾರಣದಿಂದ ಅವನು ಜನರಿಗೋಸ್ಕರ ಹೇಗೋ ಹಾಗೆಯೇ ತನಗೋಸ್ಕರವೂ ಪಾಪನಿವಾರಣಾರ್ಥವಾಗಿ ಯಜ್ಞಗಳನ್ನು ಮಾಡಬೇಕಾದವನಾಗಿದ್ದಾನೆ. [4]ಇದಲ್ಲದೆ ಯಾವನೂ ತನ್ನಷ್ಟಕ್ಕೆ ತಾನೇ ಈ ಗೌರವವನ್ನು ವಹಿಸಿಕೊಳ್ಳದೆ ದೇವರಿಂದ ನೇಮಿಸಲ್ಪಟ್ಟು ವಹಿಸಿಕೊಳ್ಳುತ್ತಾನೆ; ಆರೋನನು ಸಹ ದೇವರಿಂದಲೇ ನೇಮಿಸಲ್ಪಟ್ಟು ಆ ಗೌರವವನ್ನು ವಹಿಸಿಕೊಂಡನಲ್ಲಾ.

ಇಂದು, ಪ್ರಾಚೀನ ಯೆಹೂದಿ ಮತದಲ್ಲಿ ಮಹಾಯಾಜಕನ ಉದ್ಯೋಗದೊಂದಿಗೆ ಅಂಟಿಕೊಂಡಿರುತ್ತಿದ್ದ ಶಕ್ತಿ, ಮಹಿಮೆ, ಆಡಂಬರ, ವೈಭವ, ಮತ್ತು ಸನ್ಮಾನ ಇವುಗಳ ಪೂರ್ಣವಾಗಿ ಕಲ್ಪನೆ ಮಾಡಿಕೊಳ್ಳುವದು ಕಷ್ಟಕರವಾಗಿರುತ್ತದೆ. Josephusನ ಲೆಕ್ಕಾಚಾರದ ಪ್ರಕಾರ, ಆ ಸ್ಥಾನವು ಎಲ್ಲಾ ಗೌರವಗಳಿಗಿಂತಲೂ ಅತ್ಯುನ್ನತವಾಗಿತ್ತು.[1] James Burton Coffman ನೀಡಿರುವ ಈ ಕೆಳಗಿನ ವರ್ಣನೆಯು ಸಹಾಯಕವಾಗಿರುತ್ತದೆ:

> ಯಾವ ಸಂಶಯವೂ ಇಲ್ಲದೆ, ಯೆಹೂದಿ ಮಹಾಯಾಜಕನ ಭೂಲೋಕದ ವೈಭವವು ಕ್ರೈಸ್ತರ ಮೇಲೆ, ವಿಶೇಷವಾಗಿ ಯೆಹೂದಿ ಕ್ರೈಸ್ತರ ಮೇಲೆ ಒಂದು ಮೋಹಕ್ಕೊಳಪಡಿಸುವ ಪ್ರಭಾವಕ್ಕೆ ಕಾರಣಾಂಶವಾಗಿರುತ್ತದೆ. ಐಶ್ವರ್ಯಭರಿತ ಉಡುಪುಗಳು, ಆಡಂಬರ ಆಭರಣಗಳಿಂದ ಅಲಂಕೃತವಾದ ಎದೆಕವಚ, ಪಾಪನಿವಾರಣ ದಿನದಂದು ಅತಿ ಪರಿಶುದ್ಧ ಸ್ಥಳವನ್ನು ಪ್ರವೇಶಿಸುವದಕ್ಕೆ ಇರುತ್ತಿದ್ದ ಭಾಗ್ಯ, ಒಬ್ಬ ನ್ಯಾಯಾಧಿಪತಿ ಮತ್ತು ಹಿರೀ ಸಭೆಯ ಅಧ್ಯಕ್ಷನಾಗಿ ಆತನ ಸ್ಥಾನಮಾನ, ಯೆಹೂದಿ ಜನಾಂಗದ ಅಧಿಕೃತ ಪ್ರತಿನಿಧಿಯಾಗಿ ಆತನ

> ನಾಟಕೀಯವಾದ ಪ್ರಭಾವ, ವಿಶೇಷವಾಗಿ ಅವರಿಗೆ ಯಾವದೇ ಅರಸನು ಇಲ್ಲದಿರುವ ಕಾಲದಲ್ಲಿ ಅದು ಮತ್ತಷ್ಟು ಅಧಿಕವಾಗಿರುತ್ತಿತ್ತು, ಮತ್ತು ಆರೋನನ ಪುತ್ರರ ಸಂಪ್ರದಾಯಿಕ ಸಂತತಿಯವನಾಗಿರುವದು ಮತ್ತು ಅದು ಐಗುಪ್ತದಿಂದ ಹೊರಟ ಕಾಲದಿಂದಲೂ ಬಂದಿದ್ದಾಗಿರುವದು, ಮತ್ತು ಒಲ್ಲದ ಮನಸ್ಸಿನಿಂದ, ಅವರನ್ನು ಗೆದ್ದುಕೊಂಡಿದ್ದ ರೋಮನ್ನರಿಂದ ಸಹ ಅವರ ಹುದ್ದೆಗೆ ಸಿಗುತ್ತಿದ್ದ ಗೌರವ-ಈ ಎಲ್ಲಾ ಸಂಗತಿಗಳು ಮತ್ತು ಇನ್ನು ಅನೇಕ ಕಾರ್ಯಗಳು ಜನರ ದೃಷ್ಟಿಯಲ್ಲಿ ಯೆಹೂದಿ ಮಹಾಯಾಜಕನನ್ನು ಒಂದು ಪ್ರತ್ಯೇಕವಾದ ವೈಭವದ ಸ್ಥಾನಕ್ಕೇರಿಸಿದ್ದವು.[2]

ಯೆಹೂದಿ ಜನರು ಸಾಮಾನ್ಯವಾಗಿ ಹೆರೋದನನ್ನು ಅಸಹ್ಯಿಸುತ್ತಿದ್ದರಾದರೂ, ಆತನು ದೇವಾಲಯವನ್ನು ಸೊಲೊಮೋನನ ಕಾಲದಿಂದಲೂ ಅಪ್ರತಿಮವಾಗಿದ್ದ ಸೌಂದರ್ಯಕ್ಕೆ ಮರುನಿರ್ಮಾಣ ಮಾಡಿದ ಆತನ ಕೆಲಸಕ್ಕಾಗಿ ಅವರು ಒಲ್ಲದ ಮನಸ್ಸಿನಿಂದ ಆತನನ್ನು ಮೆಚ್ಚಿಕೊಳ್ಳುವವರಾಗಿದ್ದರು. ಮಹಾಯಾಜಕನಿಗೆ ವಿಶಿಷ್ಟವಾಗಿರುವ ಗೌರವವು ದೇವಾಲಯದ ಪ್ರತಿಷ್ಠೆಯೊಂದಿಗೆ ಸಂಬಂಧ ಹೊಂದಿತ್ತು.

ಯೇಸುವಿನ ಅಪೊಸ್ತಲರು ತಾವು ದೇವಾಲಯದ ಬಗ್ಗೆ ಮೆಚ್ಚುಗೆ ಹೊಂದಿದ್ದಂತೆಯೇ ಆತನು ಹೊಂದಿರಬೇಕೆಂದು ಬಯಸಿದರು (ಮತ್ತಾಯ 24:1, 2). ಮಹಾಯಾಜಕನ ಕುರಿತಾಗಿ ಅಪೊಸ್ತಲರಲ್ಲಿದ್ದ ದೃಷ್ಟಿಕೋನದಲ್ಲಿನ ಬದಲಾವಣೆಯು ಅವರು ಯೇಸುವಿನೊಂದಿಗೆ ಇದ್ದದರಿಂದ ಮಾತ್ರವೇ ಅಲ್ಲ, ಆದರೆ ಪವಿತ್ರಾತ್ಮನಿಂದ ಬಲಪಡಿಸಲ್ಪಟ್ಟದ್ದರಿಂದ ಸಹ ಉಂಟಾಗಿತ್ತು. ಪವಿತ್ರಾತ್ಮನಿಂದ ಬಲವನ್ನು ಹೊಂದಿದವರಾಗಿ, ಗಲಿಲಾಯದ ಆ ಹನ್ನೆರಡು ಮಂದಿ ತಮ್ಮ ಹೊಸ ನಂಬಿಕೆಯನ್ನು – ಧರ್ಮಶಾಸ್ತ್ರವು ಶಿಲುಬೆಯೊಂದಿಗೆ ಗತಿಸಿ ಹೋಗಿತ್ತೆಂಬದನ್ನು ಒಪ್ಪಿಕೊಳ್ಳುವಂತಹ ನಂಬಿಕೆ – ಸಮರ್ಥಿಸಿಕೊಳ್ಳುವದಕ್ಕೆ ಶೀಘ್ರವೇ ಮಹಾಯಾಜಕನ ಮುಂದೆ ಮತ್ತು ಆತನ ನ್ಯಾಯಾಲಯದಲ್ಲಿ ನಿಂತುಕೊಳ್ಳುವಷ್ಟು ಧೈರ್ಯವಾಗಿ ಬೆಳೆದರು (ಅಪೊಸ್ತಲರ ಕೃತ್ಯಗಳು 1:6-8; 2:1-4; 4:13). ಅವರು ಮೋಶೆಯ ವ್ಯವಸ್ಥೆಯ ಕುರಿತಾಗಿ ಒಂದು ಹೊಸ ದೃಷ್ಟಿಕೋನವನ್ನು ಹೊಂದಿಕೊಂಡಿದ್ದರು.

ಮಹಾಯಾಜಕನು ಯಾವ ಪಾತ್ರವನ್ನು ತುಂಬಿದನು? ನಾವು "ಶ್ರೇಷ್ಠ ಮಹಾಯಾಜಕನಾದ" ಯೇಸುವಿಗೆ ಸಂಬಂಧಿಸಿದಂತೆ ಆ ಪಾತ್ರದ ಕುರಿತಾಗಿ ನೋಡೋಣ.

**ವಚನ 1.** ಅಧ್ಯಾಯವು ಈ ಮಾತುಗಳೊಂದಿಗೆ ಆರಂಭಗೊಳ್ಳುತ್ತದೆ **ಪ್ರತಿಯೊಬ್ಬ ಮಹಾಯಾಜಕನು ಮನುಷ್ಯರೊಳಗಿಂದ ಆರಿಸಲ್ಪಟ್ಟವನಾಗಿದ್ದು ಮನುಷ್ಯರಿಗೋಸ್ಕರ ದೇವರ ಕಾರ್ಯಗಳನ್ನು ಜರುಗಿಸುವದಕ್ಕಾಗಿ ನೇಮಿಸಲ್ಪಟ್ಟಿರುತ್ತಾನಲ್ಲಾ.** ಒಬ್ಬ ಯಾಜಕನ ಅಗತ್ಯತೆಯು ದೇವರ ಮತ್ತು ಮನುಷ್ಯನ ನಡುವೆ ವಿಭಾಗವಿರುತ್ತದೆಂಬುದನ್ನು ಸೂಚಿಸುತ್ತದೆ. ದೇವರ ಬಳಿಗೆ ಹೋಗುವದಕ್ಕೆ ನಮಗೊಂದು ಸಮಸ್ಯೆಯಿರುತ್ತದೆ: ಆ ಸಮಸ್ಯೆಯು ಪಾಪ, ಅದು ನಮ್ಮನ್ನು ದೇವರಿಂದ ದೂರ ಮಾಡುತ್ತದೆ (ಯೆಶಾಯ 59:1, 2). ಒಂದು ಅರ್ಥದಲ್ಲಿ, ಎಲ್ಲಾ ಕ್ರೈಸ್ತರು ದೇವರ ಯಾಜಕರಾಗಿದ್ದಾರೆ (1 ಪೇತ್ರ 2:5, 9). ಇನ್ನೊಂದು ಅರ್ಥದಲ್ಲಿ, ನಾವು ತಂದೆಯನ್ನು ಆರಾಧಿಸುವದಕ್ಕೆ ಮತ್ತು ಆತನ ಕರುಣೆಗಳನ್ನು ಪಡಕೊಳ್ಳುವದಕ್ಕೆ ಪ್ರಯಾಸ ಪಡುವಾಗ ಆತನ ಬಳಿಗೆ ಹೋಗಲು *ಪೂರ್ಣ ಮಾರ್ಗವನ್ನು* ಅನುಮತಿಸುವದಕ್ಕೆ ನಮಗೊಬ್ಬ ಮಹಾಯಾಜಕನ ಅಗತ್ಯವಿರುತ್ತದೆ. ದೇವರನ್ನು ಬಲ್ಲವನಾಗಿರುವ, ಆತನೊಂದಿಗೆ ಸಂಬಂಧ ಹೊಂದಿರುವ, ಮತ್ತು ನಮ್ಮ ಕುಂದು ಕೊರತೆಗಳನ್ನು ಅರ್ಥಮಾಡಿಕೊಳ್ಳಬಲ್ಲ ಒಬ್ಬ ಮಧ್ಯಸ್ಥ ಪ್ರಾರ್ಥನೆಗಾರನ ಅಗತ್ಯ ನಮಗಿರುತ್ತದೆ. ನಾವು ನಮ್ಮ ಮಹಾಯಾಜಕ ಮತ್ತು ಮಧ್ಯಸ್ಥನಾದ ಯೇಸು ಕ್ರಿಸ್ತನಿಲ್ಲದೆ ದೇವರ ಸಂಗಡ ನೇರವಾದ ಸಂಬಂಧವನ್ನು ಹೊಂದಿಕೊಳ್ಳಲು ಸಾಧ್ಯವಾಗಲಿಲ್ಲ.

ಮಹಾಯಾಜಕನು **ಪಾಪನಿವಾರಣಕ್ಕಾಗಿ ಯಜ್ಞಗಳನ್ನು ಸಮರ್ಪಿಸಬೇಕು**. 5:1-4ರಲ್ಲಿ ಮಹಾಯಾಜಕ ಮತ್ತು ಆತನ ಕೆಲಸದ ಕುರಿತಾದ ಹೇಳಿಕೆಗಳು ವರ್ತಮಾನ ಕಾಲರೂಪದಲ್ಲಿರುತ್ತವೆ. ಆತನಿಂದ ಒದಗಿಸಲ್ಪಡುತ್ತಿದ್ದ ದೇವಾಲಯದ ಸೇವೆಗಳು ಆಗಲೂ ಲಭ್ಯವಿದ್ದವು. ಹೇಗೂ, ಆ ಆರಾಧನೆಯ ವ್ಯವಸ್ಥೆಯು ಇನ್ನು ಮೇಲೆ ಅವಶ್ಯವಾಗಿರಲಿಲ್ಲ, ಯಾಕೆಂದರೆ ಅದರ ಅಡಿಯಲ್ಲಿ ಮಾಡಲ್ಪಡುತ್ತಿದ್ದ ಎಲ್ಲಾ ಯಜ್ಞಗಳು ಯೇಸುವಿನಲ್ಲಿ ನೆರವೇರಿದ್ದವು. ಆದುದರಿಂದ, ಅವುಗಳನ್ನು ಶಾಶ್ವತವಾಗಿ ತೆಗೆದು ಹಾಕಲ್ಪಡುವದು ಅಗತ್ಯವಾಗಿತ್ತು.

ಯೆಹೂದಿ ವಿಶ್ವಾಸಿಗಳು ತಮ್ಮ ಮಹಾಯಾಜಕನಿಗೆ ಜೋಡಣೆ ಮಾಡಿದ ಗೌರವವು ಕ್ರಿಸ್ತನು ಹೇಗೆ ಆ ಸ್ಥಾನವನ್ನು ವಹಿಸಿಕೊಂಡನೆಂಬುದನ್ನು ಕ್ರೈಸ್ತರು ಅರ್ಥಮಾಡಿಕೊಳ್ಳು ವದನ್ನು ಅಗತ್ಯವಾಗಿಸಿತ್ತು. ಯೇಸುವು ಧರ್ಮಶಾಸ್ತ್ರದ ಮಹಾಯಾಜಕತ್ವವು ಒದಗಿಸಿದ ಸಾಮಾನ್ಯ, ಮಾನವ ಮಹಾಯಾಜಕತ್ವವನ್ನು ಯೇಸು ಒಂದು ಪರಲೋಕದ ಯಾಜಕತ್ವವನ್ನು ಒದಗಿಸುವದರ ಮೂಲಕ ಅದನ್ನು ಮೀರಿಸಿದ್ದನು ಎಂಬುದನ್ನು ಅವರು ಅರಿತುಕೊಳ್ಳಬೇಕಿತ್ತು.

**ವಚನ 2.** ಮಹಾಯಾಜಕನು ಮನುಷ್ಯರೊಳಗಿನ ಒಬ್ಬ ಮನುಷ್ಯನಾಗಿರಬೇಕಿತ್ತು. ಪಾಪನಿವಾರಣೆಗಾಗಿ ಯಜ್ಞಗಳನ್ನು ಅರ್ಪಿಸುವವನಾಗಿ ಆತನು **ಜ್ಞಾನವಿಲ್ಲದವರನ್ನೂ** ಮತ್ತು ಮಾರ್ಗತಪ್ಪಿ ನಡೆಯುವವರನ್ನು **ಸಹಿಸಿಕೊಳ್ಳುವದಕ್ಕೆ** ಶಕ್ತನಾಗಿರಬೇಕಾಗಿತ್ತು (5:3ರ ಮೇಲಿನ ಚರ್ಚೆಯನ್ನು ನೋಡಿರಿ). ಯಾಜಕರು ಆರೋನನ ಕುಟುಂಬದಿಂದ ಬಂದವರಾಗಿದ್ದರು (ವಿಮೋಚನಕಾಂಡ 29:9); ಮಹಾಯಾಜಕನು ದೇವರಿಂದ ಆರಿಸಿಕೊಳ್ಳಲ್ಪಟ್ಟವನು, ಕರೆಯಲ್ಪಟ್ಟವನು, ಮತ್ತು ನೇಮಿಸಲ್ಪಟ್ಟವನು ಆಗಿರಬೇಕಿತ್ತು.

ಮಹಾಯಾಜಕನ ಎರಡು ಮೂಲಭೂತ ಗುಣಸ್ವಭಾವಗಳು ಏನಾಗಿದ್ದವೆಂದರೆ ಅನುತಾಪವುಳ್ಳ ಮಾನವ ಸ್ವಭಾವ ಮತ್ತು ಒಂದು ದೈವಿಕ ನೇಮಿಸಲ್ಪಡುವಿಕೆ. ಯೇಸುವು ಯಾಜಕತ್ವದ ಎರಡೂ ಅರ್ಹತೆಗಳನ್ನು ಸಂಧಿಸಿದವನೆಂಬುದನ್ನು ಇಬ್ರಿಯರಿಗೆ ಪತ್ರಿಕೆಯು ತೋರಿಸಿ ಕೊಡುತ್ತದೆ (4:15). ಆತನು ಎಲ್ಲಾ ಯಾಜಕರಲ್ಲಿಯೇ ಅತ್ಯಂತ ಕನಿಕರವುಳ್ಳವನು. ಆತನು ನಮ್ಮನ್ನು ಅರ್ಥಮಾಡಿಕೊಳ್ಳುತ್ತಾನೆ, ಯಾಕೆಂದರೆ ಆತನು ಪಾಪರಹಿತನಾಗಿದ್ದಾಗ್ಯೂ, ಆತನು ನಿರಂತರವಾಗಿ "ದುರದ್ದೇಶದ ಆಕರ್ಷಣೆಗಳನ್ನು ಮತ್ತು ಕುತಂತ್ರ ಪ್ರಲೋಭನೆಗಳನ್ನು" ಎದುರುಗೊಂಡನು.[3]

5:1-10ರ ವಿಸ್ತಾರವಾದ ಸನ್ನಿವೇಶದಲ್ಲಿ, ಇಬ್ರಿಯರಿಗೆ ಪತ್ರಿಕೆಯು ಯೇಸುವಿನ ಮಹಾಯಾಜಕತ್ವದ ವಾಸ್ತವಾಂಶ ಮತ್ತು ಈ ಸ್ಥಾನವು ಸಾಭಿತುಗೊಳಿಸಲ್ಪಟ್ಟ ಮೂಲಭೂತ ಘಟನೆಗಳ ಕುರಿತು ಸವಿಸ್ತಾರವಾಗಿ ವಿವರಿಸುತ್ತದೆ: ಶಿಲುಬೆಯ ಮೇಲಿನ ಆತನ ಮರಣದೊಂದಿಗೆ ಪರಾಕಾಷ್ಠೆಯನ್ನು ತಲುಪಿದ ತೋಟದಲ್ಲಿನ ಆತನ ಪ್ರಾರ್ಥನೆ. ಇಬ್ರಿಯ 7:1-10:18 ಆತನ ಯಾಜಕತ್ವದ ಕೆಲಸದ ಸ್ವಭಾವದ ಕುರಿತು ವಿವರಣೆಯನ್ನು ಒದಗಿಸುತ್ತದೆ. ಹೊಸ ಒಡಂಬಡಿಕೆಯ ಬೇರೆ ಯಾವ ಪುಸ್ತಕವೂ ಯೇಸುವು ಮಹಾಯಾಜಕನು ಎಂದು ಸ್ಪಷ್ಟವಾಗಿ ಹೇಳುವದಿಲ್ಲ.

ಯೇಸುವು ಮನುಷ್ಯನ ಪ್ರಯೋಜನಾರ್ಥವಾಗಿ ದೇವರಿಂದ ಆರಿಸಿಕೊಳ್ಳಲ್ಪಟ್ಟ ಮತ್ತು ನೇಮಿಸಲ್ಪಟ್ಟಿರುವ ಮಹಾಯಾಜಕನಾಗಿದ್ದಾನೆ. ಸ್ಪಷ್ಟವಾಗಿರುವಂತೆ, ಆತನು ದೇವರ ಕೆಲಸವನ್ನು ಮಾಡುವದಕ್ಕಾಗಿ ದೇವರಿಂದ ಆರಿಸಿಕೊಳ್ಳಲ್ಪಟ್ಟವನಾಗಿದ್ದನು, ಮತ್ತು ಭೂಮಿಯ ಮೇಲಿರುವ ವೇಳೆ ಆತನು ತನ್ನ ಕೆಲಸವನ್ನು ನೆರವೇರಿಸಿದನು (ಯೋಹಾನ 17:4). ಆತನು ದೇವರಿಂದ ಆರಿಸಿಕೊಂಡವನು ಮತ್ತು ದೇವರಿಂದ ನೇಮಿಸಲ್ಪಟ್ಟವನು. ಯೆಹೂದಿ ವ್ಯವಸ್ಥೆಯು

ಯಾಜಕತ್ವವಿಲ್ಲದೆ ಇರುವದಕ್ಕಾಗಲಿಲ್ಲ, ಯಾಕೆಂದರೆ ಅದು ಒಡಂಬಡಿಕೆಯಲ್ಲಿ ಒಂದು ಸಾರಭೂತವಾದ ಭಾಗವಾಗಿತ್ತು. ಅಲ್ಲದೆ ಆ ಸ್ಥಾನವನ್ನು ವಹಿಸಿಕೊಂಡವನು ಕ್ರಿಸ್ತನಿಗೆ ಒಂದು ನಿದರ್ಶನವಾಗಿ ಸಹ ಇರುತ್ತಿದ್ದನಾದ್ದರಿಂದ ಅದು ಜೀವಧಾರಕವಾಗಿತ್ತು; ಆತನ ಕೆಲಸಗಳು ಕ್ರೈಸ್ತ ಯುಗದ ಮುನ್‌ಛಾಯೆಯಾಗಿದ್ದವು.

**ವಚನ 3.** ಹಾಗಾದರೆ ಮಹಾಯಾಜಕರು **ಜನರಿಗೋಸ್ಕರ ಹೇಗೋ ಹಾಗೆಯೇ** [ತಮಗೋಸ್ಕರವೂ] **ಪಾಪನಿವಾರಣಾರ್ಥವಾಗಿ ಯಜ್ಞಗಳನ್ನು ಮಾಡಬೇಕಾದವನಾ ಗಿದ್ದಾನೆ**. ಇಬ್ರಿಯರಿಗೆ ಪತ್ರಿಕೆಯ ಒಂದು ಚರ್ಚೆಯ ಪ್ರಮುಖ ವಿಷಯವೆಂದರೆ ಯಜ್ಞಗಳನ್ನು ಅರ್ಪಿಸುವದು (ನೋಡಿರಿ 5:1). Προσφέρω (*prospherō,* "ಯಜ್ಞ ಅರ್ಪಿಸು") ಎಂಬುದು ಇಬ್ರಿಯರಿಗೆ ಪತ್ರಿಕೆಯಲ್ಲಿ ಇಪ್ಪತ್ತು ಸಾರಿ ಕಾಣಿಸಿಕೊಳ್ಳುತ್ತದೆ.[4] ಪೌಲನು ಕ್ರಿಸ್ತನ ಯಜ್ಞದ ಕುರಿತಾಗಿ ಚರ್ಚೆಯನ್ನು ಮಾಡುತ್ತಾನಾದರೂ, ಈ ಕ್ರಿಯಾಪದರೂಪವು ಪೌಲನ ಬರಹಗಳಲ್ಲಿ ಎಲ್ಲಿಯೂ ಕಾಣಿಸಿಕೊಳ್ಳುವದಿಲ್ಲ. ಆ ವ್ಯತ್ಯಾಸಕ್ಕೆ ಕಾರಣವು ಇಬ್ರಿಯರಿಗೆ ಪತ್ರಿಕೆಯ ಭಾವನೆಯು ಬಹುಪಾಲು ಯಾಜಕರ ಕೆಲಸ ಮತ್ತು ಮಹಾಯಾಜಕನ ಕೆಲಸಕ್ಕೆ ಅನ್ವಯಿಸುತ್ತೆಂಬುದು ಆಗಿರಬಹುದಾಗಿದೆ, ಆದರೂ ಮೂರು ಸಂದರ್ಭಗಳಲ್ಲಿ ಅದು ಕ್ರಿಸ್ತನ ಕೆಲಸಕ್ಕೆ ಅನ್ವಯವಾಗಿರುತ್ತದೆ (9:14, 25, 28).

ಯಾಜಕರು, ಮತ್ತು ವಿಶೇಷವಾಗಿ ಮಹಾಯಾಜಕನು, "ಕಾಣಿಕೆಗಳನ್ನೂ ಪಾಪನಿವಾರಣಕ್ಕಾಗಿ ಯಜ್ಞಗಳನ್ನೂ" ಸಮರ್ಪಿಸುತ್ತಿದ್ದರು, ವಿಶೇಷವಾಗಿ ದೋಷಪರಿಹಾರಕ ದಿನದಂದು ಅರ್ಪಿಸುತ್ತಿದ್ದರು. ಸಮರ್ಪಿಸಲ್ಪಡುತ್ತಿದ್ದ "ಕಾಣಿಕೆಗಳು" ನಿರ್ಜೀವವಾದವುಗಳಾಗಿರುತ್ತಿದ್ದವು (ಎಣ್ಣೆಯ ತರ್ಪಣ ಮತ್ತು ಆಹಾರದ ಕಾಣಿಕೆಗಳು); "ಯಜ್ಞಗಳು" ಪ್ರಾಣಿ ಯಜ್ಞಗಳಾಗಿರುತ್ತಿದ್ದವು – ಕೊಯ್ಯಲ್ಪಟ್ಟ ಪ್ರಾಣಿಗಳು.[5] ಯಾಜಕತ್ವದ ಸ್ವಭಾವವೇ ಯಜ್ಞಗಳ ಸಮರ್ಪಿಸುವಿಕೆಯನ್ನು ಒಳಗೊಂಡಿರುತ್ತಿತ್ತು, ಆದರೆ ಯೇಸು ನಮ್ಮ ಮಹಾಯಾಜಕನಾಗಿ ಕೆಲಸ ಮಾಡುತ್ತಾ ಸ್ವತಃ ತನ್ನನ್ನೇ ಸಮರ್ಪಿಸಿಕೊಂಡನು.

ನಾವು ಸುವಾರ್ತೆಯ ಸೇವಕನೊಬ್ಬನನ್ನು ಆ ಅರ್ಥದಲ್ಲಿ ಒಬ್ಬ "ಯಾಜಕ" ಎಂದು ಕರೆಯಬಾರದು ಯಾಕೆಂದರೆ ಆತನು ಯಾವ ಯಜ್ಞಗಳನ್ನು ಅರ್ಪಿಸಲಿಲ್ಲ ಮತ್ತು ಯಾವ ರಕ್ತವನ್ನು ಪ್ರೋಕ್ಷಿಸಲಿಲ್ಲ. ರೋಮನ್ ಕ್ಯಾಥೋಲಿಕ್ ಸಭೆಯು ತನ್ನ ಯಾಜಕರು "ಯಜ್ಞದ ಪೂಜೆಯಲ್ಲಿ" ನಿರಂತರವಾಗಿ ಯಜ್ಞಗಳನ್ನು ಅರ್ಪಿಸುತ್ತಾರೆಂದು ನಂಬುತ್ತದೆ, ನೇಮಿಸಲ್ಪಟ್ಟ ಯಾಜಕನ ಮೌಖಿಕ ನುಡಿಗಳ ಮೂಲಕ "ದಿವ್ಯಪ್ರಸಾದ"ವು (ರೊಟ್ಟಿ) "ಸ್ವತಃ ಯೇಸುವಿನ ದೇಹವಾಗಿ" ಮಾರ್ಪಡುತ್ತದೆಂದು ಹೇಳಿಕೊಳ್ಳುತ್ತಾರೆ. ಹೇಗೂ, ಅಂಥ ಅಭಿಪ್ರಾಯವು ದೇವರ ವಾಕ್ಯದಿಂದ ಕಲಿಸಲ್ಪಟ್ಟದ್ದಾಗಿರುವದಿಲ್ಲ. ಸುವಾರ್ತೆಯ ಸೇವಕರು ವಾಕ್ಯವನ್ನು ಸಾರುತ್ತಾರೆ. ಅವರು ಪಾಪನಿವಾರಣೆಗೆ ಯಜ್ಞಗಳನ್ನು ಅರ್ಪಿಸುವದಿಲ್ಲ, ಯಾಕೆಂದರೆ ನಮ್ಮ ಪಾಪಗಳ ಪರಿಹಾರ್ಥ ಯಜ್ಞವಾಗಿ ಕ್ರಿಸ್ತನು ತನ್ನನ್ನೇ ಸದಾಕಾಲಕ್ಕೂ ಇರುವಂತೆ ಒಂದೇ ಬಾರಿಗೆ ಸಮರ್ಪಿಸಿಕೊಂಡನು.

ಅವರ ಪಾಪಭರಿತ ಬಲಹೀನತೆಯ ನಿಮಿತ್ತವಾಗಿ, ಹಳೆಯ ಒಡಂಬಡಿಕೆಯ ಯಾಜಕರು ಜನರಿಗೋಸ್ಕರ ಮಾತ್ರವಲ್ಲದೆ ತಮಗೋಸ್ಕರವೂ ಯಜ್ಞಗಳನ್ನು ಸಮರ್ಪಿಸಿಕೊಳ್ಳುತ್ತಿದ್ದರು. ಅನೇಕ ಪ್ರಾಚೀನ ಯೆಹೂದಿ ಬರಹಗಳು ಮಹಾಯಾಜಕನ ಮಹಿಮಕರವಾದ ಉಡುಪುಗಳ ಕುರಿತಾದ ಬಣ್ಣನೆಗಳನ್ನು ಒಳಗೊಂಡಿರುತ್ತವೆ, ಆದರೆ ಆತನ ನಿಜವಾದ ಉಡಿಗೆಯು ಆತನ "ಬಲಹೀನತೆ" ಆಗಿತ್ತು.[6] ಸ್ವತಃ ಒಬ್ಬ ಪಾಪಿಯಾಗಿದ್ದ ಮಹಾಯಾಜಕನು "ಜ್ಞಾನವಿಲ್ಲದವರು ಮತ್ತು ಮಾರ್ಗತಪ್ಪಿರುವವರ" ಮೇಲೆ ಅನುತಾಪವನ್ನು ತೋರಲು ಶಕ್ತನಾಗಿರುತ್ತಿದ್ದನು (ವ. 2).[7]

ಆತನು ತನ್ನ ನ್ಯಾಯತೀರಿಸುವಿಕೆಗಳಲ್ಲಿ ಅತಿ ಕಠೋರನಾಗಿರದಂತೆ ಆತನಿಗೆ ಕನಿಕರದ ಅಗತ್ಯವಿತ್ತು. "ಮೃದುವಾಗಿ" ಎಂದರೆ "ಕನಿಕರದೊಂದಿಗೆ" ಎಂದರ್ಥವಾಗಿದೆ. ಇಲ್ಲಿ ಗ್ರೀಕ್ ಕ್ರಿಯಾಪದವು μετριοπαθέω (*metriopatheō*). ಗ್ರೀಕರಿಗಾದರೋ, ಇದು ಅತಿಯಾದ ಕೋಪ ಮತ್ತು ಭಾವಶೂನ್ಯದ ನಡುವಿನ ತಕ್ಕದಾದ ಸ್ಥಿತಿ ಎಂದಾಗಿರುತ್ತಿತ್ತು – ಎಷ್ಟು ಬೇಕೋ ಅಷ್ಟು ಪ್ರಮಾಣದಲ್ಲಿ ಸರಿಯಾದ ಕಳಕಳಿ.

ಮಹಾಯಾಜಕನಾಗಿ, ಕ್ರಿಸ್ತನು ಯಾವದೇ ಬಲಹೀನತೆಯನ್ನು ಹೊಂದಿಲ್ಲದಿದ್ದಾಗ್ಯೂ, ಆತನು ನಮ್ಮ ಬಲಹೀನತೆಗಳ ವಿಷಯದಲ್ಲಿ ಅನುತಾಪ ಹೊಂದಿದ್ದಾನೆ (ಇಬ್ರಿಯ 4:15; 7:28). ಆತನು "ಸಂಕಷ್ಟಕ್ಕೊಳಗಾದವನೂ ವ್ಯಾಧಿಪೀಡಿತನೂ" ಆಗಿದ್ದನು (ಯೆಶಾಯ 53:3). ಆತನು ನಿರ್ದಿಷ್ಟವಾಗಿ ಕನಿಕರವನ್ನು ತೋರ್ಪಡಿಸುವಿಕೆಯಲ್ಲಿ ಹಳೆಯ ಒಡಂಬಡಿಕೆಯ ಮಹಾಯಾಜಕನನ್ನು ಮೀರಿಸುವವನಾಗಿದ್ದನು. ಪ್ರೇರಿತ ಲೇಖಕನು 2:18 ಮತ್ತು 4:15ರಲ್ಲಿ ದೃಷ್ಟಾಂತಪಡಿಸಿರುವ ಪ್ರಕಾರ, ಯೇಸು ನಿಜವಾಗಿಯೂ ಜ್ಞಾನವಿಲ್ಲದವರೊಂದಿಗೆ ಸಹನೆಯಿಂದ ನಡೆದುಕೊಂಡನು.

ಹಳೆಯ ಒಡಂಬಡಿಕೆಯ ಮಹಾಯಾಜಕನ ಕುರಿತಾಗಿ Thomas Hewittನು ನೀಡುವ ಭಾವಾನುವಾದವು ಇದಕ್ಕೆ ಸೂಕ್ತವಾಗಿ ಸರಿಹೊಂದುತ್ತದೆ: "ಆದದರಿಂದ ಅನುಚಿತವಾದ ಕಠಿಣತೆಯಿಂದ ದೂರವಿರುವದು ಅವಶ್ಯಕವಾಗಿರುತ್ತದೆ, ಯಾಕೆಂದರೆ ಆತನು ಸಹ ಅದೇ ದಂಡನೆಯ ಅಧೀನದಲ್ಲಿದ್ದಾನೆ; ಆದಾಗ್ಯೂ, ದೇವರ ಪ್ರತಿನಿಧಿಯಾಗಿ, ಆತನು ಅತ್ಯಂಥ ಮೃದುದೋರಣೆಯುಳ್ಳವನು ಆಗಿರುವದಕ್ಕೆ ಸಾಧ್ಯವಿಲ್ಲ, ಯಾಕೆಂದರೆ ದೇವರು ಪಾಪವನ್ನು ಎಂದಿಗೂ ಅಲಕ್ಷ್ಯ ಮಾಡುವದಿಲ್ಲ."[8]

ಧರ್ಮಶಾಸ್ತ್ರವು ತಿಳಿಯದವರಾಗಿ ಮಾಡಿದ ಪಾಪಗಳಿಗಾಗಿ ಒಂದು ದಾರಿಯನ್ನು ಏರ್ಪಡಿಸಿತ್ತು, ಮತ್ತು ತಾನು ಪಾಪ ಮಾಡಿದ್ದೇನೆಂಬುದು ಒಬ್ಬನಿಗೆ ತಿಳಿಯದೆ ಇದ್ದಾಗ ಕನಿಕರವನ್ನು ತೋರಲಾಗುತ್ತಿತ್ತು (ಯಾಜಕಕಾಂಡ 4:1-12; 5:14-16; 15:27-29). ಹೇಗೂ, ಉದ್ದೇಶಪೂರ್ವಕವಾದ ಅವಿಧೇಯತೆಯಿಂದ ಪಾಪ ಮಾಡಿದ ಸಂದರ್ಭದಲ್ಲಿ ನಿಜವಾದ ಪರಿಹಾರೋಪಾಯವು ಇರಲಿಲ್ಲ (ನೋಡಿರಿ ಅರಣ್ಯಕಾಂಡ 14:29-31; 15:30, 31; cf. ಇಬ್ರಿಯ 10:26-29). ಅಲ್ಲದೆ ಶಿಕ್ಷೆಯು ಅಜ್ಞಾನಿಗಳಿಗೂ ಸಿಕ್ಕುತ್ತದೆ, ಅವರಿಗೆ ತಮ್ಮ ನಾಶನದಲ್ಲಿರುವ ಸ್ಥಿತಿಯ ಬಗ್ಗೆ ಅರುಹು ಇಲ್ಲದಿದ್ದಾಗ್ಯೂ ಅವರಿಗೆ ದಂಡನೆಯಾಗುವದು (ನೋಡಿರಿ ಲೂಕ 12:47, 48). ಹೇಗೂ, "ಕ್ರಿಸ್ತನು ಸಕಲ ಪಾಪಗಳಿಗೆ, ಸ್ವಯಂಪ್ರೇರಿತ ಮತ್ತು ಸ್ವಯಂಪ್ರೇರಿತವಲ್ಲದ ಎರಡೂ ಪಾಪಗಳಿಗೆ ಪರಿಹಾರವನ್ನು ಮಾಡಿದನು."[9]

"ಜ್ಞಾನವಿಲ್ಲದವರು" ಎಂಬುದರ ಮೂಲಕ, ಯೆಹೂದ್ಯರ ತಾತ್ಪರ್ಯವು ಗೊತ್ತಿರದ ಯಾವದೋ ಒಂದು ಎಂಬುದಕ್ಕಿಂತಲೂ ಅಧಿಕವಾಗಿತ್ತು: "ಅವುಗಳಲ್ಲಿ ಉಪೇಕ್ಷೆಯಿಂದ ಮಾಡಲ್ಪಟ್ಟ ಪಾಪಗಳು ಅಥವಾ ಅವುಗಳ ನಿರ್ದಿಷ್ಟವಾದ ಸ್ವಭಾವವನ್ನು ತಿಳಿಯದೆ ಮಾಡಿರುವ ಪಾಪಗಳು ಸೇರಿದ್ದವು. ಅಲ್ಲದೆ ಅವುಗಳಲ್ಲಿ ಕಾಮಾಭಿಲಾಷೆಯಿಂದ ಅಥವಾ ಅತ್ಯಂಥ ದೊಡ್ಡ ಶೋಧನೆಯ ಕ್ಷಣದಲ್ಲಿ ಮಾಡಿರುವ ಪಾಪಗಳು ಸಹ ಸೇರಿದ್ದವು."[10]

ಪಾಪವು "ಅಜ್ಞಾನದಿಂದ" ಮಾಡಲ್ಪಟ್ಟಿತೋ ಇಲ್ಲವೋ ಎಂಬುದನ್ನು ದೇವರೊಬ್ಬನೆ ನಿರ್ಧರಿಸಬಲ್ಲನು. ಕರ್ತನು ಮಾಡಿದ ಅದ್ಭುತಗಳನ್ನು ಕಂಡಿದ್ದ ಯೆಹೂದ್ಯರು "ತಾವು ಏನು ಮಾಡುತ್ತೇವೆಂಬುದನ್ನು ಅರಿಯರು" ಎಂದು ವರ್ಗೀಕರಿಸಲ್ಪಡುವದಕ್ಕೆ ಎಂಬುದನ್ನು ಅರ್ಥಮಾಡಿಕೊಳ್ಳುವದು ನಮಗೆ ಕಷ್ಟಕರವಾಗಬಹುದು (ಲೂಕ 23:34), ಆದರೆ ಯೇಸು ಅವರನ್ನು "ಜ್ಞಾನವಿಲ್ಲದವರ" ವರ್ಗಕ್ಕೆ ಸೇರಿಸಿದನು. ಅವರು ಆಗಲೂ ದೇವರಿಂದ ಏರ್ಪಡಿ

ಸಲ್ಪಟ್ಟಿರುವ ದಾರಿಯಲ್ಲಿ ಕ್ಷಮಿಸಲ್ಪಡುವದಕ್ಕೆ ಸಾಧ್ಯವಿರುತ್ತದೆ. ಸ್ವಭಾವಿಕವಾಗಿಯೇ, ಪಶ್ಚಾತ್ತಾಪವು ಅವಶ್ಯಕವಾದದ್ದು. "ಸಹೋದರರೇ, ನಾವೇನು ಮಾಡಬೇಕು?" ಎಂದು ಕೇಳಿದಂತಹ ಕರ್ತನನ್ನು ಶಿಲುಬೆಗೆ ಹಾಕಿದವರಿಗೆ ಪೇತ್ರನು ಇದನ್ನೇ ಘೋಷಣೆ ಮಾಡಿದ್ದನು (ಅಪೊಸ್ತಲರ ಕೃತ್ಯಗಳು 2:36-38).

ಆರೋನನು ತನಗೋಸ್ಕರವೂ ಜನರಿಗೋಸ್ಕರವೂ ಯಜ್ಞಗಳನ್ನು ಅರ್ಪಿಸಬೇಕಾ ಗಿತ್ತು (ಯಾಜಕಕಾಂಡ 9:7; 16:11, 17). ಕ್ರಿಸ್ತನು ತನ್ನ ಪಾಪಗಳಿಗೋಸ್ಕರ ಯಜ್ಞವನ್ನು ಅರ್ಪಿಸಿಕೊಳ್ಳುವ ಅಗತ್ಯವಿರಲಿಲ್ಲ ಎಂಬುದರಲ್ಲಿ ಆತನ ಶ್ರೇಷ್ಠತೆಯು ತೋರಿ ಬರುತ್ತದೆ (ಇಬ್ರಿಯ 5:3; 7:27), ಯಾಕೆಂದರೆ ಆತನಲ್ಲಿ ಯಾವ ಪಾಪವೂ ಇರಲಿಲ್ಲ (1 ಪೇತ್ರ 2:21, 22; ನೋಡಿರಿ ಯೆಶಾಯ 53:9).

**ವಚನ 4.** ಲೇಖಕನು ಮುಂದುವರೆಸಿ ಹೀಗೆ ಹೇಳುತ್ತಾನೆ, **ಇದಲ್ಲದೆ ಯಾವನೂ ತನ್ನಷ್ಟಕ್ಕೆ ತಾನೇ ಈ ಗೌರವವನ್ನು ವಹಿಸಿಕೊಳ್ಳುವದೆ ದೇವರಿಂದ ನೇಮಿಸಲ್ಪಟ್ಟು ವಹಿಸಿಕೊಳ್ಳುತ್ತಾನೆ.** ಮಹಾಯಾಜಕನು ದೈವಿಕ ಕರೆಯೊಂದಿಗೆ ಆರಿಸಿಕೊಳ್ಳಲ್ಪಡತಕ್ಕ ದ್ದಾಗಿತ್ತು, ಮಹಾಯಾಜಕನಾಗಿ, ಯೇಸು ದೇವರ ನೇಮಕವನ್ನು ಅಂಗೀಕರಿಸಿಕೊಂಡಿ ದ್ದನು. ಆತನು ತನ್ನಷ್ಟಕ್ಕೆ ತಾನೇ ಅಥವಾ ಮನುಷ್ಯನಿಂದ ಆರಿಸಿಕೊಂಡಿರಲಿಲ್ಲ; ಆತನು ದೇವರಿಂದ ಆರಿಸಿಕೊಳ್ಳಲ್ಪಟ್ಟಿದ್ದನು.

ಈ ಯೋಚನೆಯು ಅಂದಿನ ನ್ಯಾಯಸಮ್ಮತವಲ್ಲದೆ ನೇಮಕಗೊಂಡಿದ್ದ ಮಹಾಯಾಜಕರಿಗೆ ಒಂದು ಪರೋಕ್ಷವಾದ ಖಂಡನೆಯಾಗಿದ್ದಿರಬಹುದಾಗಿದೆ, ಯಾಕೆಂದರೆ ಅವರು ಬಹಳಷ್ಟು ಸಾರಿ ಹೆರೋದ ಅಥವಾ ರೋಮನ್ ಅಧಿಕಾರಿಗಳಿಂದ ನೇಮಕ ಮಾಡಲ್ಪಟ್ಟಿರುತ್ತಿದ್ದರು.[11] ಅವರು ಕೆಲವು ಸಾರಿ ಆ ಹುದ್ದೆಯನ್ನು ಪಡೆದುಕೊಳ್ಳುವದಕ್ಕೆ ಲಂಚವನ್ನು ಕೊಡುತ್ತಿದ್ದರು, ಮತ್ತು ಅನೇಕರು ಅವರ ಭ್ರಷ್ಟಾಚಾರಕ್ಕೆ ಪರಿಚಿತವಾಗಿದ್ದರು. ಮುಂಚಿನ ದಿನಗಳಲ್ಲಿರುತ್ತಿದ್ದ ನಿಜವಾದ ಮಹಾಯಾಜಕರ ವಿಷಯದಲ್ಲಿ ಇದು ಹಾಗಿರಲಿಲ್ಲ. ದಾವೀದನಿಗೆ ಸಹಾಯವನ್ನು ಒದಗಿಸಿದ ಎಬ್ಯಾತಾರನಂತಹ ಕೆಲವರು ಅತ್ಯಂಥ ದೊಡ್ಡ ಧೈರ್ಯ ಮತ್ತು ಪ್ರಮಾಣಿಕತೆಯನ್ನು ತೋರಿಸಿದ್ದರು (1 ಸಮುವೇಲ 23:9-14). ಈ ವರ್ಗದ ಮೂಲಜನಕನಾದ ಆರೋನನು, ಕನಿಷ್ಠ ಭಾಗಶಃ ಆತನ ಸನ್ನಡತೆ ಮಾತ್ರವಲ್ಲದೆ ಮೋಶೆಯೊಂದಿಗಿದ್ದ ಸಂಬಂಧದ ಕಾರಣದಿಂದ ಆರಿಸಿಕೊಂಡವನಾಗಿರಬಹುದಾಗಿದೆ.

ಮಹಾಯಾಜಕರು ದೇವರಿಂದ ಆರಿಸಿಕೊಳ್ಳಲ್ಪಟ್ಟು ಆತನಿಂದ ನೇಮಿಸಲ್ಪಟ್ಟಿರುತ್ತಾರೆಂಬುದು ಯಾಜಕರಾಗಿ ಸೇವೆ ಮಾಡಬೇಕೆಂದು ಅಪೇಕ್ಷಿಸಿದ ಅನರ್ಹರನ್ನು ದಂಡಿಸುವ ಮೂಲಕ ಖಡಾಖಂಡಿತವಾಗಿ ಕಲಿಸಲ್ಪಟ್ಟಿತು. ಅರಣ್ಯಕಾಂಡ 16:1-35ರ ವಾಕ್ಯಭಾಗವು ಯಾಜಕರಾಗಿ ವರ್ತಿಸುವದಕ್ಕೆ ಪ್ರಯತ್ನಿಸಿದ ಮೂರು ವ್ಯಕ್ತಿಗಳ ಕುರಿತಾಗಿ ಹೇಳುತ್ತದೆ ಮತ್ತು ಅವರನ್ನು ಕಠಿಣವಾಗಿ ದಂಡಿಸಲಾಯಿತು. ಸೌಲನು ಒಬ್ಬ ಯಾಜಕನಂತೆ ಕೆಲಸ ಮಾಡುವದಕ್ಕೆ "ಮುಂಗೊಂಡೆನು" ಎಂದು ಹೇಳಿಕೊಂಡನು (1 ಸಮುವೇಲ 13:12), ಆದರೆ ಕ್ರಮೇಣದಲ್ಲಿ ಅದಕ್ಕೆ ದಂಡನೆಯಾಗಿ ತನ್ನ ಪ್ರಾಣವನ್ನು ಮತ್ತು ಆತನ ರಾಜ್ಯವನ್ನು ಕಳಕೊಂಡನು. ಅರಸನಾದ ಉಜ್ಜೀಯನು ದೇವಾಲಯದಲ್ಲಿ ಧೂಪವನ್ನು ಅರ್ಪಿಸುವದಕ್ಕೆ ಪ್ರಯತ್ನಿಸಿದನು, ಮತ್ತು ಆತನಿಗೆ ದಂಡನೆಯಾಗಿ ಕುಷ್ಠರೋಗವು ಬಂದಿತು (2 ಪೂರ್ವಕಾಲವೃತ್ತಾಂತ 26:16-21).

"ದೇವರಿಂದ ಕರೆಯಲ್ಪಡುವಿಕೆ"ಯ ಅಗತ್ಯತೆಯು ಇಂದು ಸಭೆಯಲ್ಲಿ ಬೋಧಕರನ್ನು ಮತ್ತು ಹಿರಿಯರನ್ನು ಆರಿಸಿಕೊಳ್ಳುವಿಕೆಯೊಂದಿಗೆ ಯಾವ ಸಂಬಂಧವನ್ನೂ ಹೊಂದಿರುವದಿಲ್ಲ. ಅಲ್ಲದೆ

ಈ ದಿನಗಳಲ್ಲಿ ತಮಗೆ "ಆಂತರ್ಯದಲ್ಲಿ ಕರೆಯಲ್ಪಟ್ಟ ಅನಿಸಿಕೆ" ಉಂಟಾಯಿತೆಂದು ಕೆಲವರು ಹೇಳಿಕೊಳ್ಳುವದಕ್ಕೂ ಅದು ಯಾವದೇ ಸಂಬಂಧವನ್ನು ಹೊಂದಿಲ್ಲ. ಅಪೊಸ್ತಲರ ದಿನಗಳಲ್ಲಿ, ಹಿರಿಯರು ಮತ್ತು ಸುವಾರ್ತಿಕರು ನೇರವಾಗಿ ಪವಿತ್ರಾತ್ಮನಿಂದ ಆರಿಸಿಕೊಳ್ಳಲ್ಪಟ್ಟು ನೇಮಿಸಲ್ಪಡಬಲ್ಲವರಾಗಿದ್ದರು, ಅದು ಅಪೊಸ್ತಲರ ಕೃತ್ಯಗಳು 20:28ರಲ್ಲಿ ಸೂಚಿಸಲ್ಪಟ್ಟಿರುತ್ತದೆ (ಅಲ್ಲದೆ ಅಪೊಸ್ತಲರ ಕೃತ್ಯಗಳು 6:1-7; 13:1-3ನ್ನು ಸಹ ನೋಡಿರಿ).[12] ಹಿರಿಯರಿಗಾಗಿ ಪವಿತ್ರಾತ್ಮನಿಂದ ಕೊಡಲ್ಪಟ್ಟ ಅರ್ಹತೆಗಳು 1 ತಿಮೊಥೆ 3:1-7ರಲ್ಲಿ ಮತ್ತು ತೀತನಿಗೆ 1:5-9ರಲ್ಲಿ ದಾಖಲಿಸಲ್ಪಟ್ಟಿರುತ್ತವೆ. ಪವಿತ್ರಾತ್ಮನು ಕೇಳುವ ಅರ್ಹತೆಗಳನ್ನು ವ್ಯಕ್ತಿಗಳು ಸಂಧಿಸುವವರಾಗಿದ್ದರೆ, ಅವರನ್ನು ಹುದ್ದೆಗೆ ನೇಮಕ ಮಾಡಲಾಗುತ್ತಿತ್ತು. ಇಂದು ಸಭೆಯಲ್ಲಿ ಅದೇ ರೂಢಿಯನ್ನು ಅನುಸರಿಸತಕ್ಕದ್ದು.

ಯಾವದೇ ಮಾನವ ಯಾಜಕನಿಗಿಂತಲೂ ಕ್ರಿಸ್ತನು ಸರ್ವೋಚ್ಚತೆ ಮತ್ತು ಶ್ರೇಷ್ಠತೆಯನ್ನು ತೋರಿಸುವದಕ್ಕಾಗಿ ಆರೋನನ ಯಾಜಕತ್ವದೊಂದಿಗೆ ಕ್ರಿಸ್ತನ ಯಾಜಕತ್ವವನ್ನು ಹೋಲಿಸಿ ನೋಡುವದು ಅವಶ್ಯಕವಾಗಿತ್ತು. ಆತನು ನಮ್ಮ ಮಧ್ಯಸ್ಥನು, ಪರಲೋಕದಲ್ಲಿರುವ ನಮ್ಮ ಅನುತಾಪ ಪಡುವವನು, ಪಾಪನಿವಾರಣೆಗಾಗಿ ನಮ್ಮ ಅಂತಿಮ ಯಜ್ಞವು, ಮತ್ತು ನಮ್ಮ ಸೇವೆಗಾಗಿ ದೇವರಿಂದ ನೇಮಿಸಲ್ಪಟ್ಟವನು ಆಗಿದ್ದಾನೆ. ನಮಗಿರುವದರಲ್ಲಿ ಸಂತೋಷ ಪಡೋಣ ಮತ್ತು ನಾವು ನಂಬಿಕೆಯಿಂದ ಮಾಡಿದ ಪ್ರತಿಜ್ಞೆಯನ್ನು ಹಿಡಿದುಕೊಂಡಿರೋಣ.

## ನಮ್ಮ ಮಹಾಯಾಜಕನಾಗಿರುವದಕ್ಕೆ ಕ್ರಿಸ್ತನ ಅರ್ಹತೆಗಳು (5:5-10)

**5ಹಾಗೆಯೇ ಕ್ರಿಸ್ತನು ಸಹ ತನ್ನನ್ನು ಘನಪಡಿಸಿಕೊಂಡು ತನ್ನನ್ನು ಮಹಾಯಾಜಕನನ್ನಾಗಿ ಮಾಡಿಕೊಳ್ಳಲಿಲ್ಲ; ಆದರೆ–**

**ನನಗೆ ನೀನು ಮಗನು; ನಾನೇ ಈಹೊತ್ತು ನಿನ್ನನ್ನು ಪಡೆದಿದ್ದೇನೆ**

**ಎಂದು ಹೇಳಿದಾತನೇ 6ಈ ಗೌರವವನ್ನು ಆತನಿಗೆ ಕೊಟ್ಟನು. ಆತನು ಇನ್ನೊಂದು ಸ್ಥಳದಲ್ಲಿ–**

**ನೀನು ಸದಾಕಾಲವೂ ಮೆಲ್ಕಿಜೆದೇಕನ ತರ ಹದ ಯಾಜಕನು**

**ಎಂದು ಹೇಳುತ್ತಾನೆ. 7ಕ್ರಿಸ್ತನು ತಾನು ಭೂಲೋಕದಲ್ಲಿದ್ದಾಗ ಮರಣಕ್ಕೆ ತಪ್ಪಿಸಿ ಕಾಪಾಡ ಶಕ್ತನಾಗಿರುವಾತನಿಗೆ ಬಲವಾಗಿ ಕೂಗುತ್ತಾ ಕಣ್ಣೀರನ್ನು ಸುರಿಸುತ್ತಾ ಪ್ರಾರ್ಥನೆ ವಿಜ್ಞಾಪನೆಗಳನ್ನು ಸಮರ್ಪಿಸಿ ದೇವರ ಮೇಲಣ ಭಯಭಕ್ತಿಯ ನಿಮಿತ್ತ ಕೇಳಲ್ಪಟ್ಟನು. 8ಹೀಗೆ ಆತನು ಮಗನಾಗಿದ್ದರೂ ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು. 9-10ಇದಲ್ಲದೆ ಆತನು ಸಿದ್ಧಿಗೆ ಬಂದು ದೇವರಿಂದ ಮೆಲ್ಕಿಜೆದೇಕನ ತರಹದ ಮಹಾಯಾಜಕನೆನಿಸಿಕೊಂಡವನಾಗಿ ತನಗೆ ವಿಧೇಯರಾಗಿರುವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಕಾರಣನಾದನು.**

5:5-10ರಲ್ಲಿ, ನಾವು ಶಾಸ್ತ್ರಗಳಲ್ಲಿ ವಿರಳವಾಗಿ ಕಾಣುವಂತಹ ಕ್ರಿಸ್ತನ ಶ್ರೇಷ್ಠತೆಯ ಕುರಿತಾದ ಒಂದು ಭವ್ಯವಾದ ಚಿತ್ರಣವನ್ನು ಎದುರುಗೊಳ್ಳುತ್ತೇವೆ. ಈ ಚಿತ್ರಣವನ್ನು ಪರಿಶೀಲಿಸೋಣ ಮತ್ತು ವಿಚಾರಪೂರ್ವಕವಾಗಿ ಅದನ್ನು ಜೀರ್ಣಿಸಿಕೊಳ್ಳೋಣ.

**ವಚನ 5.** ನಾವು ಕಾಣುವ ಮೊದಲ ಸತ್ಯವೆಂದರೆ **ಕ್ರಿಸ್ತನು ತನ್ನನ್ನು ಘನಪಡಿಸಿಕೊಳ್ಳಲಿಲ್ಲ** ಎಂಬದೆ. "ಕ್ರಿಸ್ತನು ತನ್ನನ್ನು ಘನಪಡಿಸಿಕೊಳ್ಳಲಿಲ್ಲ" ಎಂದು ನಿರ್ಬಂಧಗೊಳಿಸುವ ಮೂಲಕ ಲೇಖಕನು ಬಹುಶಃ ಇತ್ತೀಚಿಗೆ ತಮ್ಮನ್ನು ತಾವೇ ನೇಮಿಸಿಕೊಂಡಿದ್ದ ಅಥವಾ ರಾಜಕೀಯ ಪ್ರಭಾವ ಬಳಸಿಕೊಂಡು ತಮ್ಮ ನೇಮಕವನ್ನು ವ್ಯವಸ್ಥೆ ಮಾಡಿಕೊಂಡಿದ್ದವರ ಬಗ್ಗೆ ಇನ್ನೊಂದು

ಮಾರ್ಮಿಕವಾದ ಟೀಕೆಯನ್ನು ಮುಂದಿಡುತ್ತಿರಬಹುದಾಗಿದೆ.

4 ಮತ್ತು 5 ವಚನಗಳಲ್ಲಿ, ನಾವು "ಘನ" ಮತ್ತು "ಗೌರವ" ನಡುವೆ ಒಂದು ತದ್ವಿರುದ್ಧತೆಯನ್ನು ನೋಡುತ್ತೇವೆ. ಲೇಖಕನು ಮಹಾಯಾಜಕನಿಗೆ "ಗೌರವ"ವು (ವ. 4) ಕೊಡಲ್ಪಟ್ಟಿತೆಂದು ಹೇಳಿದ್ದನು, ಆದರೆ ಕ್ರಿಸ್ತನಿಗೆ "ಘನ"ವು ಕೊಡಲ್ಪಟ್ಟಿತೆಂದು ಹೇಳುತ್ತಾನೆ (ವ. 5). ಎರಡೂ ಪದಗಳು ಅನೇಕ ಸಾರಿ ಪರ್ಯಾಯ ಪದಗಳಾಗಿರುತ್ತವಾದರೂ, "ಘನ"ವು "ಗೌರವ"ವನ್ನು ಮೀರಿದ್ದಾಗಿದೆ. "ಘನಪಡಿಸಲ್ಪಡುವಿಕೆ"ಯಲ್ಲಿ ಒಬ್ಬನು "ಗೌರವ"ವನ್ನು ದಾಟಿ ದೈವಿಕ ಸನ್ನಿಧಿಯಲ್ಲಿ ಪ್ರವೇಶಿಸುವವನಾಗಿರುತ್ತಾನೆ, ಇದು ಕ್ರಿಸ್ತನು ತನ್ನ ಉನ್ನತಕ್ಕೇರಿಸಲ್ಪಡುವ ಮೂಲಕ ನೆರವೇರಿಸಲ್ಪಟ್ಟ ಒಂದು ವಾಸ್ತವಾಂಶವಾಗಿದೆ. ಅನೇಕ ಯೆಹೂದ್ಯರು ಯೇಸುವಿನ ಕುರಿತು ಆತನು ನಿರಾಧಾರವಾಗಿ ರಾಜವಂಶಸ್ಥನ ಹಕ್ಕು ಸಾಧಿಸುತ್ತಿದ್ದಾನೆಂದು ಯೋಚಿಸುವವರಾದರು, ಆದರೆ ಆತನು ದಾವೀದನ ಕುಮಾರನಾದ ಮೆಸ್ಸೀಯನು ಎಂಬುದನ್ನು ನಂಬುವವರಾಗಲಿಲ್ಲ.

"ಕ್ರಿಸ್ತನು" ಅಥವಾ "ಅಭಿಷಿಕ್ತನು" ಎಂಬ ಪದವು, 5ನೇ ವಚನದಲ್ಲಿ ಆ ಹುದ್ದೆಗೆ ಆತನ ವಿಶೇಷವಾದ ನೇಮಕವನ್ನು ಸೂಚಿಸುವದಕ್ಕೆ ಬಳಸಲ್ಪಟ್ಟಿದೆ. ಸ್ಪಷ್ಟವಾಗಿರುವಂತೆ ಒಬ್ಬನೇ "ಅಭಿಷಿಕ್ತನು" ("ಕ್ರಿಸ್ತನು") ಎಂಬದಾಗಿ ಅಲ್ಲಿ ಇಂಗಿತವಿರುತ್ತದೆ. ಕೆಲವು ಯೆಹೂದ್ಯರು ಇಬ್ಬರು ಮೆಸ್ಸೀಯರ ಬರೋಣವನ್ನು ಎದುರುನೋಡಿದ್ದರು, ಅರಸನಾಗಲಿದ್ದ ಒಬ್ಬ ಮೆಸ್ಸೀಯನು ಮತ್ತು ಮತ್ತೊಬ್ಬನು ಒಬ್ಬ ಯಾಜಕನಾಗಿ ಸೇವೆ ಸಲ್ಲಿಸುವ ಮೆಸ್ಸೀಯನು.[13] ಹೇಗೂ, ಅರಸನು ಮತ್ತು ಯಾಜಕನಾಗಿ ಕ್ರಿಸ್ತನು ಎರಡೂ ಹುದ್ದೆಗಳನ್ನು ವಹಿಸಿಕೊಂಡಿದ್ದಾನೆ.

ಕ್ರಿಸ್ತನ ಪುತ್ರತ್ವವನ್ನು ತೋರಿಸುವದಕ್ಕೆ ಇಬ್ರಿಯ 1:5ರಲ್ಲಿ ಕೀರ್ತನೆ 2:7ರಿಂದ ಒಂದು ಉಲ್ಲೇಖನವನ್ನು – **ನನಗೆ ನೀನು ಮಗನು; ನಾನೇ ಈಹೊತ್ತು ನಿನ್ನನ್ನು ಪಡೆದಿದ್ದೇನೆ** – ಬಳಸಲಾಗಿರುತ್ತದೆ. ಆತನು ತನ್ನ ಉನ್ನತವಾದ ಹುದ್ದೆಗೆ ದೈವಿಕವಾಗಿ ನೇಮಿಸಲ್ಪಟ್ಟಿದ್ದಾನೆಂಬುದನ್ನು ತೋರಿಸುವದಕ್ಕೆ ಅದೇ ಉಲ್ಲೇಖನವು 5:5ರಲ್ಲಿ ಬಳಸಲ್ಪಟ್ಟಿರುವದನ್ನು ಕಾಣುತ್ತೇವೆ. ಯೋಹಾನ 8:42ರಲ್ಲಿ ತಂದೆಯು ನನ್ನನ್ನು ಘನಪಡಿಸಿದ್ದಾನೆಂದು ಯೇಸು ಹೇಳಿಕೊಂಡನು. ಆತನು ತನ್ನ ಸ್ತುತಿಯನ್ನು ತಾನೇ ಹುಡುಕಲಿಲ್ಲ, ಆತನಿಗೆ ತನ್ನ ಸ್ವಾಭಿಮಾನವನ್ನು ಎತ್ತರಕ್ಕೇರಿಸಿಕೊಳ್ಳುವ ಯಾವದೇ ಅಗತ್ಯತೆಯೂ ಆತನಿಗಿರಲಿಲ್ಲ. ಆತನು ಪರಲೋಕದಲ್ಲಿಯೇ ಉಳಿದುಕೊಳ್ಳುವ ಮೂಲಕ ತನ್ನ ಘನತೆ ಹಾಗೂ ಗೌರವಗಳನ್ನು ಉಳಿಸಿಕೊಂಡಿರಬಹುದಿತ್ತು, ಆದರೆ ಭೂಮಿಯ ಬಡತನಕ್ಕಾಗಿ ಮತ್ತು ಒಂದು ದುರ್ಬಲ ಮಾನವ ಶರೀರವನ್ನು ಹೊಂದಿಕೊಳ್ಳುವದಕ್ಕಾಗಿ ಅಧೀನಪಡಿಸಿಕೊಳ್ಳಲು ಆ ನಿವಾಸವನ್ನು ತೊರೆದನು (ಫಿಲಿಪ್ಪಿ 2:5-11). ಕ್ರಿಸ್ತನು ಪುತ್ರತ್ವವು ಲೂಕ 3:38ರಲ್ಲಿ ಆದಾಮನಿಗೆ ಅನ್ವಯಿಸಲ್ಪಟ್ಟಿರುವ ಪುತ್ರತ್ವವನ್ನು ಮೀರಿದ್ದಾಗಿದೆ; ಯಾಕೆಂದರೆ ಆದಾಮನು ಕೇವಲ ಮಾನವನು ಮತ್ತು ತಪ್ಪುಮಾಡಬಹುದಾದವನು ಆಗಿದ್ದರೆ, ಕ್ರಿಸ್ತನು ದೈವಿಕ ಕುಮಾರನಾಗಿದ್ದಾನೆ. ಆದಾಮನು ಪಾಪ ಮಾಡುವದಕ್ಕೆ ಆರಿಸಿಕೊಂಡನು ಮತ್ತು ವಿಶ್ವವ್ಯಾಪಿ ಮರಣಕ್ಕೆ ಕಾರಣನಾದನು; ಕ್ರಿಸ್ತನಾದರೋ ವಿಧೇಯನಾಗುವದನ್ನು ಆರಿಸಿಕೊಂಡನು ಮತ್ತು ನಿತ್ಯಜೀವವನ್ನು ಅಂಗೀಕರಿಸಿಕೊಳ್ಳುವವರಿಗೆಲ್ಲಾ ನಿತ್ಯಜೀವವನ್ನು ಕೊಡುವವನಾದನು.

**ವಚನ 6.** ಯೇಸುವನ್ನು ಮಗನು ಎಂದು ಘೋಷಿಸಿದ ಅದೇ ಸ್ವರವು ಆತನನ್ನು **ಮೆಲ್ಕಿಜೆದೇಕನ ತರಹದ ಯಾಜಕನು** ಎಂಬದಾಗಿ ಗುರುತಿಸುತ್ತದೆ. ಈ ವಚನವು ಕೀರ್ತನೆ 110:4ರ ಹೇಳಿಕೆಯ ಆಧಾರಗೊಂಡಿರುತ್ತದೆ. ಇಬ್ರಿಯರಿಗೆ ಪತ್ರಿಕೆಯನ್ನು ಮೊದಲ ಬಾರಿಗೆ, ಮೆಸ್ಸೀಯನ ಯಾಜಕತ್ವವು ಮೆಲ್ಕಿಜೆದೇಕನ ತರಹದ್ದೆಂಬ ಭಾವನೆಯು ಪರಿಚಯಿಸಲ್ಪ ಡುತ್ತದೆ.

ಕ್ರಿಸ್ತನು ಮೆಲ್ಕಿಜೆದೇಕನ ತರಹಕ್ಕನುಗುಣವಾಗಿ ಆರಿಸಿಕೊಳ್ಳಲ್ಪಟ್ಟನು. ಆತನು ಒಬ್ಬ ಯಾಜಕನಾಗಿ ನೇಮಿಸಲ್ಪಡುವದಕ್ಕೆ ಪ್ರಚಾರಕಾರ್ಯವನ್ನು ಕೈಕೊಳ್ಳಬೇಕಾಗಿರಲಿಲ್ಲ.

5 ಮತ್ತು 6 ವಚನಗಳು ವಾಸ್ತವದಲ್ಲಿ ಕೀರ್ತನೆಗಳಿಂದ ಮೂರು ಉಲ್ಲೇಖನಗಳನ್ನು ಒಳಗೊಂಡಿರುತ್ತದೆ. ಕೀರ್ತನೆ 110:1, "ಯೆಹೋವನು ನನ್ನ ಒಡೆಯನಿಗೆ – ನಾನು ನಿನ್ನ ವಿರೋಧಿಗಳನ್ನು ನಿನಗೆ ಪಾದಪೀಠವಾಗ ಮಾಡುವ ತನಕ ನನ್ನ ಬಲಗಡೆಯಲ್ಲಿ ಕೂತುಕೊಂಡಿರು ಎಂದು ನುಡಿದನು" ಎಂದು ಹೇಳುವದಾಗಿದ್ದು 2:7 ಮತ್ತು 110:4ರಲ್ಲಿನ ಉಲ್ಲೇಖನಗಳಿಗೆ ಸೇತುವೆಯಾಗಿರುತ್ತದೆ. ಆದಿ ಸಭೆಯು ಕ್ರಿಸ್ತನ ಪರಲೋಕಾರೋಹಣ ಮತ್ತು ಮಹಿಮಕರಣದ ಸಂಬಂಧದಲ್ಲಿ ಆಗಾಗ್ಗೆ ಕೀರ್ತನೆ 110:1ನ್ನು ಬಳಸುತ್ತಿತ್ತು. ಹೇಗೂ, ಈ ವಿಶಿಷ್ಟ ಮಗನು ಮತ್ತು ಎದುರುನೋಡಲ್ಪಟ್ಟಿದ್ದ ಯಾಜಕನು ಒಂದೇ ಮತ್ತು ಒಬ್ಬರೇ ಆಗಿದ್ದಾರೆ. "ಆತನು ಹೇಳುತ್ತಾನೆ" ಎಂಬದರಲ್ಲಿನ "ಆತನು" (ವ. 6) ಸ್ಪಷ್ಟವಾಗಿ ದೇವರೇ ಆಗಿದ್ದಾನೆ ಮತ್ತು ಆತನು ಅಧಿಕಾರದಿಂದ ಉಲ್ಲೇಖಿಸಲ್ಪಟ್ಟಿದ್ದಾನೆ. ಕೀರ್ತನೆ 110 ಕ್ರೈಸ್ತರಿಂದ ನಿಯತಕ್ರಮವಾಗಿ ಸಾಕ್ಷಿಯ ವಾಕ್ಯವಾಗಿ ಬಳಸಲ್ಪಡುತ್ತಿತ್ತು ಮತ್ತು ಸಾಮಾನ್ಯವಾಗಿ ಯೆಹೂದ್ಯರಿಂದ ಅದೊಂದು ಮೆಸ್ಸೀಯನಿಗೆ ಸಂಬಂಧಿತ ಕೀರ್ತನೆ ಎಂದು ಅಂಗೀಕರಿಸಿಕೊಳ್ಳಲ್ಪಟ್ಟಿರಬೇಕು.[14] ಹೇಗೂ, ಇಬ್ರಿಯರಿಗೆ ಪತ್ರಿಕೆಯ ಲೇಖಕನು "ಮಗ"ನನ್ನು ಮತ್ತು ಮೆಲ್ಕಿಜೆದೇಕನ ಯಾಜಕತ್ವವನ್ನು ಕ್ರಿಸ್ತನ ಯಾಜಕತ್ವದೊಂದಿಗೆ ಗುರುತಿಸುವದರಲ್ಲಿ ಮೊದಲಿಗನಾಗಿದ್ದನೆಂದು ತೋರುತ್ತದೆ.[15]

"ಸದಾಕಾಲವೂ" ಎಂಬುದು ಇನ್ನಷ್ಟು ಉತ್ತಮಪಡಿಸಿಕೊಳ್ಳಲು ಸಾಧ್ಯವಿಲ್ಲದ ಪರಿಪೂರ್ಣತೆಯನ್ನು ಸೂಚಿಸುವದಾಗಿದೆ. ಆದದರಿಂದ, ಕ್ರಿಸ್ತನ ಯಾಜಕತ್ವವು ಆರೋನನ ಯಾಜಕತ್ವದಂತೆ ಹಳೆಯದ್ದೆಂದು ಬದಲಾಯಿಸಲ್ಪಡಲಾರದ್ದಾಗಿದೆ. ಹಳೆಯ ಒಡಂಬಡಿಕೆಯಲ್ಲಿ "ಸದಾಕಾಲವೂ" ಎಂಬ ಪದವು ಅನೇಕ ಸಾರಿ "ಕಾಲವು ಇರುವಷ್ಟು ತನಕ" ಎಂದರ್ಥವನ್ನು ಕೊಡುತ್ತದೆ. ವಿಮೋಚನಕಾಂಡ 12:14ನೇ ವಚನವು ಪಸ್ಕ ಹಬ್ಬವು "ಶಾಶ್ವತನಿಯಮದಂತೆ" ಇರಬೇಕೆಂದು ಸೂಚಿಸುತ್ತದೆ (KJV). ಅನಂತರದಲ್ಲಿ ಸಬ್ಬತ್ ದಿನವು ಸಹ "ಶಾಶ್ವತವಾಗಿ" ಆಚರಿಸಬೇಕೆಂದು ಹೇಳಲ್ಪಟ್ಟಿತು (ವಿಮೋಚನಕಾಂಡ 31:16, 17; KJV). ಆರೋನನ ಯಾಜಕತ್ವವು "ಶಾಶ್ವತವಾಗಿರುವ"ದಾಗಿತ್ತು (KJV), ಆದರೆ "ಅವರ ಸಂತತಿಯವರಿಗೂ" ಎಂಬ ಮಾತಿನಿಂದ ಅರ್ಹಗೊಳಿಸಲ್ಪಟ್ಟಿದೆ (ವಿಮೋಚನಕಾಂಡ 40:15).[16] ಕ್ರಿಸ್ತನ ಯಾಜಕತ್ವವು ಕ್ರೈಸ್ತ ಯುಗದ ವರೆಗೆಲ್ಲಾ ಉಳಿಯುವದು, ನಂತರ ಆತನು ರಾಜ್ಯವನ್ನು ಪುನಃ ತಂದೆಗೆ ಒಪ್ಪಿಸಿ ಕೊಡುವನು. ಅದಾದ ನಂತರ, ಆತನು ನಮಗೋಸ್ಕರ ವಿಜ್ಞಾನೆ ಮಾಡುವದನ್ನು ಮುಂದುವರೆಸುತ್ತಾನೆಂಬುದು ಅಸಾಧ್ಯವೆಂದು ತೋರುತ್ತದೆ (1 ಕೊರಿಂಥ 15:24-28). ನಿಶ್ಚಯವಾಗಿಯೂ, ಕ್ರಿಸ್ತನ ಮಹಾಯಾಜಕತ್ವ ಮತ್ತು ಅರಸನಾಗಿ ಮಧ್ಯಸ್ಥಿಕೆಯ ಪಾತ್ರವು ಅನಂತದರಲ್ಲಿ ಅವಶ್ಯಕವಾಗಿರುವದಿಲ್ಲ. ಪರಲೋಕದಲ್ಲಿ ಇನ್ನು ಪಾಪವು ಇರುವದಿಲ್ಲ; ತತ್ಪರಿಣಾಮವಾಗಿ, ನಮಗೆ ಇನ್ನು ಮೇಲೆ ಪಾಪನಿವಾರಣ ಯಜ್ಞ ಅಥವಾ ನಮಗೋಸ್ಕರ ಯೇಸು ವಿಜ್ಞಾಪನೆ ಮಾಡುವದು ಅಗತ್ಯವಿರುವದಿಲ್ಲ (ಪ್ರಕಟನೆ 21:27; ಇಬ್ರಿಯ 7:25).

**ವಚನ 7.** ಕ್ರಿಸ್ತನು ಇನ್ನೂ ಭೂಮಿಯ ಮೇಲಿರುವ ವೇಳೆ, **ಬಲವಾಗಿ ಕೂಗುತ್ತಾ ಕಣ್ಣೀರನ್ನು ಸುರಿಸುತ್ತಾ ಪ್ರಾರ್ಥನೆ ವಿಜ್ಞಾಪಣೆಗಳನ್ನು ಸಮರ್ಪಿಸಿ**ದನು. 5:5-10ರಲ್ಲಿ ಕ್ರಿಸ್ತನ ಶ್ರೇಷ್ಠತೆಯ ಚಿತ್ರಣದಲ್ಲಿರುವ ಆತನ ಕುರಿತಾದ ಎರಡನೆಯ ಸತ್ಯವು ಏನೆಂದರೆ ಆತನು ಬಲವಾಗಿ ಪ್ರಾರ್ಥಿಸಿದನು. 4:14-16ರಲ್ಲಿ, ಕ್ರೈಸ್ತರಿಗೆ ಪ್ರಾರ್ಥಿಸಬೇಕೆಂದು ಕರೆ ನೀಡಲಾಗಿದೆ. 7ನೇ ವಚನವು ನಮಗೆ ಪ್ರಾರ್ಥನೆಗೆ ಒಂದು ಸರ್ವೋಚ್ಛವಾದ ಮಾದರಿಯನ್ನು ಒದಗಿಸುತ್ತದೆ. ಕ್ರಿಸ್ತನು ನಮ್ಮ ಪರವಾಗಿ ತನ್ನ ಪ್ರಾಣವನ್ನು ಅರ್ಪಿಸಿದನಾದರೂ, ಆತನು ಆ ಪ್ರಾರ್ಥನೆಗಳನ್ನು ತನಗೋಸ್ಕರ

ಅರ್ಪಿಸಿಕೊಂಡನು. ಇದು "ಪಾಪಿಗಳಾದ ನಮ್ಮ ಮೇಲೆ ಕ್ರಿಸ್ತನಿಗೆ ಕನಿಕರ ಇರುತ್ತದೋ?" ಎಂಬ ಪ್ರಶ್ನೆಗೆ ಉತ್ತರಿಸಲಾರಂಭಿಸುತ್ತದೆ. "ಮಾಂಸ ಮತ್ತು ರಕ್ತ" ಪರಲೋಕವನ್ನು ಪ್ರವೇಶಿಸಲಾರವು (1 ಕೊರಿಂಥ 15:50), ಮತ್ತು ಆತನು ಭೂಮಿಯ ಮೇಲಿದ್ದ ವೇಳೆಯಲ್ಲಿದ್ದಂತಹ ಬಲಹೀನತೆ ಮತ್ತು ಕುಂದುಗಳನ್ನು ಕ್ರಿಸ್ತನ ಮಹಿಮೆಗೊಂಡ ದೇಹವು ಈಗ ಹೊಂದಿರುವದಿಲ್ಲ (ಫಿಲಿಪ್ಪಿ 3:21). ಆತನು – ಈಗ ಪರಲೋಕದಲ್ಲಿರುವವನಾಗಿ ಸಂಕಷ್ಟ ಮತ್ತು ಬಾಧೆಗಳನ್ನೆಲ್ಲಾ ಹಿಂದಕ್ಕೆ ಬಿಟ್ಟವನಾಗಿರುವಾಗ – ಹೇಗೆ ನಮಗಾಗಿ "ಅನುತಾಪ" ಹೊಂದಿರಬಲ್ಲನು? ಉತ್ತರವೇನೆಂದರೆ ಆತನು ತನ್ನ ಜೀವಿತದ ಅತ್ಯಂಥ ಸಂಕಷ್ಟದ ರಾತ್ರಿಯನ್ನು ಅತ್ಯಂಥ ಪರಿಪೂರ್ಣವಾಗಿ ಜ್ಞಾಪಕದಲ್ಲಿಟ್ಟುಕೊಂಡಿರುತ್ತಾನೆ, ಅಂದು ಆತನ ಬೆವರು "ರಕ್ತದ ಹನಿಗಳಂತೆ ಆಗಿದ್ದವು" (ಲೂಕ 22:44). 7ನೇ ವಚನವು ಗೆತ್ಸೇಮನೆ ತೋಟದಲ್ಲಿನ ಆತನ ಶ್ರಮೆಗಳನ್ನು ಸೂಚಿಸತಕ್ಕದ್ದು, ಅಲ್ಲಿ ಆತನು ಎಲ್ಲಾ ಮಾನವರಿಗೋಸ್ಕರ ಮರಣವನ್ನು ಹೊಂದುವದಕ್ಕೆ ಸಿದ್ಧ ಮಾಡಿಕೊಳ್ಳುವವನಾಗಿ ಆತನು ಅಂತಿಮ ವೇದನೆಯನ್ನು ಅನುಭವಿಸಿದನು. ಆತನು ಮನುಷ್ಯರ ಮಧ್ಯದಲ್ಲಿ ಮನುಷ್ಯನಾಗಿ ಜೀವಿಸಿದನು ಮತ್ತು ಆ ದಿನಗಳ ಜ್ಞಾಪಕವನ್ನು ಪೂರ್ಣವಾಗಿ ಉಳಿಸಿಕೊಂಡಿರುತ್ತಾನೆ.

ಪ್ರಿಯನಾದ ಮತ್ತು ಕನಿಕರವುಳ್ಳ ವೈದ್ಯನಾದ ಲೂಕನು, ಕ್ರಿಸ್ತನು ಗೆತ್ಸೇಮನೆಯಲ್ಲಿ ಅನುಭವಿಸಿದ ಶ್ರಮೆಯನ್ನು "ಮನೋವ್ಯಥೆ" (ἀγωνία, *agōnia;* 22:44) ಎಂಬ ಪದದಿಂದ ಬಣ್ಣಿಸುತ್ತಾನೆ. ಕ್ರಿಸ್ತನ ಅನುಭವವನ್ನು ಸೂಚಿಸುವದಕ್ಕೆ *agōnia* ಎಂಬ ಪದವು ಇದೊಂದೆ ಸಾರಿ ಬಳಸಲ್ಪಟ್ಟಿರುತ್ತದೆ; ಅದು ಶಿಲುಬೆಗೆ ಸಂಬಂಧಿಸಿದಂತೆ ಕಂಡು ಬರುವದಿಲ್ಲ. Thomas Hewitt ಹೀಗೆ ಹೇಳುತ್ತಾನೆ, "ಲೋಕದ ರಕ್ಷಕನು ಅನುಭವಿಸಿದ ಅತ್ಯಂಥ ದೊಡ್ಡ ವೇದನೆಯು ಈ ಜೀವನದಲ್ಲಿ ನಮಗೆ ಎಂದಿಗೂ ಒಂದು ಮರ್ಮವಾಗಿ ಉಳಿಯುವದಿಲ್ಲ, ಮತ್ತು ಅದೇ ರೀತಿಯಲ್ಲಿ ಆತನು ಅನುಭವಿಸಿದ ಬಾಧೆಯ ವಿವಿಧ ಅಂಶಗಳು ಕೂಡ."[17] ಬಹುಶಃ ಇದು ಸತ್ಯವಾಗಿದೆ, ಆದರೆ ನಾವು ಆ ರಾತ್ರಿ ಆತನು ತೋಟದಲ್ಲಿ ಮಾಡಿದ ಪ್ರಾರ್ಥನೆಗಳ ಬಗ್ಗೆ ಇನ್ನಷ್ಟು ಒಳಹೊಕ್ಕು ಪರೀಕ್ಷಿಸುವೆವು.

1. ಯೇಸು ಭಯ ಪಟ್ಟವನಾಗಿದ್ದರಿಂದ ಪ್ರಾರ್ಥಿಸಿದಾಗ್ಯೂ, ಆತನು ದೇವರ ಯೋಜನೆಗೆ ಅಧೀನಪಡಿಸಿಕೊಂಡನು. ಯೇಸು ತೋಟದಲ್ಲಿ ಹೆದರಿದನು, ಆದರೆ ಅದು ಅವಮಾನಕರವಲ್ಲ. ಆತನು ಭಯ ಪಟ್ಟವನಾದದ್ದು ನಮ್ಮ ಕಡೆಗೆ ಹೆಚ್ಚು ಅನುತಾಪವುಳ್ಳವನಾಗಿರುವಂತೆ ಮಾಡುತ್ತದೆ. ಆತನು ನಮ್ಮ ಪರವಾಗಿ ಅಂತಹ ವೇದನೆಯನ್ನು ಅನುಭವಿಸುವದಕ್ಕೆ ಮನಸ್ಸುಳ್ಳವನಾಗಿದ್ದನೆಂಬುದರಿಂದ ನಾವು ಆಳವಾಗಿ ಸ್ಪರ್ಶಿಸಲ್ಪಟ್ಟಿದ್ದೇವೆ. ದೇವರು ತೋಟದಲ್ಲಿ ಯೇಸುವಿನ ಪ್ರಾರ್ಥನೆಗೆ ಉತ್ತರವನ್ನು ಕೊಟ್ಟನಾದರೂ ಮರಣ ಪಾತ್ರೆಯು ಯೇಸುವಿನಿಂದ ತೆಗೆದು ಹಾಕಲ್ಪಡಲಿಲ್ಲ.[18] ತಾನು ಆ "ಪಾತ್ರೆ"ಯನ್ನು "ಕುಡಿಯುವದು" ಅವಶ್ಯವೆಂದು ಯೇಸು ಪೇತ್ರನಿಗೆ ಸೂಚಿಸಿದನು (ಯೋಹಾನ 18:11), ಮತ್ತು ಹಾಗೆ ಮಾಡುವದಕ್ಕೆ ಆತನು ಮನಸ್ಸುಳ್ಳವನಾಗಿದ್ದನು. ಹೇಗೂ, ಆತನು ತೋಟದಲ್ಲಿ ಸಾಯುವಷ್ಟರ ಮಟ್ಟಿಗೆ "ಮನೋವ್ಯಥೆಗೊಂಡಿದ್ದನು." ಪರಲೋಕದಿಂದ ಬಂದ ಒಬ್ಬ ದೇವದೂತನು ಆತನನ್ನು ಬಲಗೊಳಿಸಿದನು (ಮತ್ತಾಯ 26:38; ಲೂಕ 22:43). ಗೆತ್ಸೇಮನೆಯಲ್ಲಿನ ಆತನ ಬಾಧೆಗಳು ಮತ್ತು ಆತನ ಮರಣದ "ಪಾತ್ರೆ"ಯು ಆತನಿಗೆ ತೆಗೆದು ಹಾಕಲ್ಪಡಲಿಲ್ಲವೆಂಬ ವಾಸ್ತವಾಂಶವು ನಮ್ಮ ಪ್ರಾರ್ಥನೆಯು ಉತ್ತರಿಸಲ್ಪಡದೆ ಹೋಗುವಾಗ ಅಥವಾ ನಮ್ಮ ಸಂಕಷ್ಟಗಳ ಮರ್ಮವನ್ನು ನಾವು ವಿವರಿಸುವದಕ್ಕೆ ಸಾಧ್ಯವಿಲ್ಲದಿರುವಾಗ ನಮ್ಮೊಂದಿಗೆ ಅನುತಾಪ ಪಡುವಂತೆ ಆತನನ್ನು ಇನ್ನಷ್ಟು ಅರ್ಹಗೊಳಿಸುತ್ತದೆ.

ಆತನು **ದೇವರ ಮೇಲಣ ಭಕ್ತಿಯ ನಿಮಿತ್ತ ಕೇಳಲ್ಪಟ್ಟನು** ಎಂದು 7ನೇ ವಚನವು ಹೇಳುತ್ತದೆ. ಕೆಲವು ಅನುವಾದಗಳು "ಭಕ್ತಿ"ಯನ್ನು "ಭಯ" (KJV) ಅಥವಾ "ಭಕ್ತಿಯ ಭಯ" (ASV) ಎಂದು ಮಾಡುತ್ತವೆ. ಇಲ್ಲಿ ಬಳಸಲಾಗಿರುವ ಪದವು ಹೆಚ್ಚು ಸಾಮಾನ್ಯವಾಗಿರುವ φόβος (*phobos*) ಎಂಬುದಲ್ಲ, ಆದರೆ εὐλάβεια (*eulabeia*) ಎಂಬುದು, ಇದು ಹೊಸ ಒಡಂಬಡಿಕೆಯೊಳಗೆ ಇಬ್ರಿಯರಿಗೆ ಪತ್ರಿಕೆಯಲ್ಲಿ ಮಾತ್ರವೇ ಬಳಸಲ್ಪಟ್ಟಿರುತ್ತದೆ. (ನೋಡಿರಿ 12:28, ಅಲ್ಲಿ ಅದು "ಭಯ" ದಿಂದಲೂ ಅನುವಾದಿಸಲ್ಪಟ್ಟಿದೆ.)

ಆತನ ಹೃದಯವನ್ನು ತುಂಬಿದ ಭಯಭಕ್ತಿಯು ಕೇವಲ ಮರಣ ಭಯವಾಗಿದ್ದಿರಲಿಕ್ಕೆ ಸಾಧ್ಯವಿಲ್ಲ; ಹಾಗೆ ಇರುವದಾದಗಿದ್ದರೆ, ಬೇರೆ ದೇವಜನರು ಆತನಿಗಿಂತಲೂ ಹೆಚ್ಚು ಧೈರ್ಯಶಾಲಿಗಳಾಗಿ ಮರಣಿಸಿದ್ದರೆಂದಾಗುತ್ತಿತ್ತು. ಆತನ ಭಯವು "ಗೌರವಪೂರ್ವ ಕವಾದ ಭಯ" ಆಗಿತ್ತು, ಅದು ತನ್ನ ತಂದೆಗೆ ಸಂಪೂರ್ಣವಾಗಿ ಒಪ್ಪಿಸಿಕೊಂಡನು ಎಂಬದನ್ನು ಸೂಚಿಸುತ್ತದೆ. ಈ ಪದದ ಅರ್ಥವು "ಕಳವಳ" ಎಂದು ಸಹ ಅರ್ಥವಾಗಬಲ್ಲದು. James Thompson ಹೀಗೆ ಬರೆದನು, "ಕಳವಳ ಎಂಬ ಅರ್ಥದಲ್ಲಿ ತಿಳಿದುಕೊಳ್ಳುವದಾದರೆ, ಯೇಸುವಿನ ನಿರ್ದಿಷ್ಟವಾದ ಭಯವು ಮರಣದ ಭಯವಾಗಿತ್ತು, ಮತ್ತು ಆತನು ಕೇಳಲ್ಪಟ್ಟಾಗ ಭಯವನ್ನು ಆತನು ಜಯಿಸಿದನು ಎಂಬುದು ಆ ಹೇಳಿಕೆಯ ಅರ್ಥವಾಗುವದು."[19] Raymond Brownನು ಗಮನಕ್ಕೆ ತರುವದೇನೆಂದರೆ, "ವ್ಯಾಕರಣಾತ್ಮಕವಾಗಿ 7ನೇ ವಚನವನ್ನು ಹೀಗೆ ಅನುವಾದಿಸುವದು ಸಾಧ್ಯವಿರುತ್ತದೆ: '. . . ಮತ್ತು ಕೇಳಲ್ಪಟ್ಟವನಾಗಿ ಭಯದಿಂದ ಬಿಡುಗಡೆಗೊಳಿಸಲ್ಪಟ್ಟನು.'"[20] ವಾಕ್ಯಭಾಗವನ್ನು ಈ ರೀತಿಯಾಗಿ ಅರ್ಥಮಾಡಿಕೊಂಡದ್ದಾದರೆ, ಪೌಲನು ಫಿಲಿಪ್ಪಿ 4:4-7ರಲ್ಲಿ ಕಲಿಸಿದ ಪ್ರಕಾರವಾಗಿಯೇ, ನಮ್ಮ ಕಳವಳಗಳು ಅದೇ ರೀತಿಯಲ್ಲಿಯೇ ನಿವಾರಿಸಲ್ಪಡುವ ಸಾಧ್ಯತೆಗೆ ಒಂದು ಪರಿಪೂರ್ಣವಾದ ದೃಷ್ಟಾಂತ ಆಗುತ್ತದೆ. ಹೆಚ್ಚುಕಡಿಮೆ ಆತನನ್ನು ಕುಗ್ಗುವಂತೆ ಮಾಡಿದ್ದ ತಾತ್ಕಾಲಿಕ ಕಳವಳವು ತಂದೆಯಾದ ದೇವರ ಮುಂದೆ ಇಡಲ್ಪಟ್ಟಿತು ಮತ್ತು ಶೀಘ್ರವೇ ಅದು ತೆಗೆದು ಹಾಕಲ್ಪಟ್ಟಿತು.

ಪಾಪದ ಭಾರವನ್ನು ಹೊತ್ತುಕೊಂಡು ಸಾಯುವದು ಒಂದು ಬೃಹತ್ ಜವಾಬ್ದಾರಿಯಾಗಿರುತ್ತದೆ, ಮತ್ತು ಮಾನವರಿಗಾಗಿ ಆತನು ಅದನ್ನೇ ಮಾಡುವವನಾ ಗಿದ್ದನು. ಆತನ ಮರಣವು – ಮಾನವ ರೂಪದಲ್ಲಿದ್ದ ಕರ್ತನಿಗೆ ಸಹ – ಹೆಚ್ಚುಕಡಿಮೆ ಒಂದು ಚಿತ್ತಸ್ಥೈರ್ಯವನ್ನು ಕುಂದಿಸುವಂತಹ ಕೆಲಸವಾಗಿತ್ತು. ಶೋಧನೆಯನ್ನು ಮತ್ತು ಸಂಕಷ್ಟವನ್ನು ಎದುರಿಸುವದಕ್ಕಿದ್ದ ಆತನ ಪೂರ್ಣ ಸಾಮರ್ಥ್ಯವು ಆತನು ಶಿಲುಬೆಯನ್ನು ತಲುಪುವಷ್ಟರೊಳಗೆ ತೋಟದಲ್ಲಿ ಪರೀಕ್ಷಿಸಲ್ಪಟ್ಟಿತ್ತು.

ಆತನ "ಭಯವು" ಶಿಲುಬೆಗೆ ಬರುವ ಮುನ್ನ ತೋಟದಲ್ಲಿರುವಾಗ ಮರಣದ ಮೇಲೆ ಗಮನವನ್ನು ಹೊಂದಿದ್ದರೆ, ನಮ್ಮ ಪಾಪಗಳಿಗಾಗಿ ಒಂದು ಯಜ್ಞವಾಗಿ ಸಾಯಬೇಕೆಂಬ ತಂದೆಯ ಚಿತ್ತವನ್ನು ನೆರವೇರಿಸುವದಕ್ಕೆ ಮುನ್ನವೇ ಆತನು ಮರಣಿಸಿರಬಹುದಿತ್ತು ಎಂದರ್ಥವಾಗುತ್ತದೆ. ಮತ್ತಾಯ 26:38ರಲ್ಲಿ ಆತನು, "ನನ್ನ ಪ್ರಾಣವು ಸಾಯುವಷ್ಟರ ಮಟ್ಟಿಗೆ ದುಃಖಕ್ಕೆ ಒಳಗಾಗಿದೆ" ಎಂದು ಹೇಳಿದ್ದನ್ನು ಜ್ಞಾಪಿಸಿಕೊಳ್ಳಿರಿ. ಯೇಸುವಿಗೆ ತನ್ನ ಪರಿಸ್ಥಿತಿಯು ಚೆನ್ನಾಗಿ ತಿಳಿದಿತ್ತು, ಮತ್ತು ತನ್ನನ್ನು ಬಲಪಡಿಸಿ ಮುನ್ನಡೆಸುವಂತೆ ತಂದೆಯನ್ನು ಕೇಳಿಕೊಂಡನು.

2. ಯೇಸು ಏಕಾಂಗಿತನವನ್ನು ಅನುಭವಿಸಿದ್ದರಿಂದ ಪ್ರಾರ್ಥನೆ ಮಾಡಿದನಾದರೂ, ಆತನು ಬೇರೆಯವರ ಬಗ್ಗೆ ಕಳಕಳಿ ಹೊಂದಿದ್ದನು. ಯೇಸು ಶಿಲುಬೆಯ ಸಂಕಷ್ಟವನ್ನು ಅನುಭವಿಸುವದಕ್ಕೆ ತಂದೆಯಿಂದ ಏಕಾಂಗಿಯಾಗಿ ಕೈ ಬಿಡಲ್ಪಡುವದನ್ನು

ಅಂಗೀಕರಿಸಿಕೊಳ್ಳುವದಕ್ಕೆ ಶಕ್ತನಾಗಿದ್ದನು (ಮಾರ್ಕ 15:34; ಕೀರ್ತನೆ 22:1ರಿಂದ ಉಲ್ಲೇಖಿಸಲ್ಪಟ್ಟದ್ದು). ಆತನು ನೋವಿನಿಂದ ಗೋಳಾಡದವನಾಗಿ ಅದನ್ನು ಸಹಿಸಿಕೊಂಡನು – ಕನಿಷ್ಠ ಆ ರೀತಿಯಲ್ಲಿ ಗೋಳಾಡಿದ್ದರ ಬಗ್ಗೆ ವರದಿಯಾಗಿರುವದಿಲ್ಲ. ಬದಲಾಗಿ, ಆತನು ಬೇರೆಯವರ ಅಗತ್ಯತೆಗಳಿಗಾಗಿ ತನಗಿದ್ದ ಕಳಕಳಿಯನ್ನು ತೋರ್ಪಡಿಸಿದನು. ಆತನು ಸಾಯುತ್ತಿದ್ದ ಕಳ್ಳನಿಗೆ ಮರು ನಿಶ್ಚಯವನ್ನು ಕೊಟ್ಟನು ಮತ್ತು "ತಂದೆಯೇ, ಅವರಿಗೆ ಕ್ಷಮಿಸು; ತಾವು ಏನು ಮಾಡುತ್ತೇವೆಂಬುದನ್ನು ಅರಿಯರು" ಎಂದು ಕೂಗಿಕೊಂಡನು (ಲೂಕ 23:34, 43).

ನಾವು ಅದೇ ರೀತಿಯಲ್ಲಿ, ದೇವರು ತನ್ನ ತಕ್ಕ ಸಮಯದಲ್ಲಿ ನನ್ನ ಕಳವಳಗಳನ್ನು ನಿವಾರಿಸುವಂತೆ ಅನುಮತಿಸುವದಕ್ಕಾಗಿ ನಂಬಿಕೆ ಮತ್ತು ಪ್ರಾರ್ಥನೆಯಲ್ಲಿ ಸಹಿಸಿಕೊಳ್ಳಬೇಕು. ಬಾಧೆಯು ಎಲ್ಲಾ ಮಾನವರು ಅನುಭವಿಸಲೇ ಬೇಕಾಗಿರುವದರ ಭಾಗವಾಗಿದೆ. ಕ್ರಿಸ್ತನು ತಾನು ಅರಣ್ಯದಲ್ಲಿ ಶೋಧನೆಗೆ ಗುರಿಯಾದ ಸಮಯದಲ್ಲಿ ತನ್ನ ಹಸಿವೆಯನ್ನು ನೀಗಿಸಿಕೊಳ್ಳುವದಕ್ಕಾಗಿ ತನಗಿರುವ ಅದ್ಭುತಕರವಾದ ಶಕ್ತಿಯನ್ನು ಬಳಸಿಕೊಳ್ಳಲು ಮುಂದಾಗಲಿಲ್ಲ, ಮತ್ತು ತನ್ನನ್ನು ಶಿಲುಬೆಗೆ ಜಡಿಯಲಿದ್ದ ವೈರಿಗಳಿಂದ ಕಾಪಾಡಿಕೊಳ್ಳುವಂತೆ ದೇವದೂತರನ್ನು ಕರೆಯುವದಕ್ಕೆ ಆತನು ನಿರಾಕರಿಸಿದನು.

3. ಯೇಸುವಿನ ಪ್ರಾರ್ಥನೆಯು ಉತ್ತರಿಸಲ್ಪಟ್ಟಾಗ, ಆತನು ಬಲಗೊಂಡನು. ಯೇಸುವಿನ ಬಲವಾದ "ಕಣ್ಣೀರಿಟ್ಟಿದ್ದು" ಕೇಳಲ್ಪಟ್ಟಿತು. ಯೇಸು ಯೆರೂಸಲೇಮಿಗೋಸ್ಕರ ಕಣ್ಣೀರು ಬಿಟ್ಟ ಪ್ರಕಾರವಾಗಿಯೇ, ಆಗಾಗ ಕಣ್ಣೀರುಡುತ್ತಿದ್ದನು (ಲೂಕ 19:41). ಆತನು ಲಾಜರನ ಸಮಾಧಿಯ ಬಳಿಯಲ್ಲಿ, ತಾನು ಆತನನ್ನು ಸ್ವಲ್ಪ ಹೊತ್ತಿನಲ್ಲಿಯೇ ಸತ್ತವರೊಳಗಿಂದ ಎಬ್ಬಿಸಲಿದ್ದಾನೆಂಬದನ್ನು ಅರಿತವನಾಗಿದ್ದರೂ ಅತ್ತನು (ಯೋಹಾನ 11:35). ಯೇಸು ತೋಟದಲ್ಲಿ ಅತ್ತನು ಎಂಬುದು ಆತನಿಗೆ ನಮ್ಮ ಸ್ವಭಾವವು ಅರ್ಥವಾಗುತ್ತದೆಂಬುದನ್ನು ಸಾಭಿತುಪಡಿಸುತ್ತದೆ. ಆತನ ಅಳುವಿಕೆಯು ಶಕ್ತಿಶಾಲಿಯಾಗಿತ್ತು. ಆತನ ಪ್ರಾರ್ಥನೆಗೆ ಉತ್ತರವಾಗಿ, ಆತನು ತನ್ನ ದೇಹದಲ್ಲಿ ಶಿಲುಬೆಯ ಮೇಲೆ ಮಾನವರಿಗೋಸ್ಕರ ಬಾಧೆಯನ್ನು ಅನುಭವಿಸಿ ಮರಣಿಸುವಂತೆ ಶಕ್ತಗೊಳಿಸಲ್ಪಟ್ಟನು (2 ಕೊರಿಂಥ 5:19-21).

ಯೇಸು ಕೇಳಲ್ಪಟ್ಟನು, ಯಾಕೆಂದರೆ ಆತನಿಗೆ ದೇವದೂತರ ಸಹಾಯದ ಮೂಲಕ ಉತ್ತರ ಕೊಡಲ್ಪಟ್ಟಿತು ಮತ್ತು ವೇದನೆಕರವಾದ ಪ್ರಾರ್ಥನೆಯನ್ನು ಸಹಿಸಿಕೊಳ್ಳುವಂತೆ ಬಲಗೊಳಿಸಲ್ಪಟ್ಟನು, ಆ ಮೂಲಕ ತನ್ನ ಕಳವಳ ಅಥವಾ ಭಯವನ್ನು ಜಯಿಸುವವನಾದನು. ಬಳಿಕ ಆತನು ನಮಗೋಸ್ಕರ ಮನಃಪೂರ್ವಕವಾಗಿ ಶಿಲುಬೆಗೆ ಹೋದನು. "ಕೇಳಲ್ಪಟ್ಟನು" ಎಂಬ ಮಾತು ಆತನ ಪ್ರಾರ್ಥನೆಗೆ ಉತ್ತರ ಸಿಕ್ಕಿತು ಎಂಬುದನ್ನು ಸೂಚಿಸುತ್ತದೆ.[21] ಆರಂಭಿಕ ಮೊರೆಯನ್ನು ಮಾಡಿದ ತಕ್ಷಣದಲ್ಲಿಯೇ, ಮೊದಲು ದೇವದೂತನು ಬಂದನು (ಲೂಕ 22:43), ಮತ್ತು ಬಳಿಕ ಬೆವರು ರಕ್ತದ ಹನಿಗಳಂತೆ ಬೀಳುವಷ್ಟರ ಮಟ್ಟಿಗೆ ಪ್ರಾರ್ಥಿಸುವಂತಹ ಅನುಭವವಾಯಿತು (ಲೂಕ 22:44). ಈ ಸಂದರ್ಭದಲ್ಲಿ ಮಾರ್ಕನು ಯೇಸುವನ್ನು ಆತನು "ಬೆಚ್ಚಬೆರಗಾಗಿ ಮನಗುಂದಿದವನಾದನು" ಎಂದು ಬಣ್ಣಿಸುತ್ತಾನೆ (ಮಾರ್ಕ 14:33). NEB ತರ್ಜುಮೆಯು "ನನ್ನ ಹೃದಯವು ವೇದನೆಯಿಂದ ಮುರಿಯಲ್ಪಡುವದಕ್ಕೆ ಸಿದ್ಧವಿದೆ" ಎಂದು ಹೇಳುತ್ತದೆ. ಇದು ಕೀರ್ತನೆ 69:20ರ ಮೆಸ್ಸೀಯನ ಪ್ರವಾದನೆಗೆ ಒಂದು ಅಕ್ಷರಶಃ ಅರ್ಥನಿರೂಪಣೆಯನ್ನು ಕೊಡುವಂತೆ ತೋರುತ್ತದೆ: "ನಿಂದೆಯು ನನ್ನ ಹೃದಯವನ್ನು ಮುರಿದದೆ ಮತ್ತು ನಾನು ಖಿನ್ನನಾಗಿದ್ದೇನೆ." "ಕಹಿರಸ" ಮತ್ತು "ಹುಳಿತ ದ್ರಾಕ್ಷಾರಸ" ಕುರಿತಾದ ಒಂದು ಪ್ರವಾದನೆಯಾಗಿರುವ ಕೀರ್ತನೆ 69:21ನ್ನು ಸುವಾರ್ತೆಯ ಬರವಣಿಯಲ್ಲಿ ಅಕ್ಷರಶಃ ನೆರವೇರಿಸಲ್ಪಟ್ಟದ್ದಾಗಿ ಕಾಣಲ್ಪಟ್ಟಿತು, ಹಾಗಾದರೆ 20ನೇ ವಚನವನ್ನು ನಾವು ಅದೇ ರೀತಿಯಲ್ಲಿ

ಅರ್ಥಮಾಡಿಕೊಳ್ಳಲು ಏಕೆ ಸಂಕೋಚ ಪಡುತ್ತೇವೆ? ಗೆತ್ಸೇಮನೆಯಲ್ಲಿನ ಬಾಧೆಯು ಯೇಸುವನ್ನು ಬಹಳವಾಗಿ ಬಲಹೀನಗೊಳಿಸಿದ್ದರಿಂದ ಆತನು ಶಿಲುಬೆಯ ಮೇಲೆ ಆತನ ಹೃದಯವು ಛಿದ್ರಗೊಂಡು ಮರಣಿಸುವ ಸಾಧ್ಯತೆಯು ಅಧಿಕವಾಗಿರುತ್ತಿತ್ತು. ಆತನು ಶಿಲುಬೆಯ ಭಾರವನ್ನು ತಾಳದೆ ಗೊಲ್ಗೊಥಾದ ದಾರಿಯಲ್ಲಿ ಅದರ ಅಡಿಯಲ್ಲಿ ಬಿದ್ದನೆಂಬುದರಲ್ಲಿ ಆಶ್ಚರ್ಯವೇನಿಲ್ಲ! ಆತನು ಕಲ್ವಾರಿಯಲ್ಲಿ ತನ್ನೊಂದಿಗೆ ಶಿಲುಬೆಗೆ ಹಾಕಲ್ಪಟ್ಟ ಇತರ ಅಪರಾಧಿಗಳಿಗಿಂತಲೂ ಅಷ್ಟೊಂದು ಶೀಘ್ರದಲ್ಲಿ ಮರಣಿಸಿದನೆಂಬುದರಲ್ಲಿ ಆಶ್ಚರ್ಯವೇನಿಲ್ಲ! ಈ ಹಂತದಲ್ಲಿ ಆತನಿಗಿದ್ದ ದುರ್ಬಲತೆಯು ಸೈನಿಕರು ಹಾಗೂ ಜನರ ಗುಂಪು ಆತನನ್ನು ಮತ್ತಷ್ಟು ಅಪಹಾಸ್ಯ ಮಾಡುವಂತೆ ಪ್ರಚೋದಿಸಿತ್ತು; ಅಷ್ಟೊಂದು ದುರ್ಬಲನಾಗಿರುವ ಒಬ್ಬ ವ್ಯಕ್ತಿಯು ತಮ್ಮ ಅರಸನಾಗಿ ಇರಲಿಕ್ಕೆ ಸಾಧ್ಯವೆಂಬುದನ್ನು ಅವರು ಕಾಣಲಿಲ್ಲ! ತೋಟದಲ್ಲಿ ಆತನು ಕಣ್ಣೀರಿಟ್ಟು ಪ್ರಾರ್ಥನೆ ಮಾಡಿದ ನಂತರದಲ್ಲಿ ಮತ್ತು ಆತನು ಬಲಪಡಿಸುವ ಮೂಲಕ ಅದಕ್ಕೆ ಉತ್ತರ ಸಿಕ್ಕ ನಂತರ, ಯೇಸು ರಾತ್ರಿಯ ನ್ಯಾಯವಿಚಾರಣೆಗಳನ್ನು ಮತ್ತು ಮರುದಿನದ ಅವಮಾನವನ್ನು ಗುಣಗುಟ್ಟದೆ ಅಥವಾ ಗೋಳು ಹೇಳಿಕೊಳ್ಳದೆ ಸಹಿಸಿಕೊಂಡು ಸಾಗಲು ಶಕ್ತನಾದನು. ಖಂಡಿತವಾಗಿಯೂ, ಆತನು ತನ್ನ ಬಳಿ ಬಂದು ಮಾತಾಡುವವರಿಗಾಗಿ ಪ್ರಾರ್ಥಿಸಿದನು! ಆತನು ತೋಟದಲ್ಲಿ "ಎಲ್ಲಾ ಗ್ರಹಿಕೆಯನ್ನು ಮೀರುವ ಶಾಂತಿ"ಯನ್ನು ನವೀಕರಿಸಿಕೊಂಡಿದ್ದನು. ಆತನು ಯೂದನನ್ನು ಮತ್ತು ಜನರ ದೊಂಬಿಯನ್ನು ಧೈರ್ಯವಾಗಿ ಎದುರಿಸಿದ್ದನು.

ಯೇಸು ಶಿಲುಬೆಗಾಗಿ ತನ್ನನ್ನು ಸಿದ್ಧಪಡಿಸಿಕೊಳ್ಳುತ್ತಿರುವ ವೇಳೆ, ಆತನು ಏನನ್ನು ಅನುಭವಿಸಿದನು? Ray C. Stedmanನು ಅದನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾನೆ:

> ಯೇಸುವು ಪಾಪದಿಂದ ಉಂಟಾಗುವಂತಹ ಭಾವನಾತ್ಮಕ ದುರವಸ್ಥೆಯನ್ನು ಅನುಭವಿಸಿದನೆಂದು ಲೇಖಕನು ಪರೋಕ್ಷವಾಗಿ ಸೂಚಿಸುತ್ತಾನೆ: ಅದು ಅವಮಾನ, ಅಪರಾಧಭಾವನೆ ಮತ್ತು ಹತಾಶೆ. ಆತನು ಪಾಪದ ವಶಪಡಿಸಿಕೊಳ್ಳುವ ಲೋಹದ ಸಂಕೋಲೆಗಳ ಅನುಭವ ಮಾಡಿದನು. ಆತನು ನಿರೀಕ್ಷೆರಹಿತತೆ, ಸಂಪೂರ್ಣ ನಿರಾಸದಾಯಕತೆ ಮತ್ತು ಸಂಪೂರ್ಣ ಸೋಲಿನ ಭಾವನೆಯಿಂದ ಶೋಷಿಸಲ್ಪಟ್ಟನು. ಆತನು ತಂದೆಯಿಂದ ಕೈ ಬಿಡಲ್ಪಡಲಿದ್ದ ಶಿಲುಬೆಯ ಆ ಕ್ಷಣವನ್ನು ಎದುರುನೋಡುತ್ತಿದ್ದನು, ಯಾಕೆಂದರ ಅಷ್ಟೊತ್ತಿಗೆ ಆತನು ಲೋಕದ ಪಾಪವನ್ನು *ಅದು ತನ್ನದೋ ಎಂಬಂತೆ* ತನ್ನ ಮೇಲೆ ಹೊತ್ತುಕೊಂಡಿರಲಿದ್ದನು. ಅದರ ಯೋಚನೆಯೇ ಆತನ ಹೃದಯವನ್ನು ದ್ರಾಕ್ಷೆಯ ಗಾಣದಲ್ಲಿ ಹಿಂಡುವಂತೆ ಹಿಂಡಿತ್ತು.[22]

ಯೇಸುವು ಅನುಭವಿಸಿದ ವೇದನೆಯ ಹಾದು ಹೋಗುವದನ್ನು ನಾವು ಪೂರ್ಣವಾಗಿ ಊಹಿಸಿಕೊಳ್ಳುವದಕ್ಕೆ ಸಾಧ್ಯವಿಲ್ಲ. ಹಾಗಾದರೆ ಆತನು ತನಗಿದ್ದ "ಭಯಭಕ್ತಿಯ ಸಮರ್ಪಣೆ"ಯ ಕಾರಣದಿಂದ, ಹೆಚ್ಚುಕಡಿಮೆ ತೋಟದಲ್ಲಿ ಕುಂದಿಸುವಂತೆ ಮಾಡಿದ್ದ ಘಟನೆಯನ್ನು ಸಾಯದೆಯೇ ಅನುಭವಿಸಿದ್ದನು (ವ. 7; NIV). ಯೇಸುವು ತಂದೆಯ ಚಿತ್ತಕ್ಕೆ ಒಪ್ಪಿಸಿಕೊಳ್ಳಲು ಮನಸ್ಸುಳ್ಳವನಾಗಿದ್ದರಿಂದ, ಜೊತೆಗೆ ಆತನ ಬಲವಾಗಿ ಕೂಗುತ್ತಾ ಕಣ್ಣೀರಿಟ್ಟ ಕಾರಣದಿಂದ- ಅದನ್ನು ಪ್ರೀತಿಯುಳ್ಳ ಯಾವ ತಂದೆಯೂ ನೋಡುತ್ತಾ ಸುಮ್ಮನಿರಲಾರನು – ಆತನ ಪ್ರಾರ್ಥನೆಗೆ ಉತ್ತರ ಸಿಕ್ಕಿತು. ಆತನ ಪ್ರಾರ್ಥನೆಗೆ "ಹೌದು" ಎಂಬ ಉತ್ತರ ಸಿಕ್ಕಿತು. ಆತನು ತನ್ನನ್ನು ಕಾಪಾಡುವದಕ್ಕೆ ಹನ್ನೆರಡು ಗಣಗಳಷ್ಟು ದೇವದೂತರನ್ನು ಕರೆಯಬಹುದಿತ್ತು, ಆದರೆ ಶಾಸ್ತ್ರವು ನೆರವೇರುವದು ಅಗತ್ಯವಾಗಿತ್ತು (ಮತ್ತಾಯ 26:53, 54; ನೋಡಿರಿ ಲೂಕ 24:44-48). ಅದರ ಪೂರ್ಣ ಪ್ರಜ್ಞೆಯನ್ನು ಹೊಂದಿದ್ದವನಾಗಿ ಆತನು ಮನಃಪೂರ್ವಕವಾಗಿ ಶಿಲುಬೆಗೆ

ಹೋದನು.

4. ನಾವು ಕ್ರಿಸ್ತನ ಹಾಗೆ ಪ್ರಾರ್ಥನೆಯನ್ನು ಮಾಡುವಾಗ ನಾವು ಕೇಳಲ್ಪಡುವೆವು. ಯೇಸುವಿನ "ಬಲವಾಗಿ ಕೂಗುವಿಕೆ" ಕೇಳಲ್ಪಟ್ಟದ್ದರಿಂದ, ತಾವು ಸಹ ಬಾಧೆಗಳ ಮೂಲಕ ಕಲಿತುಕೊಳ್ಳುವ ತನಕ ನಮ್ಮ ಕಣ್ಣೀರಿನಿಂದ ಮಾಡಲ್ಪಡುವ ಪ್ರಾರ್ಥನೆಗಳು ಕೇಳಲ್ಪಡುವ ಭರವಸೆಯು ನಮಗೆ ಇರುತ್ತದೋ? ಕಣ್ಣೀರಿಗೆ ಬೇರೆ ಯಾವದಕ್ಕೂ ಇಲ್ಲದಂತಹ ಶಕ್ತಿಯಿರುತ್ತದೆ – ಸ್ಪಷ್ಟವಾಗಿರುವಂತೆ, ದೇವರ ವಿಷಯದಲ್ಲಿ ಸಹ ಅದು ಸತ್ಯ. B. F. Westcottನು ಒಂದು ಹಳೇ ಯೆಹೂದಿ ನಾಣ್ನುಡಿಯನ್ನು ಉಲ್ಲೇಖಿಸುತ್ತಾನೆ: "ಕಣ್ಣೀರು ಹಾದು ಹೋಗದಂತಹ ಯಾವ ಬಾಗಿಲು ಇರುವದಿಲ್ಲ."[23] ಅವುಗಳು ಪ್ರತಿಯೊಂದು ಮನೆಯಲ್ಲೂ ಸಿಕ್ಕುತ್ತವೆ, ಮತ್ತು ದೇವರು ಅವುಗಳನ್ನು ಕೇಳಿಸಿಕೊಳ್ಳುತ್ತಾನೆ. ನಾವು ಪ್ರತಿಯೊಂದು ಸವಾಲಿಗೆ ಸಮಾನರಾಗಿದ್ದು ಅದನ್ನು ದೇವರ ಕರುಣೆಯಿಂದ ಸಹಿಸಿಕೊಳ್ಳೋಣ. ಆಳವಾದ ದುಃಖದಲ್ಲಿದ್ದಾಗ್ಯೂ, ನಾವು ಬೇರೆಯವರಿಗೋಸ್ಕರ ಮಾಡುವ ಪ್ರಾರ್ಥನೆಗಳು ನಿಶ್ಚಯವಾಗಿಯೂ ಕೇಳಲ್ಪಡುವವೆಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳೋಣ.

ನಮ್ಮ ಕರ್ತನು ಮರಣವನ್ನು ದೂರವಿಡುವದಕ್ಕೆ ತನ್ನ ಸ್ವಾಭಾವಿಕ ಶಕ್ತಿಯನ್ನು ಬಳಸಲಿಲ್ಲ ಎಂದಾದರೆ, ನಾವು ಮರಣದಿಂದ ಅದ್ಭುತಕರವಾಗಿ ಬಿಡಿಸಲ್ಪಡುತ್ತೇವೆಂಬುದನ್ನು ಎದುರುನೋಡಬಾರದು! ಈ ದಾರಿಯ ಮೂಲಕವಾಗಿ ಮಾತ್ರವೇ ಆತನು ಮನುಷ್ಯರನ್ನು ರಕ್ಷಿಸುವದರಲ್ಲಿ ದೇವರಿಗಿರುವ ದಾಕ್ಷಿಣ್ಯತೆಯನ್ನು ನ್ಯಾಯವೆಂದು ಸಾಭಿತುಪಡಿಸುವದಕ್ಕೆ ಸಾಧ್ಯವಾಗಿತ್ತು. ನಮಗೋಸ್ಕರ ಕ್ರಿಸ್ತನು ಮಾಡಿರುವ ಕಾರ್ಯದ ನಿಮಿತ್ತವಾಗಿ ನಾವು ಒಂದು ಬೃಹತ್ ವಿನಾಶವನ್ನು ತಪ್ಪಿಸಿಕೊಳ್ಳುವವರಾಗಿದ್ದೇವೆ. ಯೇಸುವು ಮನಃಪೂರ್ವಕವಾಗಿ ತನ್ನನ್ನು ಒಪ್ಪಿಸಿಕೊಂಡಿದ್ದರಿಂದ ನಮಗೆ ದೊರಕಿರುವ ಕೆಲವೊಂದು ಪ್ರಯೋಜನಗಳ ಸಾರಾಂಶವು ಇಲ್ಲಿದೆ:

> ಕ್ರಿಸ್ತನು ಮಾಡಿದ ಪಾಪನಿವಾರಣ ಯಜ್ಞದ ಕಾರಣದಿಂದ ಮತ್ತು ಮರಣ ಹಾಗೂ ಸಮಾಧಿಗಳ ಮೇಲೆ ಜಯವನ್ನು ಗಳಿಸಿದ್ದರ ಕಾರಣದಿಂದ, ನಮಗೆ ಪಾಪದ ಭಾರವನ್ನು, ಶಾಪದ ಘೋರತೆಯನ್ನು, ನ್ಯಾಯತೀರ್ಪಿನನ ದಂಡನೆಯನ್ನು, ಅಥವಾ ನಿತ್ಯವಾದ ಮರಣ ಹಾಗೂ ನರಕದ ಅರ್ಥವನ್ನು ಎಂದಿಗೂ ತಿಳಿಯಲಾರೆವು. ನಮ್ಮ ಮಹಾಯಾಜಕನಾದ ಯೇಸುವಿನ ಕಾರಣದಿಂದ ನಾವು ನಿರ್ದೋಷಿಗಳೆಂದು ಬಿಡುಗಡೆಗೊಳಿಸಲ್ಪಟ್ಟಿದ್ದೇವೆ ಮತ್ತು ವಿಮುಕ್ತಗೊಳಿಸಲ್ಪಟ್ಟಿದ್ದೇವೆ.[24]

**ವಚನ 8.** 5:5-10ರಲ್ಲಿ ಕ್ರಿಸ್ತನ ಶ್ರೇಷ್ಠತೆಯ ಚಿತ್ರಣದಲ್ಲಿರುವ ಮೂರನೆಯ ಸತ್ಯವು ಏನೆಂದರೆ **ಆತನು ಮಗನಾಗಿದ್ದರೂ ವಿಧೇಯತೆಯನ್ನು ಕಲಿತುಕೊಂಡನು**. ಕ್ರಿಸ್ತನು ವಿಧೇಯತೆಯನ್ನು ಕಲಿತುಕೊಳ್ಳಬೇಕಾಯಿತು ಎಂಬುದನ್ನು ಕೇಳಿಸಿಕೊಳ್ಳುವದು ವಿಚಿತ್ರವೇನಿಸುತ್ತದೆ! ಆತನು ಯಾವದೇ ಹಂತದಲ್ಲಿ ಅವಿಧೇಯನಾಗಿದ್ದನೆಂಬದಂತೂ ಇದರ ಅರ್ಥವು ಆಗಿರುವದಕ್ಕೆ ಸಾಧ್ಯವಿಲ್ಲ. ಒಬ್ಬ ಬಾಲಕನಾಗಿದ್ದಾಗ ಸಹ ಎಲ್ಲಾ ವಿಧದಲ್ಲಿ ಆತನು ಅಧೀನನಾಗಿದ್ದನು (ಲೂಕ 2:51). ಆತನು "ನನ್ನನ್ನು ಕಳುಹಿಸಿದಾತನ ಚಿತ್ತದಂತೆ ಮಾಡಿ ಆತನ ಕೆಲಸವನ್ನು ಪೂರೈಸುವದೇ ನನ್ನ ಆಹಾರವು" ಎಂದು ಹೇಳಿದನು (ಯೋಹಾನ 4:34). ಆತನು ತಂದೆಗೆ ಹೀಗೆ ಪ್ರಾರ್ಥಿಸಿದನು, "ಮಾಡಬೇಕೆಂದು ನೀನು ನನಗೆ ಕೊಟ್ಟ ಕೆಲಸವನ್ನು ನಾನು ನೆರವೇರಿಸಿ ನಿನ್ನನ್ನು ಭೂಲೋಕದಲ್ಲಿ ಮಹಿಮೆ ಪಡಿಸಿದೆನು" (ಯೋಹಾನ 17:4). ಆತನು ಯಾವಾಗಲೂ ವಿಧೇಯನಾಗಿದ್ದನು ಮತ್ತು ಯಾವಾಗಲೂ ತನ್ನ ಪರಲೋಕದ ತಂದೆಯ ಚಿತ್ತವನ್ನು ಮಾಡುವದಕ್ಕೆ ಅಪೇಕ್ಷಿಸಿದನು. ಹಾಗಾದರೆ, ಏಕೆ ಆತನು ವಿಧೇಯತೆಯನ್ನು

ಕಲಿತುಕೊಳ್ಳಬೇಕಾಯಿತು?

W. H. Griffith Thomasನು ಹೀಗೆ ಹೇಳಿದನು, "ಇದು ಮುಗ್ಧತೆ ಮತ್ತು ಸದ್ಗುಣದ ನಡುವಿನ ವ್ಯತ್ಯಾಸ. ಮುಗ್ಧತೆಯು ಪರೀಕ್ಷಿಸಲ್ಪಡದ ಜೀವಿತ, ಆದರೆ ಸದ್ಗುಣವೆಂದರೆ ಮುಗ್ದತೆಯು ಪರೀಕ್ಷಿಸಲ್ಪಟ್ಟು ಜಯ ಹೊಂದಿದ ಜೀವನವಾಗಿದೆ."[25] ಕ್ರಿಸ್ತನಿಗೆ ವಿಧೇಯನಾಗಬೇಕೆಂಬ *ಇಚ್ಛೆಯು* ಯಾವಾಗಲೂ ಇತ್ತು, ಆದರೆ ವಿಧೇಯತೆಯ *ಸದ್ಗುಣ*ವನ್ನು ಹೊಂದಬೇಕಾದರೆ ಪರೀಕ್ಷಿಸಲ್ಪಡುವದು ಅವಶ್ಯಕವಾಗಿತ್ತು. ಕ್ರಿಸ್ತನ ವಿಧೇಯತೆಯು "ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು" ಮಟ್ಟಿಗಿನ ವಿಧೇಯತೆಯಾಗಿತ್ತು (ಫಿಲಿಪ್ಪಿ 2:8).

ಸ್ವಲ್ಪ ವ್ಯತ್ಯಾಸವಾದ ಅಭಿಪ್ರಾಯವು ಹೀಗಿರುತ್ತದೆ:

> ದೇವರಿಗೆ ವಿಧೇಯರಾಗುವದರಲ್ಲಿ ಏನೇನು ಅಡಗಿರುತ್ತದೆಂಬುದನ್ನಂತೂ ಯೇಸು ಕಲಿತುಕೊಂಡನು, ಮತ್ತು ಈ ಭೂಮಿಯ ಮೇಲೆ ಮಾನವ ಸ್ಥಿತಿಗಳಲ್ಲಿ ವಿಧೇಯತೆಯನ್ನು ಅಭ್ಯಾಸ ಮಾಡಿಕೊಳ್ಳಲು ಕಲಿತನು. ಮತ್ತಾಯ 26:53ರ ಒಂದು ಪರಿಗಣನೆಯಲ್ಲಿ ಯೇಸುವಿನ ವಿಧೇಯತೆಯು ಏನನ್ನು ಒಳಗೊಂಡಿತ್ತೆಂಬುದನ್ನು ಎಂಬ ವಿಷಯದಲ್ಲಿ ಏನನ್ನಾದರೂ ಕಲಿತುಕೊಳ್ಳಬಹುದಾಗಿದೆ.[26]

ಆತನು ತನ್ನನ್ನು ಶಿಲುಬೆಯಿಂದ ಬಿಡಿಸುವಂತೆ ಹನ್ನೆರಡು ಗಣ ದೇವದೂತರನ್ನು ಕರೆದಿರಬಹುದಿತ್ತು, ಆದರೆ ಅದು ತಂದೆಯ ಚಿತ್ತಕ್ಕೆ ಅವಿಧೇಯನಾದಂತಾಗುತ್ತಿತ್ತು. ತಂದೆಗೆ ಆತನು ಅಧೀನಪಡಿಸಿಕೊಂಡದ್ದರ ಅತ್ಯುತ್ಕೃಷ್ಠ ವೈಭವವು ಗೆತ್ಸೇಮನೆಯಲ್ಲಿ ಪ್ರದರ್ಶಿಸಲ್ಪಟ್ಟಿತು, ಅಲ್ಲಿ ಆತನ ವಿಧೇಯತೆಯು ಅದರ ಪರಿಪೂರ್ಣತೆಯಲ್ಲಿ ಕಂಡು ಬರುತ್ತದೆ.

**ಅನುಭವಿಸಿದ ಬಾಧೆಗಳಿಂದಲೇ** "ಆತನು ವಿಧೇಯತೆಯನ್ನು ಕಲಿತುಕೊಂಡನು." ಕ್ರಿಸ್ತನ ಬಾಧೆಯು ಶಿಲುಬೆಯ ನೋವಿನಿಂದ ಮತ್ತು ಆತನ ವೈರಿಗಳು ಅವನ ಮೇಲೆ ಸುರಿಸಿದ ಅಪಹಾಸ್ಯದಿಂದ ಮತ್ತಷ್ಟು ಹೆಚ್ಚಾಯಿತು. ಇಬ್ರಿಯರಿಗೆ ಪತ್ರಿಕೆಯ ಲೇಖಕನು ಯೆಶಾಯ 50:4, 5ರಲ್ಲಿನ ಮೆಸ್ಸೀಯನ ಪ್ರವಾದನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆದಿರಬಹುದಾಗಿದೆ:

> ಬಳಲಿಹೋದವರನ್ನು ಮಾತುಗಳಿಂದ ಸುಧಾರಿಸುವದಕ್ಕೆ ನಾನು ಬಲ್ಲವನಾಗುವಂತೆ ಕರ್ತನಾದ ಯೆಹೋವನು ಶಿಕ್ಷಿತರ ನಾಲಿಗೆಯನ್ನು ನನಗೆ ದಯಪಾಲಿಸಿದ್ದಾನೆ; ಬೆಳಬೆಳಗೂ ನನ್ನನ್ನು ಎಚ್ಚರಿಸಿ ಶಿಕ್ಷಿತರಂತೆ ನಾನು ಕೇಳುವ ಹಾಗೆ ನನ್ನ ಕಿವಿಯನ್ನು ಜಾಗರುಕಗೊಳಿಸುತ್ತಾನೆ. ಕರ್ತನಾದ ಯೆಹೋವನು ನನ್ನ ಕಿವಿಯನ್ನು ತೆರೆದಿದ್ದಾನೆ; ನಾನು ಎದುರು ಬೀಳಲಿಲ್ಲ, ವಿಮುಖನಾಗಲೂ ಇಲ್ಲ.

ಮಗನು ಬಾಧೆಯನ್ನು ಅನುಭವಿಸಬೇಕಾಯಿತಾದ್ದರಿಂದ, ದೇವರ ಎಲ್ಲಾ "ಪುತ್ರರು" ಸಹ ಬಾಧೆಯನ್ನು ಅನುಭವಿಸುವದನ್ನು ನಾವು ನಿರೀಕ್ಷಿಬಹುದು (ಇಬ್ರಿಯ 12:5-11).[27]

**ವಚನ 9, 10.** ವಿಧೇಯತೆಯ ಮೂಲಕ ಯೇಸುವು **ಸಿದ್ಧಿಗೆ ಬಂದ**ನು, ಅಥವಾ "ಪರಿಪೂರ್ಣಗೊಂಡನು," ಯಾಜಕತ್ವಕ್ಕೆ ಅವಶ್ಯಕವಾದ ಸಕಲ ಅರ್ಹತೆಯನ್ನು ಹೊಂದಿದವನಾದನು. "ಸಿದ್ಧಿಗೆ ಬಂದು" ಎಂಬ ಪದವು ಆತನು ಈ ಹಂತದಲ್ಲಿ ನೈತಿಕ ಪರಿಪೂರ್ಣತೆಯನ್ನು ಸಾಧಿಸಿದನು ಎಂದರ್ಥವನ್ನು ಕೊಡುವದಿಲ್ಲ, ಆದರೆ ಬಾಧೆಯನ್ನು ಅನುಭವಿಸಬೇಕೆಂಬ ಆತನು ದೀನತೆಯಿಂದ ಮನಸ್ಸು ಮಾಡುವಿಕೆಯು ಆತನನ್ನು ನಮ್ಮ ರಕ್ಷಕನಾಗಿರುವಂತೆ "ಪೂರ್ಣವಾಗಿ ಅರ್ಹ"ಗೊಳಿಸಿದವು.[28] ಯಾವದೇ ಮಾನವ ಯಾಜಕನು "ಪರಿಪೂರ್ಣಗೊಳಿಸಲ್ಪಟ್ಟನು" (ಸಿದ್ಧಿಗೆ ಬಂದನು) ಎಂದು ಎಂದಿಗೂ ಹೇಳುವದಕ್ಕೆ ಸಾಧ್ಯವಿಲ್ಲ.[29]

ಕ್ರಿಸ್ತನು ಮಾನವ ಸ್ವಭಾವವನ್ನು ಪೂರ್ಣವಾಗಿ ಹೊಂದಿದ್ದನು, ಆದರೆ ಮಾನವರ ಪ್ರಯೋಜನಾರ್ಥವಾಗಿ ಆತನು ದೇವರ ಚಿತ್ತಕ್ಕೆ ಸಂಪೂರ್ಣವಾಗಿ ಶರಣಾದನು. ಆದದರಿಂದ ಆತನು ವಿಧೇಯತೆಯ ಫಲಿತವಾಗಿ "ಪರಿಪೂರ್ಣ"ಗೊಂಡನು ಮತ್ತು ಆತನ ಬಾಧೆಗಳ ನಂತರದಲ್ಲಿ ಕಿರೀಟಧಾರಣೆ ಮಾಡಲ್ಪಟ್ಟನು. ಈಗ ಆತನು ದೇವರ ಬಲಗಡೆಯಲ್ಲಿ ಆಳ್ವಿಕೆಯನ್ನು ಮಾಡುತ್ತಾನೆ. ಆತನ ಕಲಿಯುವಿಕೆಯು "ಯೇಸುವಿನ ಬಾಧೆ ಪಡುವಿಕೆಯು ಮಹಾಯಾಜಕನಾಗಿ ಆತನು ಅರ್ಹನಾಗಬೇಕೆಂಬ ಅರ್ಥದಲ್ಲಿ ಮಾತ್ರವೇ (cf. 2:17; 4:14) ಮತ್ತು ಮನುಷ್ಯನಿಗೆ ಆತನ ಪ್ರಯೋಜನದ ಆಧಾರದಲ್ಲಿ ಮಾತ್ರವೇ ಆಗಿತ್ತು . . ."[30]

ಹೇಗೂ, ಆತನು **ತನಗೆ ವಿಧೇಯರಾಗುವವರೆ**ಲ್ಲನ್ನು ಮಾತ್ರವೇ ರಕ್ಷಿಸುವನು. ಇಲ್ಲಿ ಸಾರ್ವತ್ರಿಕ ರಕ್ಷಣೆಯ ಯಾವ ಸುಳಿವೂ ಇರುವದಿಲ್ಲ; ವಾಸ್ತವಾಂಶದಲ್ಲಿ, ಈ ವಚನವು ಅಂತಹ ಒಂದು ಯೋಚನೆಯನ್ನು ಧ್ವಂಸ ಮಾಡುತ್ತದೆ. ರಕ್ಷಣೆ ಹೊಂದುವದಕ್ಕೆ ನಾವು ಸುವಾರ್ತೆಗೆ ವಿಧೇಯರಾಗತಕ್ಕದ್ದು (1 ಪೇತ್ರ 4:17; 2 ಥೆಸಲೋನಿಕ 1:7-9). ಕ್ರೈಸ್ತನು ತಂದೆಯ ಚಿತ್ತಕ್ಕೆ ವಿಧೇಯನಾಗುವದನ್ನು ಮುಂದುವರೆಸಬೇಕು (ಮತ್ತಾಯ 7:21). ಅನೇಕ ವ್ಯಾಖ್ಯಾನಕಾರರು "ಕೃಪೆಯನ್ನು ಹೊಂದಿಕೊಳ್ಳುವದಕ್ಕೆ ವಿಧೇಯತೆಯು ಪೂರ್ವಶರತ್ತು ಆಗಿರುವದಿಲ್ಲ, ಆದರೆ ನಂಬಿಕೆಯ ಪ್ರಯಾಣದಲ್ಲಿರುವವರ ಒಂದು ಗುಣಸ್ವಭಾವವಾಗಿರುತ್ತದೆ"[31] ಎಂದು ಹೇಳಿಕೆಯನ್ನು ನೀಡುವದು ವಿಚಿತ್ರವಾಗಿ ತೋರುತ್ತದೆ. ಇದು ಇಬ್ರಿಯರಿಗೆ ಪತ್ರಿಕೆಯ ಲೇಖಕನು ಕಲಿಸುವಂತಹ ವಿಷಯಕ್ಕೆ ನೇರವಾದ ವಿರೋಧವಲ್ಲವೋ? ನಿಶ್ಚಯವಾಗಿಯೂ, ನಂಬುವವನ ಜೀವನದಲ್ಲಿ ವಿಧೇಯತೆಯು ಹಿಂದೆ ಬರುವದು, ಆದರೆ ಕ್ರಿಸ್ತನು ವಿಧೇಯರಾಗುವವರನ್ನು ಮಾತ್ರವೇ ರಕ್ಷಿಸುತ್ತಾನೆಂಬುದು ಈಗಲೂ ಸತ್ಯವಾದದ್ದು! ಕ್ರಿಸ್ತನು ವಿಧೇಯನಾದ ಪ್ರಕಾರವೇ, ನಾವು ದೇವರ ಪ್ರತಿಯೊಂದು ಆಜ್ಞೆಗೆ, ನಮಗೆ ಇಷ್ಟವಾಗದ ಅಥವಾ ಅರ್ಥವಾಗದ ಆಜ್ಞೆಗಳಿಗೆ ಸಹ ನಾವು ಮನಃಪೂರ್ವಕವಾಗಿ ಒಪ್ಪಿಸಿ ಕೊಡತಕ್ಕದ್ದು.

ಕ್ರಿಸ್ತನು ಮಾತ್ರವೇ ಲೋಕದ ರಕ್ಷಣೆಯನ್ನು ಸಾಧ್ಯಗೊಳಿಸುವ ಒಬ್ಬನೇ ದೇವರು-ಮನುಷ್ಯನು ಆಗಿದ್ದಾನೆ. ಆತನು **ನಿರಂತರವಾದ ರಕ್ಷಣೆಗೆ ಕಾರಣನಾದನು** (ಮೂಲನಾದನು) (αἴτιος, *aitios*). ಈ ಪದವು ಇತರರು ಹಿಂಬಾಲಿಸಿಕೊಂಡು ಬರುವಂತಾಗಲು ಹೆಜ್ಜೆ ಗುರುತುಗಳಲ್ಲು ಮೂಡಿಸುವ "ಪ್ರವರ್ತಕ"ನನ್ನು ಸೂಚಿಸಬಹುದಾಗಿದೆ. ಯೇಸು ಅದನ್ನೇ ಮಾಡಿದನು.[32] ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವದಿಲ್ಲ (ಅಪೊಸ್ತಲರ ಕೃತ್ಯಗಳು 4:12).

ರಕ್ಷಣೆಯು ವಿಧೇಯತೆಯ ಮೂಲಕ ಸಂಪಾದಿಸಿಕೊಳ್ಳಲ್ಪಡುತ್ತದೆ. ಹಾಗಾದರೆ, ಸುವಾರ್ತೆಗೆ ಅವಿಧೇಯರಾಗಿರುವವರಿಗೆ ಏನು ಸಂಭವಿಸುತ್ತದೆ? ಪೇತ್ರನು ಆ ಭಾವೋತ್ತೇಜಕ ಪ್ರಶ್ನೆಯನ್ನು 1 ಪೇತ್ರ 4:17ರಲ್ಲಿ ಕೇಳುತ್ತಾನೆ. ಆ ಪ್ರಶ್ನೆಗೆ ಉತ್ತರವು ಸ್ಪಷ್ಟವಾಗಿದೆ, ಮತ್ತು ಪೌಲನು 2 ಥೆಸಲೋನಿಕ 1:8-10ರಲ್ಲಿ ಆ ಉತ್ತರವನ್ನು ಕೊಡುತ್ತಾನೆ: "ಸುವಾರ್ತೆಗೆ ಒಳಪಡದವರಿಗೆ ಪ್ರತೀಕಾರ" ಬರುವದು. ರಕ್ಷಣೆಯು ಆತನಿಗೆ ವಿಧೇಯರಾಗುವ ಬಗ್ಗೆ ಕೇವಲ ಮಾತಾಡಿ ಪ್ರಾರ್ಥಿಸುವವರಿಗೆ ಬರುವದಿಲ್ಲ (ಮತ್ತಾಯ 7:21-23). ಕೆಲವರು ಹೆಮ್ಮೆಯಿಂದ ಹೇಳಿಕೊಳ್ಳುವ ಪ್ರಕಾರ, ಮನಃಪೂರ್ವಕವಾಗಿ ಒಪ್ಪಿಸಿಕೊಡುವಿಕೆ ಮತ್ತು ವಿಧೇಯತೆಗಳು ತಕ್ಷಣವೇ ಬರದಿರಬಹುದು; ಬದಲಾಗಿ, ಅದು ಕಾಲಕ್ರಮೇಣ ಆತ್ಮೀಕವಾಗಿ ಬೆಳೆದ ಹಾಗೆ ಅದು ಬರುವದು (2 ಪೇತ್ರ 1:5-11). ಯೇಸುವಿನ ಜೀವನವು ಸ್ಥಿರವಾದ ವಿಧೇಯತೆಗೆ ಮಾದರಿಯನ್ನು ತೋರಿತು. ಸಮಸ್ಯೆಗಳ ಸಮಯದಲ್ಲಿ ಒಬ್ಬನ ಜೀವಿತದೊಳಗೆ ಏಕಾಏಕಿ ದೃಷ್ಟಿಕೋನವು ಬದಲಾಗಬಹುದು, ಆದರೆ ನಾವು ಸಹ ಸ್ಥಿರವಾದ ವಿಧೇಯತೆಯನ್ನು ಹೊಂದಿರುವಾಗ, ಯೇಸುವು ಸಾಧಿಸಿರುವಂಥದ್ದು ನಮ್ಮದಾಗುತ್ತದೆ.[33]

5:5-10ರಲ್ಲಿ ಕ್ರಿಸ್ತನ ಶ್ರೇಷ್ಠತೆಯ ಚಿತ್ರಣದಲ್ಲಿರುವ ಆತನ ಕುರಿತ ನಾಲ್ಕನೆಯ ಸತ್ಯವು ಏನೆಂದರೆ ಆತನು **ದೇವರಿಂದ ಮಹಾಯಾಜಕನೆನಿಸಿಕೊಂಡಿ**ದ್ದನು. ಲೇಖಕನು **ಮೆಲ್ಕಿಜೆದೇಕನ** ಯಾಜಕತ್ವದ ಭಾವನೆಗೆ ಹಿಂದಿರುಗುತ್ತಾನೆ, ಅದು 6ನೇ ವಚನದಲ್ಲಿ ಪರಿಚಯಿಸಲ್ಪಟ್ಟಿತ್ತು. ಪುನಃ, ಆತನು ಕೀರ್ತನೆ 110ನ್ನು ಉಲ್ಲೇಖಿಸುತ್ತಾನೆ, ಅದು 1:3, 13; 6:20; 7:3; 8:1; ಮತ್ತು 10:12, 13ರಲ್ಲಿ ಸಹ ಉಲ್ಲೇಖ ಮಾಡಲ್ಪಟ್ಟಿರುತ್ತದೆ. ಇಬ್ರಿಯರಿಗೆ ಪತ್ರಿಕೆಯಲ್ಲಿ ಒಂದು ಪ್ರಧಾನ ವಾಕ್ಯಭಾಗವಿರುವದಾದರೆ ಅದು ಕೀರ್ತನೆ 110:1 ಆಗಿರತಕ್ಕದ್ದು, ಅದು ಹೀಗೆ ಹೇಳುತ್ತದೆ, "ನಾನು ನಿನ್ನ ವಿರೋಧಿಗಳನ್ನು ನಿನಗೆ ಪಾದಪೀಠವಾಗ ಮಾಡುವ ತನಕ ನನ್ನ ಬಲಗಡೆಯಲ್ಲಿ ಕೂತುಕೊಂಡಿರು . . ."

ಕ್ರಿಸ್ತನು ನಮ್ಮ ಮಹಾಯಾಜಕನಾಗಿ "ನೇಮಿಸಲ್ಪಟ್ಟಿರುತ್ತಾನೆ [ಕರೆಯಲ್ಪಟ್ಟನು]" (προσαγορεύω, *prosagoreuō*). "ಕರೆಯಲ್ಪಟ್ಟನು" ಎಂಬುದು ಹೊಸ ಒಡಂಬಡಿಕೆಯೊಳಗೆ ಇಲ್ಲಿ ಮಾತ್ರವೇ ಬಳಸಲ್ಪಟ್ಟಿರುವ ಇನ್ನೊಂದು ಪದವಾಗಿದೆ. ಇದು ದೇವರೊಬ್ಬನಿಂದಲೇ ಮಾಡಲ್ಪಟ್ಟ "ಘೋಷಣೆ" ಅಥವಾ "ಅಧಿಕೃತ ಪ್ರಕಟನೆ" ಆಗಿರುತ್ತದೆ. ಯಾಜಕರು ಸ್ವತಃ ದೇವರಿಂದಲೇ ನೇಮಿಸಲ್ಪಡಬೇಕು, ಅಥವಾ ಅವರ ಸೇವೆಯು ಯಾವ ಬೆಲೆಯೂ ಇಲ್ಲದ್ದಾಗುವದು.

ಮಹಾಯಾಜಕನಿಗೆ ಇರಬೇಕೆಂದು ನೇಮಿಸಲಾದ ಪ್ರತಿಯೊಂದ ಅರ್ಹತೆಗಳನ್ನು ಕ್ರಿಸ್ತನು ಪೂರೈಸಿದನು. ಆತನು ನೇರವಾಗಿ ದೇವರಿಂದ ನೇಮಕಾತಿಯನ್ನು ಹೊಂದಿದನು. ಮಗನಾಗಿ, ಆತನು ಸ್ವತಃ ಪಾಪ ಮಾಡುವಂತಹ ಸಾಮಾನ್ಯವಾದ ಮನುಷ್ಯರು ಅಥವಾ ಯಾಜಕರಿಗಿಂತ ಉನ್ನತ ವರ್ಗಕ್ಕೆ ಸೇರಿದವನು (5:3). ಆತನು ಮಾನವ ಸಂಕಷ್ಟಗಳನ್ನು ಅನುಭವಿಸಿದನು, ಆ ಮೂಲಕ ಮನುಷ್ಯರನ್ನು ಅರ್ಥಮಾಡಿಕೊಳ್ಳಲು ಯೋಗ್ಯನಾದನು (ವಚನಗಳು 7, 8). ಅಂತಿಮವಾಗಿ, ತನ್ನ ಸ್ವಂತ ವಿಧೇಯತೆಯ ಮೂಲಕ, ದೇವರ ಕಟ್ಟಳೆಗಳಿಗೆ ಕಟ್ಟುನಿಟ್ಟಾಗಿ ಒಳಪಡುವದರ ಅವಶ್ಯಕತೆಯ ಬಗ್ಗೆ ಕಲಿತುಕೊಂಡನು (ವಚನಗಳು 8, 9).

ಯೇಸು "ಸದಾಕಾಲವೂ" ಯಾಜಕನಾಗಿರುವದರಲ್ಲಿ ವ್ಯಕ್ತವಾಗಿರುವ ದೇವರ ಅಭಿಪ್ರಾಯವು (5:6) ಎಂಬುದು ಆರೋನನ ವರ್ಗವು ಅಳಿಸಿ ಹಾಕಲ್ಪಟ್ಟಿತು ಎಂಬುದನ್ನು ಪರೋಕ್ಷವಾಗಿ ಸೂಚಿಸುತ್ತದೆ. ಹಳೆಯ ವ್ಯವಸ್ಥೆಯು ಗತಿಸಿ ಹೋಗುವಿಕೆಯು ಯೆಹೂದ್ಯರಿಗೆ ಅಂಗೀಕರಿಸಿಕೊಳ್ಳಲು – ಕ್ರಿಸ್ತನನ್ನು ಅರಸನನ್ನಾಗಿ ಅಂಗೀಕರಿಸಿಕೊಂಡ ವರಿಗೆ ಸಹ – ಸತ್ಯದ ಭಾಗವಾಗಿತ್ತು. ಅದಕ್ಕೆ ಒಬ್ಬನು ತನ್ನನ್ನು ಯಾವ ಹಿಂದಿನ ಜೀವಿತದ ಆಧಾರದಲ್ಲಿ ತನ್ನನ್ನು ದೇವರಿಗೆ ಪರಿಶುದ್ಧನೆಂದು ಎಣಿಸಿಕೊಂಡಿದ್ದನೋ ಆ ಜೀವಿತವನ್ನು ಪರಿತ್ಯಜಿಸುವದು ಅಗತ್ಯವಿತ್ತು. ಆತನು ಕಂಡದ್ದನ್ನು ಕಾಣದಿರುವದಕ್ಕೋಸ್ಕರ, ಗೋಚರವಾದದ್ದನ್ನು ಅಗೋಚರವಾದದ್ದಕ್ಕೋಸ್ಕರ ಬಿಟ್ಟು ಕೊಡಬೇಕಿತ್ತು.[34] ವೈಶಿಷ್ಟ್ಯ ಯೆಹೂದ್ಯನು ಕ್ರೈಸ್ತೀಯ ನಂಬಿಕೆಯನ್ನು ಸಂಪೂರ್ಣವಾಗಿ ಸೈತಾನನದ್ದೆಂದು ಪರಿಗಣಿಸಿದ್ದನು. ಇಬ್ರಿಯರಿಗೆ ಪತ್ರಿಕೆಯ ಲೇಖಕನು ತನ್ನ ವಾಚಕರಿಗೆ ಯೇಸುವಿನ ಮಹಾಯಾಜಕತ್ವದ ಬಗ್ಗೆ ವಿವರಿಸುವದಕ್ಕೆ ಸಮಯವನ್ನೂ ಸ್ಥಳಾವಕಾಶವನ್ನು ಕೊಡುತ್ತಾನೆ.

## ಪರಿಪಕ್ವತೆಯೆಡೆಗೆ ಸಾಗಬೇಕೆಂದು ಎಚ್ಚರಿಕೆ ಮತ್ತು ಪ್ರಬೋಧನೆ (5:11-6:20)

ನಾವು ಇಬ್ರಿಯರಿಗೆ ಪತ್ರಿಕೆಯ ಇನ್ನೊಂದು ಪ್ರಬೋಧನೆಯ ಬಳಿಗೆ ಬಂದಿದ್ದೇವೆ. 5:11ರಿಂದ ಆರಂಭಗೊಂಡು ಮತ್ತು ಆರನೆಯ ಅಧ್ಯಾಯದಲ್ಲಿ ಮುಂದುವರೆಯುತ್ತಾ, ಲೇಖಕನು ತಾನು

ಇದುವರೆಗೂ ಕಲಿಸುತ್ತಿರುವದರ ಕುರಿತಾಗಿ ಮೂರನೆಯ ವಿವರವಾದ ಅನ್ವಯಿಕೆಯನ್ನು ನೀಡುತ್ತಾನೆ. ಮೊದಲನೆಯ ಹಾಗೂ ಎರಡನೆಯ ಪ್ರಬೋಧನೆಗಳು 2:1-4 ಮತ್ತು 3:7-4:16ರಲ್ಲಿ ಸಿಕ್ಕುತ್ತವೆ.

ಮಾನಸಿಕ ಸೋಮಾರಿತನದ ಕಾರಣದಿಂದ, ಇಲ್ಲಿ ಸಂಬೋಧಿಸಲ್ಪಟ್ಟಿರುವ ಕ್ರೈಸ್ತರು ಲೇಖಕನು ವಿವರಿಸಲು ಬಯಸಿದ್ದ ಆಳವಾದ ವಿಚಾರಗಳನ್ನು ಅರ್ಥಮಾಡಿಕೊಳ್ಳುವದಕ್ಕೆ ಅಶಕ್ತರಾಗಿದ್ದರು. ಆದುದರಿಂದ, ತನ್ನ ಪತ್ರಿಕೆಯ ಆಳವಾದ ಸಂಗತಿಗಳಲ್ಲಿ ಅವರಿಗೆ ಚಿತ್ರಣವನ್ನು ಕೊಡುವದಕ್ಕೆ ಮುಂಚೆ, ಆತನು ಅವರಿಗೆ ಆತ್ಮೀಕ ಪರಿಪಕ್ವತೆಯನ್ನು ಬೆಳೆಸಿಕೊಳ್ಳುವದರ ಪ್ರಾಮುಖ್ಯತೆಯನ್ನು ಜ್ಞಾಪಕ ಪಡಿಸುತ್ತಾನೆ. ಆತನು ಈ ಜ್ಞಾಪಕವನ್ನು ಆತನು 5:11-14ರಲ್ಲಿ ನಕಾರಾತ್ಮಕದಲ್ಲಿ ಕೊಟ್ಟನು, ಅವರ ಅಪರಿಪಕ್ವತೆಯ ಸೂಚನೆಗಳನ್ನು ಎತ್ತಿ ತೋರಿಸುತ್ತಾನೆ.

## ಅಲಕ್ಷ್ಯಕ್ಕೊಳಗಾದವರ ವಿಫಲತೆ (5:11-14)

**[11]ಈ ವಿಷಯದಲ್ಲಿ ನಾವು ಹೇಳಬೇಕಾದ ಮಾತು ಬಹಳ ಉಂಟು, ಆದರೆ ನಿಮ್ಮ ಕಿವಿಗಳು ಮಂದವಾದದರಿಂದ ಅದನ್ನು ವಿವರಿಸುವದು ಕಷ್ಟವಾಗಿದೆ. [12]ಕಾಲವನ್ನು ನೋಡಿದರೆ ನೀವು ಇಷ್ಟರೊಳಗೆ ಬೋಧಕರಾಗಿರಬೇಕಾಗಿದ್ದರೂ ಒಬ್ಬನು ನಿಮಗೆ ದೈವೋಕ್ತಿಗಳ ಮೂಲಪಾಠಗಳನ್ನು ತಿರಿಗಿ ಕಲಿಸಿಕೊಡಬೇಕಾಗಿದೆ; ನೀವು ಹಾಲು ಕುಡಿಯತಕ್ಕವರೇ ಹೊರತು ಗಟ್ಟಿಯಾದ ಆಹಾರವನ್ನು ತಿನ್ನತಕ್ಕವರಲ್ಲ. [13]ಹಾಲು ಬೇಕಾದವನು ಕೂಸಿನಂತಿದ್ದು ನೀತಿವಾಕ್ಯದಲ್ಲಿ ಅನುಭವವಿಲ್ಲದವನಾಗಿದ್ದಾನೆ. [14]ಗಟ್ಟಿಯಾದ ಆಹಾರವು ಪ್ರಾಯಸ್ಥರಿಗೋಸ್ಕರ ಅಂದರೆ ಜ್ಞಾನೇಂದ್ರಿಯಗಳನ್ನು ಸಾಧನೆಯಿಂದ ಶಿಕ್ಷಿಸಿಕೊಂಡು ಇದು ಒಳ್ಳೇದು ಅದು ಕೆಟ್ಟದ್ದು ಎಂಬ ಭೇದವನ್ನು ತಿಳಿದವರಿಗೋಸ್ಕರವಾಗಿದೆ.**

**ವಚನ 11.** ಇಬ್ರಿಯರಿಗೆ ಪತ್ರಿಕೆಯು ಯಾರಿಗೆ ಬರೆಯಲ್ಪಟ್ಟಿತೋ ಆ ಕ್ರೈಸ್ತರ **ಕಿವಿಗಳು ಮಂದವಾಗಿದ್ದವು**. ಹಳೆಯ ಕಾಲದ ಇಸ್ರಾಯೇಲ್ಯರ ಹಾಗೆ (4:2), ಅವರು ತಾವು ಕೇಳಿದ ಸಂಗತಿಗಳಿಂದ ಪ್ರಯೋಜನವನ್ನು ಹೊಂದಿಕೊಂಡಿರಲಿಲ್ಲ. ನಾವು ಕೇಳಿಸಿಕೊಳ್ಳುತ್ತಿರುವದರ ಕಡೆಗೆ ಏಕಾಗ್ರತೆಯಿಂದ ಕಿವಿಗೊಟ್ಟು ಅದನ್ನು ಅನ್ವಯಿಸಿಕೊಳ್ಳದಿದ್ದರೆ ನಾವು ನಮ್ಮ ಆತ್ಮೀಕ ಸಾಮರ್ಥ್ಯಗಳ್ಳು ಕಳಕೊಳ್ಳಬಲ್ಲೆವು. ಮತ್ತಾಯ 25ರಲ್ಲಿನ ತಲಾಂತುಗಳ ಸಾಮ್ಯವು ಈ ಅಪಾಯದ ಕುರಿತು ಒಂದು ಉತ್ತಮವಾದ ದೃಷ್ಟಾಂತವಾಗಿರುತ್ತದೆ.

ಕ್ರೈಸ್ತನು ಬೆಳೆಯುವಂತೆ ಮತ್ತು ಆತ್ಮೀಕ ಮಂದತನದಿಂದ ದೂರವಿರುವಂತೆ ದೇವರ ಪ್ರಕಟನೆಗಳ ಅಧ್ಯಯನವನ್ನು ನಿರಂತರವಾಗಿ ಮಾಡತಕ್ಕದ್ದು. ಈ ಕ್ರೈಸ್ತರು ಆತ್ಮೀಕತೆಯ ಉನ್ನತವಾದ ಮಟ್ಟಕ್ಕೆ ತೇರ್ಗಡೆಯಾಗಿರಲಿಲ್ಲ (ವ. 11). ವಾಸ್ತವಿಕದಲ್ಲಿ ಅವರು ಹಿಂದಕ್ಕೆ ಹೋಗಿದ್ದರು.

ತಿಮೊಥೆಯನು ಕನಿಷ್ಠ ಒಂದು "ಆತ್ಮೀಕ ವರ"ವನ್ನು ಹೊಂದಿದ್ದಾನಾದರೂ, ವರವನ್ನು ಪ್ರಜ್ವಲಿಸುವಂತೆ ಮಾಡು ಎಂದು (2 ತಿಮೊಥೆ 1:6) ಮತ್ತು ಅದನ್ನ ನಿರ್ಲಕ್ಷಿಸಬೇಡ ಎಂದು ಆತನು ಆಜ್ಞಾಪಿಸಲ್ಪಟ್ಟನು (1 ತಿಮೊಥೆ 4:14). ಒಂದು ವಿಶೇಷವಾದ ವರವನ್ನು ಹೊಂದಿಕೊಂಡಿದ್ದ ತಿಮೊಥೆಯನು ಶ್ರದ್ಧೆಯಿಂದ ಅಧ್ಯಯನ ಮಾಡುವದು ಅಗತ್ಯವಾಗಿದ್ದಲ್ಲಿ (2 ತಿಮೊಥೆ 2:15), ನಮಗೆ ನಾವು ಅದಕ್ಕಿಂತ ಕಡಿಮೆಯಾಗಿ ಎದುರುನೋಡಬೇಕೋ? ಇಬ್ರಿಯರಿಗೆ ಪತ್ರಿಕೆಯು ಬರೆಯಲ್ಪಟ್ಟ ಕ್ರೈಸ್ತರು ಒಂದು ದುಃಖಕರವಾದ ಸ್ಥಿತಿಯೊಳಗೆ ಜಾರಿ ಹೋಗಿದ್ದ ರೀತಿಯಲ್ಲಿಯೇ, ನಮ್ಮ ಸ್ವಂತ ಆತ್ಮೀಕ ಮಂದತನಕ್ಕೆ ನಮ್ಮನ್ನೇ

ಹೊಣೆಯಾಗಿಸಿಕೊಳ್ಳಬೇಕಾಗುತ್ತದೆ.

ಮೆಲ್ಕಿಜೆದೇಕನ ಯಾಜಕತ್ವದ ಯೋಚನೆಯು ಮೃತ ಸಮುದ್ರದ ಕುಮ್ರಾನ್ ಸಮುದಾಯದವರ ದಸ್ತಾವೇಜುಗಳಲ್ಲಿ ಮತ್ತು Philoನ ಬರಹಗಳಲ್ಲಿ ಪ್ರಸ್ತಾಪಿಸಲ್ಪಟ್ಟಿದೆಯಾದರೂ, ಬಹುಶಃ ಆ ಭಾವನೆಯು ಸಾಮಾನ್ಯವಾಗಿ ಚರ್ಚಿಸಲ್ಪಡುತ್ತಿರಲಿಲ್ಲವೆಂದು ತೋರುತ್ತದೆ. ತನ್ನ ವಾಚಕರಿಗೆ ಈ ವಿಷಯದ ಪರಿಚಯವಿಲ್ಲದ ಕಾರಣದಿಂದಾಗಿ, ಲೇಖಕನಿಗೆ ಈ ಅಂಶವನ್ನು ಅವರಿಗೆ ವಿವರಿಸುವದಕ್ಕೆ ಕಷ್ಟಪಟ್ಟಿದ್ದನು. ನಮ್ಮ ಕಾಲದಲ್ಲಿ ಸಹ ವಾಚಕರಿಗೆ ಮೆಲ್ಕಿಜೆದೇಕನ ಕುರಿತಾದ ಹೇಳಿಕೆಗಳನ್ನು (7:1-10) ಅರ್ಥಮಾಡಿಕೊಳ್ಳುವದಕ್ಕೆ ಕಷ್ಟಕರವಾಗಿರುತ್ತದೆ. ಈ ಕ್ರೈಸ್ತರು ಜಾಗರೂಕತೆಯಿಂದ ಆಲಿಸಿದ್ದರೆ, ಅವರು ಶಾಸ್ತ್ರಗಳ ಆಳವಾದ ಅಧ್ಯಯನವನ್ನು ತೆಗೆದುಕೊಳ್ಳುವದಕ್ಕೆ ಇನ್ನೂ ಉತ್ತಮವಾಗಿ ಶಕ್ತರಾಗಿರುತ್ತಿದ್ದರು.

**ವಚನ 12**. ಅಪರಿಪಕ್ವತೆಯ ಎರಡನೆಯ ಸೂಚನೆಯು ಏನೆಂದರೆ ಅವರು ಉಪದೇಶ ಮಾಡುವದಕ್ಕೆ ಅಶಕ್ತರಾಗಿದ್ದರು: **ಕಾಲವನ್ನು ನೋಡಿದರೆ ನೀವು ಇಷ್ಟರೊಳಗೆ ಬೋಧಕರಾಗಿರಬೇಕಾಗಿದ್ದರೂ ಒಬ್ಬನು ನಿಮಗೆ ದೈವೋಕ್ತಿಗಳ ಮೂಲಪಾಠವನ್ನು ತಿರಿಗಿ ಹೇಳಿಕೊಡಬೇಕಾಗಿದೆ**. ಬುದ್ಧಿಯ ಕೊರತೆಯು ಅವರ ಸಮಸ್ಯೆಯಾಗಿರಲಿಲ್ಲ; ಅದಕ್ಕೆ ತದ್ವಿರುದ್ಧವಾಗಿ, ಅವರಿಗಿದ್ದ ಸಾಮರ್ಥ್ಯವು ಅವರ ಸ್ಥಿತಿಯನ್ನು ಇನ್ನಷ್ಟು ಛೀಮಾರಿ ಹಾಕಿಸಿಕೊಳ್ಳುವದಕ್ಕೆ ಯೋಗ್ಯವಾಗಿಸಿತ್ತು. ಅವರು ಈ ಪರಿಸ್ಥಿತಿಯಲ್ಲಿ ಸಿಲುಕಿಕೊಳ್ಳುವ ಇಂಗಿತವನ್ನು ಎಂದಿಗೂ ಹೊಂದಿರಲಿಲ್ಲ, ಆದರೆ ಅವರಿಗಿದ್ದ ಮಾನಸಿಕ ಸೋಮಾರಿತನವು ಈ ಸ್ಥಿತಿಯನ್ನು ತಂದಿತ್ತು.[35] ಕ್ರಿಸ್ತನಲ್ಲಿ ಒಂದು ಕೂಸಾಗಿರುವದರಲ್ಲಿ ಯಾವದೇ ತಪ್ಪಿಲ್ಲ, ಯಾಕೆಂದರೆ ಕ್ರೈಸ್ತ ಜೀವಿತವನ್ನು ಆರಂಭಿಸುವ ಪ್ರತಿಯೊಬ್ಬನು ಆ ಮಟ್ಟದಲ್ಲಿ ಹಾಗೆಯೇ ಮಾಡುತ್ತಾನೆ. ಪೌಲನು ಕೊರಿಂಥದ ಕ್ರೈಸ್ತರನ್ನು "ಎಳೆಗೂಸುಗಳು" (νήπιος, *nēpios*; 1 ಕೊರಿಂಥ 3:1) ಮತ್ತು ಹೆಚ್ಚು ಪ್ರಗತಿ ಸಾಧಿಸಿದ್ದ ಸದಸ್ಯರನ್ನು "ಪ್ರಾಯಸ್ಥರು" (τέλειος, *teleios*; 1 ಕೊರಿಂಥ 14:20) ಎಂದು ವರ್ಗೀಕರಿಸುತ್ತಾನೆ. ಆತನು ಬೇರೆ ಸಹೋದರರಿಗೆ "ಪರಿಪೂರ್ಣರಾಗಿರಿ" ("ಪರಿಪಕ್ವವುಳ್ಳರಾಗಿರಿ"; NIV) ಮತ್ತು ದೇವರ ಚಿತ್ತದ ಕುರಿತ ತಮ್ಮ ಯೋಚನೆಯಲ್ಲಿ "ಪೂರ್ಣ ನಿಶ್ಚಯವುಳ್ಳವರಾಗಿರಿ" (ಕೊಲೊಸ್ಸೆ 4:12) ಎಂದು ಬೇಡಿಕೊಳ್ಳುತ್ತಾನೆ.

ತಾನು ಯಾರಿಗೆ ಬರೆಯುತ್ತಿದ್ದಾನೋ ಆ ಕ್ರೈಸ್ತರಿಂದ ಲೇಖಕನು ಬಯಸಿದ ಪರಿಪಕ್ವತೆಯು ಯಾವದಾಗಿತ್ತೆಂದರೆ ಅವರು ಸತ್ಯದ ಸ್ಪಷ್ಟೀಕರಣವನ್ನು ಉನ್ನತ ಮಟ್ಟದಲ್ಲಿ ಗ್ರಹಿಸಿಕೊಂಡು ಆಸ್ವಾದಿಸುವ ಸಾಮರ್ಥ್ಯವನ್ನು ಹೊಂದಬೇಕೆಂಬುದೇ. ಒಂದು ಎಳೆಗೂಸು ಮುದ್ದು ಮಾಡುವದಕ್ಕೆ ಯೋಗ್ಯವಾಗಿರುತ್ತದೆ; ಆದರೆ ವರ್ಷಗಳು ಗತಿಸಿದಂತೆ ಮಗುವು ಒಂದು ನಿಸ್ಸಹಾಯಕವಾದ ಮಗುವಾಗಿಯೇ ಉಳಿದರೆ, ಆತನ ಸ್ಥಿತಿಯು ಕರುಣಾಜನಕವಾಗಿರುತ್ತದೆ. ವರ್ಷಾನುಗಟ್ಟಲೆ ಕ್ರೈಸ್ತರಾಗಿರುವ ಪುರುಷರು ಮತ್ತು ಸ್ತ್ರೀಯರು ತಮಗೆ ಬಹುವಾಗಿ ಅರ್ಥ, ಮನಸ್ಸಿಗೆ ಒಪ್ಪುವಿಕೆ, ಹಾಗೂ ಶಕ್ತಿಯನ್ನು ಹೊಂದಿರಬೇಕಾಗಿದ್ದ ಆತ್ಮೀಕ ವಾಸ್ತವಿಕತೆಗಳ ಬಗ್ಗೆ ಅರಿವು ಇಲ್ಲದವರಾಗಿರುವಾದರೆ ಅದು ದುಃಖಕರವಾದದ್ದು.

ಮೂಲಪಾಠಗಳ ಕುರಿತ ಬೋಧನೆಯನ್ನು ಕೆಲವು ಕಾಲದ ವರಗೆ ಕೇಳಿಸಿಕೊಂಡವರಾಗಿ, ಇಬ್ರಿಯ ಕ್ರೈಸ್ತರು ಯೇಸು ಕ್ರಿಸ್ತನ ಕುರಿತ ಹಳೆಯ ಒಡಂಬಡಿಕೆಯ ಪ್ರವಾದನೆಗಳು ಮತ್ತು ಸಂಕೇತಗಳನ್ನು ಗ್ರಹಿಸಿಕೊಳ್ಳುವದಕ್ಕೆ ಶಕ್ತರಾಗಿರಬೇಕಿತ್ತು; ಆದರೆ ಅವರು ಈ ಶಾಸ್ತ್ರಗಳ ಅಂಶಗಳನ್ನು ಅರ್ಥೈಸಿಕೊಂಡು ಅವುಗಳಲ್ಲಿ ಸಂತೋಷಪಡುವಷ್ಟರ ಮಟ್ಟಿಗೆ ಬೆಳೆದಿರಲಿಲ್ಲ. ಒಬ್ಬನು ಕೇಳಿಸಿಕೊಳ್ಳಲು ತೊಂದರೆ ಹೊಂದಿರುವವನು ನಾವು ತಿಳಿಯಪಡಿಸಲು

ಪ್ರಯತ್ನಿಸುತ್ತಿರುವ ಸಂದೇಶವನ್ನು ಅರ್ಥಮಾಡಿಕೊಳ್ಳುವದು ಕಷ್ಟಕರವಾಗಬಹುದು; ಇಲ್ಲಿ ಬಣ್ಣಿಸಲಾಗಿರುವ ಕ್ರೈಸ್ತರು ಆತ್ಮೀಕವಾಗಿ ಅದೇ ಸ್ಥಿತಿಯಲ್ಲಿದ್ದರು.

ಎಲ್ಲಾ ನಂಬಿಗಸ್ತ ಕ್ರೈಸ್ತರು ಸತ್ಯಗಳನ್ನು ಮುಂದಿನ ಪೀಳಿಗೆಗಳಿಗೆ ಹಸ್ತಾಂತರಿಸುವಷ್ಟರ ಮಟ್ಟಿಗೆ ಸಾಕಷ್ಟು ತಿಳಿದವರಾಗಿರತಕ್ಕದ್ದು (ನೋಡಿರಿ 2 ತಿಮೊಥೆ 2:2). ಅವರು ಎಂದಿಗೂ ಪೂರ್ಣಾವಧಿ ಬೋಧಕರಾಗಲು ಸಾಧ್ಯವಿಲ್ಲ, ಆದರೆ ಅವರು ಕಾರ್ಯರೂಪದ, ಅನುದಿನದ ಬೋಧಕರಾಗಿರಬಲ್ಲರು. ಆದಿ ಸಭೆಯಲ್ಲಿ ಬೋಧಿಸುವ ವಿಶೇಷ ನೇಮಕವನ್ನು ಹೊಂದಿದ್ದ ಬೋಧಕರಿದ್ದರು (ಎಫೆಸ 4:11); ಇನ್ನು ಕೆಲವರು ದೈನಂದಿನ ಬೋಧನೆಯನ್ನು ಮಾಡುತ್ತಿದ್ದರು (ಅಪೊಸ್ತಲರ ಕೃತ್ಯಗಳು 5:32; 8:4). ಪ್ರತಿಯೊಬ್ಬ ಕ್ರೈಸ್ತನು – ಆತನು ಅತ್ಯುತ್ತಮ ಬೋಧಕನಾಗಿರಲು ಸಾಧ್ಯವಾಗಲಿಲ್ಲವಾದಾಗ್ಯೂ – ತನ್ನ ನಿರೀಕ್ಷೆಯನ್ನು "ಸಮರ್ಥನೆ ಮಾಡಿಕೊಳ್ಳಲು" ಮತ್ತು ಉತ್ತರವನ್ನು ಕೊಡುವದಕ್ಕೆ ಬೇಕಾಗುವಷ್ಟು ತಿಳಿದಿರುವವನಾಗಿರತಕ್ಕದ್ದು (1 ಪೇತ್ರ 3:15).

ಮೊಟ್ಟ ಮೊದಲ ಬಾರಿಗೆ ಮಾಡಲ್ಪಡುವ ಈ ಖಂಡನೆಯಲ್ಲಿ, ಲೇಖಕನು ಅವರ ಆತ್ಮೀಕ ಅಪರಿಪಕ್ವತೆಗೆ ವಾಚಕರೇ ಹೊಣೆಗಾರರೆಂದು ಆರೋಪಿಸುತ್ತಾನೆ. ಸಭೆಯು ಆರಂಭಗೊಂಡ ವೇಳೆ, ಅಪೊಸ್ತಲರು ಕೈಗಳನ್ನಿಡುವ ಮೂಲಕ ಸ್ವಲ್ಪ ಜನ ಕ್ರೈಸ್ತರು ಆತ್ಮೀಕ ವರಗಳನ್ನು ಹೊಂದಿಕೊಂಡರು (1 ಕೊರಿಂಥ 12:28; ನೋಡಿರಿ ಅಪೊಸ್ತಲರ ಕೃತ್ಯಗಳು 8:14-17; 19:1-6; ರೋಮಾ 1:11; 1 ಕೊರಿಂಥ 12:4-7; 2 ತಿಮೊಥೆ 1:6). ಒಂದು ತಕ್ಕದಾದ ಕಾಲಾವಧಿಯೊಳಗೆ ಬೋಧಕರಾಗದಿರುವದಕ್ಕಾಗಿ ಮಾಡಿದ ಈ ಖಂಡನೆಯು ಈ ವಿಶೇಷ ವರ ಹೊಂದಿದ ಬೋಧಕರ ಜೊತೆಗೂಡಿ ಬೋಧಿಸುವದಕ್ಕೆ ದೊರಕಿದ್ದ ಅದ್ಭುತಕರವಾದ ವರಗಳು ಗತಿಸಿ ಹೋಗುವವೆಂಬುದನ್ನು ಸೂಚಿಸುತ್ತದೆ. ಅವರ ಸ್ಥಾನಗಳನ್ನು ತುಂಬುದಕ್ಕಾಗಿ ಇತರರು ಪರಿಪಕ್ವವುಳ್ಳ ಬೋಧಕರಾಗುವಂತೆ ತಮ್ಮಲ್ಲಿರುವ ಸ್ವಾಭಾವಿಕವಾದ ಪ್ರತಿಭೆಗಳನ್ನು ಅಭಿವೃದ್ಧಿಪಡಿಸಿಕೊಳ್ಳುವ ಅಗತ್ಯವಿರುವದು. ಶಾಸ್ತ್ರಗಳ ಪೂರ್ಣವಾದ ಪ್ರಕಟನೆಯು ಕೊಡಲ್ಪಡುವ ತನಕ ಈ ವಿಶೇಷವಾಗಿ ವರಗಳನ್ನು ಹೊಂದಿದ್ದ ಬೋಧಕರು ಸಭೆಯನ್ನು ಮಾರ್ಗದರ್ಶಿಸುವದಕ್ಕೆ ಸಹಾಯ ಮಾಡಿದರೆಂಬುದನ್ನು ಎಫೆಸ 4:8-15 ವಚನಗಳು ತೋರಿಸಿ ಕೊಡುತ್ತವೆ. ಎಳೆಗೂಸಾಗಿದ್ದ ಸಭೆಯನ್ನು ಪರಿಣಾಮಕಾರಿ ಸೇವೆಯಲ್ಲಿ ಅಭಿವೃದ್ಧಿ ಪಡಿಸುವದಕ್ಕಾಗಿ ಅದ್ಭುತಕರವಾದ ವರಗಳು ಅಸ್ತಿತ್ವದಲ್ಲಿದ್ದವು, ಆದರೆ ಮುಂದಿನ ಪೀಳಿಗೆ ಕ್ರೈಸ್ತರು ಆತ್ಮೀಕ ಬೆಳವಣಿಗೆಯಿಂದ ವರ್ಧನೆಗೊಂಡ ಸ್ವಾಭಾವಿಕವಾದ ಪ್ರತಿಭೆಯ ಮೇಲೆ ಅವಲಂಭಿತವಾಗಬೇಕಾಗಿತ್ತು.

ಬೋಧಿಸಬೇಕೆಂಬ ಕರ್ತವ್ಯವನ್ನು ಮನಸ್ಸಿನಲ್ಲಿಟ್ಟುಕೊಂಡು ಪೌಲನು 2 ತಿಮೊಥೆ 2:2ರಲ್ಲಿ ಬರೆಯುತ್ತಾನೆ: "ನೀನು ನನ್ನಿಂದ ಅನೇಕಸಾಕ್ಷಿಗಳ ಮುಂದೆ ಕೇಳಿದ ಉಪದೇಶವನ್ನು ಇತರರಿಗೆ ಬೋಧಿಸ ಶಕ್ತರಾದ ನಂಬಿಗಸ್ತರಾದ ಮನುಷ್ಯರಿಗೆ ಒಪ್ಪಿಸಿ ಕೊಡು." ಸತ್ಯವನ್ನು ಮುಂದಿನ ಪೀಳಿಗೆಗೆ ಸಮರ್ಪಕವಾಗಿ ಪ್ರಸರಣೆ ಮಾಡುವದರ ಮೇಲೆ ಸಭೆಯ ಭವಿಷ್ಯವು ಅವಲಂಭಿತವಾಗಿದೆ ಎಂಬುದನ್ನು ಆತನು ಸೂಚ್ಯಾರ್ಥವಾಗಿ ತಿಳಿಸುತ್ತಾನೆ.

ವ್ಯಕ್ತಿಗತವಾದ ಬೆಳವಣಿಗೆಯು ಪರಿಶ್ರಮದ ಮೂಲಕ ಬರುತ್ತದೆ. ಬೆಳೆಯುವದಕ್ಕೆ ವಿಫಲಾಗುವದು, ಅಥವಾ ನಂಬಿಕೆಯ ಮೂಲಪಾಠಗಳನ್ನು ಮರೆತು ಬಿಡುವಷ್ಟರ ಮಟ್ಟಿಗೆ ಹಿಂಚಲನೆಯು, ನಾವು ಅನುಭವಿಸಬೇಕೆಂದು ಕ್ರಿಸ್ತನು ಬಯಸುವದಕ್ಕೆ ವಿರುದ್ಧವಾದದ್ದಾಗಿ ರುತ್ತದೆ. ಇಬ್ರಿಯ ಕ್ರೈಸ್ತರು ತಮ್ಮ ಸಭೆಯಲ್ಲಿ ಅದು ಓದಲ್ಪಡುವದನ್ನು ಕೇಳಿಸಿಕೊಂಡಾಗ ಈ ತೀಕ್ಷ್ಣವಾದ ಖಂಡನೆಯು ಅವರನ್ನು ಎಚ್ಚರವಾಗುವಂತೆ ಮಾಡಿರತಕ್ಕದ್ದಾಗಿದೆ.

ಯಾರೋ ಒಬ್ಬರು, "ನನಗೆ ಜವಾಬ್ದಾರಿಯು ಇಷ್ಟವಿಲ್ಲವಾದ್ದರಿಂದ ನಾನು ಒಬ್ಬ ಬೋಧಕನಾಗಿರುವಂತೆ ಬೆಳೆದಿರುವದಿಲ್ಲ" ಎಂದು ಹೇಳುವದನ್ನು ನಾವು ಹೆಚ್ಚುಕಡಿಮೆ ಕೇಳಿಸಿಕೊಳ್ಳಬಲ್ಲೆವು. ಒಬ್ಬ ಬೋಧಕನಾಗುವದರಲ್ಲಿ ಬಹಳ ದೊಡ್ಡ ಜವಾಬ್ದಾರಿಯು ಇರುತ್ತದೆಂದು ಯಾಕೋಬನು ಹೇಳಿದನು. ಬೇರೆಯವರಿಗೆ ಮಾಹಿತಿಯನ್ನು ನೀಡುವವರು ಒಂದು ಕಠಿಣವಾದ ತೀರ್ಪು ಹೊಂದುವರೆಂದು ಆತನು ಹೇಳುತ್ತಾನೆ (ಯಾಕೋಬ 3:1). ಈ ಕಠಿಣವಾದ ತೀರ್ಪಿನ ವಾಸ್ತವಾಂಶವು ಸುವಾರ್ತೆಯನ್ನು ಹಂಚಿಕೊಳ್ಳಬಲ್ಲವರಾಗು ವಂತೆ ಬೆಳೆಯುವದರಲ್ಲಿ ವಿಶ್ವಾಸಿಗಳನ್ನು ನಿರುತ್ಸಾಹಗೊಳಿಸಬಾರದು. ನಾವು ಸತ್ಯವನ್ನು ನಂಬಿಗಸ್ತರಾಗಿ ಬೇರೆಯವರಿಗೆ ಹಸ್ತಾಂತರಿಸುವಾಗ, ನಾವು ಅವರಿಗೆ ದೊಡ್ಡ ಆಶೀರ್ವಾದವಾಗುತ್ತೇವೆ. ದೇವರು ನಮ್ಮ ಸಂದೇಶವನ್ನು ಮತ್ತು ನಮ್ಮ ಮೂಲಕ ಸುವಾರ್ತೆಯ ಸಂದೇಶವನ್ನು ಕೇಳಿಸಿಕೊಳ್ಳುವವರನ್ನು ಆಶೀರ್ವದಿಸುತ್ತಾನೆ. ಕೆಲವೇ ಕೆಲವು ಸಂಗತಿಗಳು ಕ್ರೈಸ್ತನನ್ನು ಸಂತೋಷಗೊಳಿಸಬಲ್ಲವು ಆದರೆ ಬೇರೆಯವರಿಗೆ ಉಪದೇಶಿಸಿ ಅವರನ್ನು ಪರಿವರ್ತನೆಗೊಳಿಸುವದು ಹೆಚ್ಚು ಸಂತೋಷಗೊಳಿಸುವದು. ಯೋಹಾನನು ಅದನ್ನು ಈ ರೀತಿಯಲ್ಲಿ ಹೇಳುತ್ತಾನೆ: "ನನ್ನ ಮಕ್ಕಳು ಸತ್ಯವನ್ನನುಸರಿಸಿ ನಡೆಯುವವರಾಗಿದ್ದಾರೆಂದು ಕೇಳುವದಕ್ಕಿಂತ ಹೆಚ್ಚಾದ ಸಂತೋಷವು ನನಗಿಲ್ಲ" (3 ಯೋಹಾನ 4).

**ದೈವೋಕ್ತಿಗಳ ಮೂಲಪಾಠ**ದ ಭಾವನೆಯು ಹಳೆಯ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆ ಎರಡಕ್ಕೂ ಅನ್ವಯವಾಗಬಲ್ಲದು. ಹಳೆಯ ಒಡಂಬಡಿಕೆಯ ಧರ್ಮಶಾಸ್ತ್ರವು ಅಪೊಸ್ತಲರ ಕೃತ್ಯಗಳು 7:38ರಲ್ಲಿ "ಜೀವಕರವಾದ ದೈವೋಕ್ತಿಗಳು" ಎಂದು ಕರೆಯಲ್ಪಟ್ಟಿದೆ. ರೋಮಾ 3:2ನೇ ವಚನವು ಅದನ್ನು "ದೈವೋಕ್ತಿಗಳು" ಎಂದು ಚಿತ್ರಿಸುತ್ತದೆ. ಹೊಸ ಒಡಂಬಡಿಕೆಯ ಸಿದ್ಧಾಂತವು "ದೈವೋಕ್ತಿಗಳು" ಎಂದು ಕರೆಯಲ್ಪಟ್ಟಿದೆ (1 ಪೇತ್ರ 4:11). ಧರ್ಮಶಾಸ್ತ್ರವು ಇಸ್ರಾಯೇಲ್ಯರನ್ನು ಕ್ರಿಸ್ತನ ಬೋಧನೆಗಾಗಿ ಸಿದ್ಧಗೊಳಿಸಿದವು. ಅದು "ಕ್ರಿಸ್ತನಲ್ಲಿ ಸೇರುವ ತನಕ ನಮ್ಮನ್ನು ಕಾಯುತ್ತದೆ" ಎಂದು ಕರೆಯಲ್ಪಟ್ಟಿದೆ (ಗಲಾತ್ಯ 3:24). ವಿಶೇಷವಾಗಿ ಅದು ಯೆಹೂದ್ಯರ ವಿಷಯದಲ್ಲಿ ಆ ರೀತಿಯಲ್ಲಿ ನಡೆದುಕೊಂಡಿತು, ಆದರೆ ಅನ್ಯಜನಾಂಗದ ಕ್ರೈಸ್ತರಿಗೆ ಸಹ ಬೋಧಕನಾಗಿ ಇರುತ್ತದೆ. ನಾವು ಹಳೆಯ ಒಡಂಬಡಿಕೆಯಿಂದ ವಿಧೇಯತೆಯ ತತ್ವಗಳನ್ನು ಕಲಿಯುತ್ತೇವೆ, ಮತ್ತು ಹೊಸ ಒಡಂಬಡಿಕೆಯಿಂದ ನಾವು ಈ ಹೊತ್ತು ವಿಧೇಯರಾಗಬೇಕೆಂಬುದನ್ನು ಕಲಿತುಕೊಳ್ಳುತ್ತೇವೆ.

ಇಬ್ರಿಯ 6:1ರಲ್ಲಿ ನಾವು "ಕ್ರಿಸ್ತನ ವಿಷಯವಾದ ಪ್ರಥಮ ಬೋಧನೆ" ಯ ಕುರಿತ ಉಲ್ಲೇಖವನ್ನು ನೋಡುತ್ತೇವೆ. "ದೈವೋಕ್ತಿಗಳು" ಮತ್ತು ಕ್ರಿಸ್ತನ ತತ್ವಗಳ ನಡುವೆ ಒಂದು ವಿರುದ್ಧ ಹೋಲಿಕೆಯಿರಬಹುದಾಗಿದೆ, ಆದರೆ ಈ ಪ್ರಸ್ತಾಪಿಸಲಾಗಿರುವ ಅಂಶಗಳು ಯುಗದಿಂದ ಮತ್ತೊಂದಕ್ಕೆ ಅತಿವ್ಯಾಪನೆ ಮಾಡುತ್ತವೆ. "ತತ್ವಗಳು [ಮೂಲಪಾಠಗಳು]" (στοιχεῖον, *stoicheion*) ಎಂಬುದರ ಅರ್ಥವು "ಅಕ್ಷರಮಾಲೆಗಳು" ಅಥವಾ ಭೌತಿಕ ವಿಶ್ವದ ರಚನೆಯಲ್ಲಿನ ಮೂಲಭೂತ "ಅಂಶಗಳು" ಎಂದು ಸಹ ಅರ್ಥವನ್ನು ಕೊಡಬಹು ದಾಗಿದೆ (2 ಪೇತ್ರ 3:10, 12).[36] ಇಲ್ಲಿರುವ ಯೋಚನೆಯು "ನೀವು ಕ್ರೈಸ್ತತ್ವ ಅಆಇಗಳನ್ನು ಪುನಃ ಕಲಿಯುವ ಅಗತ್ಯವಿರುತ್ತದೆ" ಎಂದಾಗಿರುತ್ತದೆ. ಒಂದು ಅರ್ಥದಲ್ಲಿ ನಾವು ನಮ್ಮ ಅಆಇಗಳನ್ನು ಎಂದಿಗೂ ಹಿಂದಕ್ಕೆ ಬಿಟ್ಟು ಬಿಡುವದಿಲ್ಲ, ಆದರೆ ಅವುಗಳ ನಿರಂತರವಾದ ಬಳಕೆಯು ಆ ಅಕ್ಷರಗಳನ್ನು ನಮ್ಮ ಸ್ವಭಾವದ ಭಾಗವಾಗುವಂತೆ ಮಾಡಿರುವದರಿಂದ ಅವುಗಳ ಪುನರುಚ್ಛಾರ ಮಾಡುವದನ್ನು ನಾವು ಮುಂದುವರೆಸುವದಿಲ್ಲ. ಮತ್ತೊಂದು ಸನ್ನಿವೇಶದಲ್ಲಿ, ಪ್ರಥಮ ತತ್ವಗಳನ್ನು ಕಲಿತುಕೊಳ್ಳಲು ವಿಫಲರಾಗುವದು ಒಂದು ರೀತಿಯಲ್ಲಿ ಮುಂದುವರೆದ ಗಣಿತದ ವಿದ್ಯಾರ್ಥಿಯು ಎಂದಿಗೂ

ಮಗ್ಗಿಯನ್ನು ಕಲಿತಿಲ್ಲದೆ ಇರುವದಾಗಿದೆ. ಪ್ರತಿಯೊಂದು ಸಮಸ್ಯೆಯು ಬಂದಂತೆ ಆತನು ಅವುಗಳನ್ನು ಪುನಃ ಕಂಠಪಾಠ ಮಾಡಬೇಕಾಗುತ್ತದೆ.

ದೇವರ ವಾಕ್ಯದಲ್ಲಿ **ಹಾಲು** ಇರುತ್ತದೆ ಮತ್ತು "ಮಾಂಸ" (KJV) ಇರುತ್ತದೆ, ಅಥವಾ **ಗಟ್ಟಿಯಾದ ಆಹಾರ** ಇರುತ್ತದೆ. ಕೇವಲ "ಹಾಲು" ಮಾತ್ರವೇ ಸೇವಿಸುವದಕ್ಕಷ್ಟೇ ಯೋಗ್ಯರಾಗಿ ಉಳಿಯುವದ ಒಂದು ನಾಚಿಕೆಯ ವಿಷಯವಾಗಿದೆ. ಇದು ಪ್ರಥಮ ಶತಮಾನದಲ್ಲಿ ಒಂದು ಸರ್ವಸಾಧಾರಣವಾಗಿದ್ದ ರೂಪಕವಾಗಿತ್ತು ಮತ್ತು ಪೌಲನು ಅದನ್ನು ಬಳಸುತ್ತಾನೆ (1 ಕೊರಿಂಥ 3:1, 2).

**ವಚನ 13.** "ಹಾಲು ಕ್ರೈಸ್ತರು" ಯಾರೆಂದರೆ **ನೀತಿವಾಕ್ಯದಲ್ಲಿ ಅನುಭವವಿಲ್ಲದವರು**, ಅಥವಾ "ದೇವರ ವಾಕ್ಯದಲ್ಲಿ ನಿಪುಣತೆಯಿಲ್ಲದವರು" (NKJV) ಆಗಿದ್ದಾರೆ. ಕೊರಿಂಥದವರಲ್ಲಿದ್ದ ಪ್ರೀತಿಯ ಕೊರತೆಯು ಅವರನ್ನು ಬೆಳೆಯದಂತೆ ತಡೆದಿತ್ತು. ಜ್ಞಾನದ ಕೊರತೆಯೇ ಯಾವಾಗಲೂ ಬೆಳವಣಿಯೆನ್ನು ತಡೆಯುವಂಥದ್ದಾಗಿರುವದಿಲ್ಲ, ಯಾಕೆಂದರೆ ಕೊರಿಂಥದ ಸಭೆಯು ಜ್ಞಾನವನ್ನು ಒದಗಿಸುವದಕ್ಕೆ ಅವಶ್ಯಕವಾದ ಸಕಲ ಆತ್ಮೀಯ ವರಗಳನ್ನು ಹೊಂದಿತ್ತು (1 ಕೊರಿಂಥ 1:6, 7). ಕೇವಲ ಓದುವಕ್ಕಿಂತ ಹೆಚ್ಚಿನದ್ದಾಗಿದ್ದ ಅವರ ವಾಕ್ಯದ ಧ್ಯಾನದ ಕೊರತೆಯು ಸದಾ ಎಳೆಗೂಸುತನಕ್ಕೆ ಅವರನ್ನು ನಡಿಸಿತ್ತು. ಕೆಲವು ಬೋಧಕರು ಸಭಿಕರಿಗೆ ಕೇವಲ "ಹಾಲು" ಅಗತ್ಯವಿದೆಯೆಂದು ಯೋಚಿಸುವಂತೆ ತೋರುತ್ತದೆ, ಮತ್ತು ಅವರು ಮೂಲಪಾಠಗಳನ್ನು ದಾಟಿ ಎಂದಿಗೂ ಹೋಗುವದಿಲ್ಲ – ಬಹುಶಃ ಅವರ ಸ್ವತಃ ಸಾಕಾಷ್ಟು ಜ್ಞಾನವಿಲ್ಲದಿರುವದು ಕಾರಣವಾಗಿರಬಹುದು. ಇನ್ನು ಕೆಲವರು ಬಹುಪಾಲು ಸದಸ್ಯರಿಗೆ ಅತ್ಯಂಥ ಗಹನವೇನಿಸುವ ಸಂದೇಶಗಳನ್ನು ಪ್ರಸಂಗಿಸುತ್ತಾರೆ. ನಮಗೆ ಮೂಲಪಾಠಗಳ ಮತ್ತು ಹೆಚ್ಚು ಮುಂದುವರೆದ ತತ್ವಗಳ ಅಗತ್ಯತೆಯಿರುತ್ತದೆ. "ಮಾಂಸ"ವನ್ನು ಕೊಡದೆ ಒಂದು ಸಭೆಯ ಸದಸ್ಯರ್ನು "ಪೂರ್ಣವಾಗಿ ಬೆಳೆದವರಾಗುವಂತೆ" ಬೋಧಕನು ಹೇಗೆ ಸಹಾಯವನ್ನು ಮಾಡಬಲ್ಲನು?

**ವಚನ 14.** ಇಲ್ಲಿ **ಪ್ರಾಯಸ್ಥರು**, ಅಥವಾ ಆತ್ಮೀಕ ವಿವೇಚನೆಯ "ಪೂರ್ಣ ಪಕ್ವತೆ"ಯನ್ನು ತಲುಪಿರುವವರನ್ನು ಸೂಚಿಸಿ ಹೇಳಲಾಗಿರುತ್ತದೆ. ಇಂಥ ಕ್ರೈಸ್ತರು ಬಹಳ ವಯಸ್ಸಾದವರಾಗಿ ಇಲ್ಲದಿರಬಹುದು. ಈ ವ್ಯಕ್ತಿ ಮತ್ತು 13ನೇ ವಚನ "ಕೂಸು" ಆಗಿರುವಾತನ ನಡುವೆ ವಿರುದ್ಧತೆಯಿರುತ್ತದೆ. ಕೂಸಿನಂತಿರುವವನು ಅಂತಿಮ ರಕ್ಷಣೆಯನ್ನು ತಲುಪುವದಕ್ಕೆ "ವಾಕ್ಯದ ಹಾಲನ್ನು" ಬಯಸುವವನಾಗಿರಬೇಕು (1 ಪೇತ್ರ 2:2). ವಾಕ್ಯದಲ್ಲಿ ನಿರಂತರವಾಗಿ ಆಳಕ್ಕೆ ಅಗೆಯುವ ಮೂಲಕ ಮತ್ತು ಕಲಿತದ್ದನ್ನು ಬಳಸಿಕೊಳ್ಳುವ ಮೂಲಕ ಒಬ್ಬನು **ಇದು ಒಳ್ಳೇದು ಅದು ಕೆಟ್ಟದ್ದು ಎಂಬ ಭೇದವನ್ನು** ತಿಳಿಯಬಲ್ಲನು. ಇದು ಪ್ರತಿಯೊಬ್ಬ ದೇವಮನುಷ್ಯನ ಗುರಿಯಾಗಿರತಕ್ಕದ್ದು. ಉದಾಹರಣೆಗೆ, ಇಬ್ರಿಯರಿಗೆ ಪತ್ರಿಕೆಯು ಒಂದು ಸವಾಲು ಆಗಿರುತ್ತದೆ ಯಾಕೆಂದರೆ ಅದು ಬಹಳಷ್ಟು **ಗಟ್ಟಿಯಾದ ಆಹಾರವನ್ನು** ಒಳಗೊಂಡಿರುತ್ತದೆ. ಅದನ್ನು ಜಾಗರೂಕತೆಯಿಂದ ಅಧ್ಯಯನ ಮಾಡುವದು ಮತ್ತು ನಮ್ಮ ತಿಳುವಳಿಕೆಯನ್ನು ನಿರ್ಧರಿಸಿಕೊಳ್ಳುವದು ನಮ್ಮ ಸ್ವಂತ ಆತ್ಮೀಕ ಬೆಳವಣಿಗೆಯ ಮಟ್ಟಗಳ ಗುಣಾಂಕವನ್ನು ನಿರ್ಧರಿಸುವ ಒಂದು ವಿಧವಾಗಿರುತ್ತದೆ.

## ಅನ್ವಯಿಸುವಿಕೆ

### ಒಬ್ಬ ಪರಿಣಾಮಕಾರಿ ಮಹಾಯಾಜಕ (5:1, 2)

ಒಬ್ಬ ಮಹಾಯಾಜಕನು ದೇವರಿಂದ ನೇಮಿಸಲ್ಪಟ್ಟಂಥ ಮನುಷ್ಯರೊಳಗಿನ ಒಬ್ಬ

ಮನುಷ್ಯನಾಗಿರಬೇಕಿತ್ತು. ಆತನು ಪಾಪನಿವಾರಣೆಗಾಗಿ ಯಜ್ಞಗಳನ್ನು ಅರ್ಪಿಸಬೇಕಿತ್ತು, ಜ್ಞಾನವಿಲ್ಲದವರು ಮತ್ತು ಮಾರ್ಗತಪ್ಪಿರುವವರೊಂದಿಗೆ ಸೌಮ್ಯತೆಯಿಂದ ನಡಕೊಳ್ಳಬೇಕಿತ್ತು.

ಆರೋನನು ಈ ಅರ್ಹತೆಗಳನ್ನು ಉತ್ತಮವಾಗಿ ನೆರವೇರಿಸಿದನು. ಆತನು ಮತ್ತು ಮೋಶೆಯು ಕಾನಾನ್ ದೇಶವನ್ನು ಪ್ರವೇಶಿಸುವದಕ್ಕೆ ನಿರಾಕರಿಸಿದ ಇಸ್ರಾಯೇಲ್ಯರ ಕೃತ್ಯಗಳ ನಿಮಿತ್ತವಾಗಿ ಅತ್ಯಂಥ ದುಃಖಗೊಂಡವರಾಗಿ ತಮ್ಮ ಮುಖಗಳ ಮೇಲೇ ಬೋರಲ ಬಿದ್ದರು. ದಾರಿತಪ್ಪಿದವರಾಗಿದ್ದ, ದೇವರಿಗೆ ಅವಿಧೇಯರಾಗಿದ್ದ ಜನರನ್ನು ಮತ್ತು ಆತನು ಇಸ್ರಾಯೇಲ್ಯರ ಮೇಲೆ ನೇಮಿಸಿದ್ದ ನಾಯಕರನ್ನು ಬೇಡಿಕೊಂಡು (ಅರಣ್ಯಕಾಂಡ 14:5).

ಮಹಾಯಾಜಕನ ಕರ್ತವ್ಯವು ಜನರ ಸೇವೆ ಮಾಡುವದು, ಅವರಿಗೆ ದುಃಖ, ವೇದನೆ ಮತ್ತು ಅಪರಾಧಿತ್ವಗಳನ್ನು ತೊಲಗಿಸಿಕೊಳ್ಳುವದಕ್ಕೆ ಸಹಾಯ ಮಾಡುವದು ಆಗಿತ್ತು. ಆತನು ಜನರಿಗೆ ಪ್ರತಿಯೊಂದು ಯಜ್ಞದ ಉದ್ದೇಶವನ್ನು ವಿವರಿಸುತ್ತಿದ್ದನು, ಆ ಮೂಲಕ ಅವರ ಪಾಪದ ವಿಷಯದಲ್ಲಿ ಕ್ರಮವನ್ನು ಕೈಕೊಂಡು ಕ್ಷಮಾಪನೆಯನ್ನು ಸ್ವೀಕರಿಸಿಕೊಳ್ಳುವಂತೆ ಅವರಿಗೆ ಸಹಾಯ ಮಾಡುತ್ತಿದ್ದನು. ಮೋಶೆಯ ಜೊತೆಗೂಡಿ ಆರೋನನು ಸಹ ಇಸ್ರಾಯೇಲ್ಯರನ್ನು ಉಳಿಸಬೇಕೆಂದು ದೇವರನ್ನು ಬೇಡಿಕೊಂಡನು (ಅರಣ್ಯಕಾಂಡ 14:11-19). ದೇವರು ಆ ಪ್ರಾರ್ಥನೆಗೆ ಉತ್ತರಿಸಿದನು, ಆದರೆ ತಮ್ಮ ಪಾಪಗಳಿಗೋಸ್ಕರ ತತ್ಕಾಲಿಕ ಶಿಕ್ಷೆಯಾದ ಮರಣವನ್ನು ತಪ್ಪಿಸಿಕೊಳ್ಳುವಂತೆ ಆತನು ತಪ್ಪು ಮಾಡಿದ್ದ ದೋಷಿಗಳಿಗೆ ಅವಕಾಶವನ್ನು ಕೊಡಲಿಲ್ಲ (14:20-24).

## ದೇವರ ಕುರಿತ ನಮ್ಮ ಜ್ಞಾನ (5:1, 2)

ತಂದೆಯಾದ ದೇವರ ಕುರಿತಾದ ನಮ್ಮ ಜ್ಞಾನವು ಮಹಾಯಾಜಕನಾಗಿ ಯೇಸು ಕ್ರಿಸ್ತನ ಪ್ರಕಟಣೆಯ ಮೂಲಕ ಬರುತ್ತದೆ. ಇದರಲ್ಲಿ ಬಹಳಷ್ಟು ಭಾಗವು ಇಬ್ರಿಯರಿಗೆ ಪತ್ರಿಕೆಯಲ್ಲಿ ಸಿಕ್ಕುತ್ತದೆ ಹೊರತು ಮತ್ತೇಲ್ಲಿಯೂ ಇಲ್ಲ. ದೇವರು ಮತ್ತು ಆತನ ಗುಣಸ್ವಭಾವ ಕ್ರಿಸ್ತನಲ್ಲಿ ತೋರ್ಪಡುತ್ತದಾದ್ದರಿಂದ ನಾವು ದೇವರನ್ನು ಬಲ್ಲೆವು (ಯೋಹಾನ 14:5-11; ಕೊಲೊಸ್ಸೆ 2:9). ನಾವು ಕ್ರಿಸ್ತನನ್ನು ವಾಕ್ಯವನ್ನು ಅಧ್ಯಯನ ಮಾಡುವ ಮೂಲಕ ಬಲ್ಲವರಾಗಿದ್ದೇವೆ ಹೊರತು ಆತನೊಂದಿಗೆ "ಒಂದು ವೈಯಕ್ತಿಕ ಅಥವಾ ನಿಕಟವಾದ ಸಂಬಂಧ ಹೊಂದಿರುವದರ" ಮೂಲಕವಲ್ಲ.

ಕ್ರೈಸ್ತನು ತಂದೆ, ಮಗ, ಅಥವಾ ಪವಿತ್ರಾತ್ಮನಿಂದ ಒಂದು ನೇರವಾದ "ಅನುಭವ" ಹೊಂದಿಕೊಳ್ಳುವದಿಲ್ಲ. ಪ್ರಥಮ ಶತಮಾನದಲ್ಲಿನ ಪವಿತ್ರಾತ್ಮ ಪ್ರೇರಿತ ಅಪೊಸ್ತಲರ ಸಂಗಡ ಮಾತಾಡಿದಂತೆ ಕರ್ತನು ಈ ದಿನಗಳಲ್ಲಿ ನಮ್ಮೊಂದಿಗೆ ನೇರವಾಗಿ ಮಾತಾಡುವದಿಲ್ಲ. ಅನೇಕರು ದೇವರ ಸಂಗಡ ಒಂದು "ವೈಯಕ್ತಿಕ ಅಥವಾ ನಿಕಟವಾದ ಸಂಬಂಧ"ವನ್ನು ಹೊಂದಬೇಕೆಂದು ಹಂಬಲಿಸುತ್ತಾರೆ, ಆದರೆ ಈ ಬಯಕೆಯು ಶಾಸ್ತ್ರದ ಬದಲಾಗಿ ಭಾವನಾತ್ಮಕತೆಯ ಮೇಲೆ ಅವಲಂಭಿತವಾಗಿರುತ್ತದೆ.

ಯಾವದೇ ದೈವಿಕ ಪ್ರಕಟನೆ ಅಥವಾ ಆದ್ಭುತವು ಏಕಾಂಗಿಯಾಗಿ ನಿಲ್ಲಲಿಲ್ಲ, ನನಗೆ ಒಂದು "ದೈವಿಕ" ಅನುಭವವಾಯಿತೆಂದು ಹೇಳಿಕೊಳ್ಳುವ ಯಾವನನ್ನಾದರೂ ನಂಬಬೇಕೆಂದು ಸಹ ದೇವರು ನಮ್ಮಿಂದ ಬಯಸುವದಿಲ್ಲ. ಪೌಲನು ತನ್ನ ಹೇಳಿಕೆಗೆ ಬೆಂಬಲವಾಗಿ "ಅಪೊಸ್ತಲನಿಗೆ ಇರತಕ್ಕ ಲಕ್ಷಣಗಳ"ನ್ನೆಲ್ಲಾ ಹೊಂದಿದ್ದನು (2 ಕೊರಿಂಥ 12:12). ಇಂದು ಜನರಿಗೆ ಅದು ಸಾಧ್ಯವಿಲ್ಲ!

**ಜ್ಞಾನವಿಲ್ಲದವರನ್ನೂ ಮಾರ್ಗತಪ್ಪಿದವರನ್ನೂ ತಾಳ್ಮೆಯಿಂದ ಸಹಿಸಿಕೊಳ್ಳುವದು (5:2)**

ಸ್ತೋಯಿಕರೊಳಗೆ, ಪಾಪಿಗಳ ಕಡೆಗೆ ತಾಳ್ಮೆಯಿಂದ ಕೂಡಿದ ಸಹನೆಯನ್ನು ತೋರುವದು ನಿಷ್ಪ್ರಯೋಜಕವಾಗಿರುತ್ತಿತ್ತು. ಭಾವೋದ್ರೇಕ ಮತ್ತು ಕನಿಕರಗಳು ಇಲ್ಲದಿರುವದು ಅವಶ್ಯಕವಾದದ್ದೆಂದು ಅವರು ಭಾವಿಸಿದ್ದರು. ಭಾವೋದ್ರೇಕವುಳ್ಳವರ ಕಡೆಗೆ ಅವರ ಮನೋಭಾವವು ಏನಾಗಿತ್ತೆಂದರೆ "ಅಂಥವರು ಸುವ್ಯವಸ್ಥೆಯಿಂದ ಕೂಡಿದ ಸಮಾಜಕ್ಕೆ ಅವರು ಒಂದು ಪೀಡೆ ಇದ್ದಂತೆ" ಎಂದಾಗಿತ್ತು.[37] ಹೇಗೂ, ಸಭೆಯು ಯಾವಾಗಲೂ – ಕ್ರಿಸ್ತನು ಇದ್ದ ರೀತಿಯಲ್ಲಿಯೇ – "ಜೋಲುಬಿದ್ದ ಕೈಗಳೂ ನಡುಗುವ ಮೊಣಕಾಲುಗಳೂ" ಉಳ್ಳವವರ ಕಡೆಗೆ ಕನಿಕರವುಳ್ಳವರಾಗಿರತಕ್ಕದ್ದು (12:12, 13). ಮನುಷ್ಯರೊಳಗೆ ಅಗ್ರಗಣ್ಯನಾಗಿದ್ದ ಒಬ್ಬ ಮಹಾಯಾಜಕನು, ನಿರಂತರವಾಗಿ ಸಹಾಯದ ಅಗತ್ಯದಲ್ಲಿರುವವರ ಕಡೆಗೆ ಕೋಮಲವಾದ ಕನಿಕರವುಳ್ಳವನಾಗಿರಬೇಕಿತ್ತು.

ಖಂಡಿತವಾಗಿಯೂ, ಹಠಮಾರಿತನವುಳ್ಳ ಪಾಪಿಗಳು ಇದ್ದಾರೆ; ಆದರೆ ದಾರಿತಪ್ಪಿಸಲ್ಪಟ್ಟಿರುವ ಇನ್ನೂ ಅನೇಕ ಆತ್ಮಗಳು "ಕುರುಬನಿಲ್ಲದ ಕುರಿಗಳ" ರೀತಿಯಲ್ಲಿರುತ್ತಾರೆ (ಮತ್ತಾಯ 9:36). ನಾವು ಅವರ ಮೇಲೆ ಕನಿಕರವನ್ನು ತೋರಬೇಕು, ನಾವು ಸಹ ಶೋಧನೆಗೊಳಗಾಗದ ಹಾಗೆ ನಮ್ಮ ವಿಷಯದಲ್ಲಿ ನೋಡಿಕೊಳ್ಳಬೇಕು (ಗಲಾತ್ಯ 6:1, 2; NKJV). ಅವರು ದೇವರ ಬಳಿಗೆ ಹಿಂದಿರುಗಿ ಬರುವದಕ್ಕೆ ಬಯಸುತ್ತಿರಬಹುದು, ಆದಾಗ್ಯೂ ಸ್ವತಃ ತಾವೇ ದಾರಿಯನ್ನು ಕಂಡುಕೊಳ್ಳುವದಕ್ಕೆ ಸಾಧ್ಯವಿಲ್ಲದಿರಬಹುದು. ಬಲಹೀನ ದೇವಜನರಿಗೆ "ಕುರುಬರು" ಆಗಿರಬೇಕಾದ ಹೊಣೆಗಾರಿಕೆಯು ಹಿರಿಯರಿಗೆ ಇರುವ ಒಂದು ವಿಶೇಷವಾದ ಕರ್ತವ್ಯವಾಗಿದ್ದರೆ (13:17), ತಪ್ಪು ಮಾಡುವ ಸಹೋದರರಿಗೆ ಸಹಾಯ ಮಾಡುವದು ಪ್ರತಿಯೊಬ್ಬ ಕ್ರೈಸ್ತನ ಕೆಲಸವಾಗಿದೆ.

ಹಿರಿಯರು ಮತ್ತು ಸುವಾರ್ತಿಕರ ಕೆಲಸವು ಹಳೆಯ ಒಡಂಬಡಿಕೆಯ ನಿಜವಾದ ಯಾಜಕನ ಕೆಲಸದೊಂದಿಗೆ ಕೆಲವು ಹೋಲಿಕೆಗಳನ್ನು ಹೊಂದಿರುತ್ತದೆ. ದೇವರ ಸಭೆಯ ನಾಯಕರು ತಮ್ಮ ವಶದಲ್ಲಿರುವ ಜನರ ಆತ್ಮೀಕ ಅಗತ್ಯತೆಗಳನ್ನು ಸಂಧಿಸಬೇಕು. ಒಬ್ಬ ಸೇವಕ-ನಾಯಕನ ಕೆಲಸವು ಸಭಿಕರಿಗೆ ಸಂತೋಷವನ್ನುಂಟು ಮಾಡುವ ಸಂಗತಿಗಳನ್ನು ಹೇಳುವದಕ್ಕಿಂತಲೂ ಹೆಚ್ಚಿನದ್ದಾಗಿರುತ್ತದೆ. ವಾಕ್ಯದ ಬೋಧಕನು ಕೇವಲ "ಸಂತೋಷವಾಗಿರುವದು ಹೇಗೆ, ಅಥವಾ ಪ್ರಭಾವಶಾಲಿ ಮತ್ತು ಯಶಸ್ವಿಯಾಗಿರುವದು ಹೇಗೆಂಬ ಬಗ್ಗೆ ಉತ್ತಮ ಸಲಹೆಗಳನ್ನು . . . , ಉಜ್ವಲವಾದ ಹಾಗೂ ಸಹಾಯಕರವಾದ ಸೂಕ್ಷ್ಮ ಸುಳಿವುಗಳನ್ನು ಕೊಡುವದು" ಮಾತ್ರವೇ ಆಗಿರುವದಿಲ್ಲ.[38] ತಮ್ಮ ಜನರಿಗಾಗಿ ಅವರ ಹೆಸರು ಹೇಳಿ ಪ್ರಾರ್ಥಿಸುವದು ಹಿರಿಯರ ಹಾಗೂ ಬೋಧಕರ ದೈನಂದಿನ ಕರ್ತವ್ಯವಾಗಿರುತ್ತದೆ.

ಇಂದು ಸಭೆಯು ಎದುರಿಸುತ್ತಿರುವ ಅತಿ ದೊಡ್ಡ ಅಗತ್ಯತೆಯೆಂದರೆ ಒಂದು ಸಮಸ್ಯೆ ಅಥವಾ ದುರ್ಬಲೆಯು ಕಂಡು ಬಂದ ತಕ್ಷಣವೇ ಸದಸ್ಯರ ಬಳಿಗೆ ಹೋಗುವದು. ಜ್ಞಾನವಿಲ್ಲದವರು ಮತ್ತು ಮಾರ್ಗತಪ್ಪಿದವರ ವಿಷಯದಲ್ಲಿ ಪರಿಣಾಮಕಾರಿಯಾಗಿ ನಡೆದುಕೊಳ್ಳಬೇಕಾದರೆ, ಒಬ್ಬನು ದಾರಿ ತಪ್ಪುತ್ತಿರುವ ಸಹೋದರನನ್ನು ಹುಡುಕತಕ್ಕದ್ದು, ಆತನ ಪಾಪವನ್ನು ಆತನಿಗೆ ಮನದಟ್ಟು ಮಾಡಿದ ಬಳಿಕ ಅದನ್ನು ಜಯಿಸುವದಕ್ಕೆ ಬಲವು ದೊರಕುವಂತೆ ಆತನೊಂದಿಗೆ ಪ್ರಾರ್ಥಿಸತಕ್ಕದ್ದು. ಸಹನಶೀಲರಾಗಿರುವದು ಸುಲಭವಾಗಿರುತ್ತದೆ ಮತ್ತು ಆ ಮೂಲಕ ಪಾಪದ ವಿಷಯದಲ್ಲಿ ಸೂಕ್ತವಾಗಿ ಕ್ರಮ ಕೈಗೊಳ್ಳುವದು ಕಷ್ಟಕರವಾಗುತ್ತದೆ!

ಮಹಾಯಾಜಕನು ಸ್ವಂತ ದುರ್ಬಲತೆಗಳನ್ನು ಹೊಂದಿದ್ದ ಹಾಗೆಯೇ ನಾವು ಸಹ

ಹೊಂದಿದ್ದೇವೆ. ನಾವು ತಪ್ಪು ಮಾಡುವವನ ವಿಷಯದಲ್ಲಿ ಅದನ್ನು ಮನಸ್ಸಿನಲ್ಲಿಟ್ಟುಕೊಂಡವರಾಗಿ ನಡೆದುಕೊಳ್ಳಬೇಕು. ಗಲಾತ್ಯ 6:1, 2 ವಚನಗಳು ನೆರವೇರಿಸಲೇ ಬೇಕಾದ ಒಂದು ತುರ್ತು ಆಜ್ಞೆಯನ್ನು ಒಳಗೊಂಡಿದೆ: "ನೀವಾದರೋ ದುಷ್ಪ್ರೇರಣೆಗೆ ಒಳಗಾಗದಂತೆ ನಿನ್ನ ವಿಷಯದಲ್ಲಿ ಎಚ್ಚರಿಕೆಯಾಗಿರು." ಯುವಜನರು ಒಬ್ಬ ಪಾಪಿಯನ್ನು ಕನಿಕರದ ರೀತಿಯಲ್ಲಿ ಖಂಡಿಸುವದಕ್ಕೆ ಧೈರ್ಯವು ಇರುವದು ವಿರಳವಾದದ್ದು. ಈ ಜವಾಬ್ದಾರಿಯನ್ನು ಹಿರಿಯರು ಮತ್ತು ವೃದ್ಧ ಸೇವಕರು ವಹಿಸಿಕೊಳ್ಳಬೇಕು. ಪಾಪಿಯು ತನ್ನೊಳಗಡೆಯಲ್ಲಿ ವ್ಯಾದಿಗ್ರಸ್ಥನಾಗಿದ್ದಾನೆ, ಅನೇಕ ಸಾರಿ ಮಾರ್ಗದರ್ಶನಕ್ಕೋಸ್ಕರ ಹಂಬಲಿಸುತ್ತಿರುವನು. ಆತನು ಒಂದು ದುರ್ಬಲವಾದ ಮಾದರಿಯನ್ನು ಅನುಸರಿಸಿರಬಹುದಾಗಿದೆ. ಪ್ರತಿಯೊಬ್ಬ ಹಿರಿಯನು, ವಾಸ್ತವದಲ್ಲಿ ಪ್ರತಿಯೊಬ್ಬ ಕ್ರೈಸ್ತನು ಧೈರ್ಯದಾಯಕ ಮಾತುಗಳಿಂದ ನೀತಿಯಡೆಗೆ ಸಾಗುವ ದಾರಿಯನ್ನು ತೋರಿಸಿ ಕೊಡಬೇಕು. ನಾವು ಎಂದಿಗೂ ಕಠಿಣವಾಗಿ ನಡೆದುಕೊಳ್ಳದಿರೋಣ; ಗಲಾತ್ಯ 6:1, 2ನ್ನು *ಪೂರ್ತಿಯಾಗಿ* ಅನುಸರಿಸತಕ್ಕದ್ದು. ಎಚ್ಚರಿಕೆಗಳನ್ನು ಬಹುವಾದ ಕಳಕಳಿಯೊಂದಿಗೆ ಕೊಡತಕ್ಕದ್ದು.

## ದೇವರಿಗಾಗಿ ಗೌರವ (5:4, 5)

ಹಿರಿಯರಿಗೆ ಇರತಕ್ಕ ಅರ್ಹತೆಗಳು 1 ತಿಮೊಥೆ 3:1ರಲ್ಲಿ ಪರಿಚಯಿಸಲ್ಪಟ್ಟಿವೆ: "ಸಭಾಧ್ಯಕ್ಷನ ಉದ್ಯೋಗವನ್ನು ಪಡಕೊಳ್ಳಬೇಕೆಂದಿರುವವನು ಒಳ್ಳೇ ಕೆಲಸವನ್ನು ಅಪೇಕ್ಷಿಸುವವನಾಗಿದ್ದಾನೆಂಬ ಮಾತು ನಂಬತಕ್ಕದ್ದಾಗಿದೆ." ಈ ಅಪೇಕ್ಷಿಸುವಿಕೆಯು ಒಂದು ಅರ್ಹತೆಯಾಗಿರುವದಿಲ್ಲ; ಅಪೇಕ್ಷೆಯನ್ನು ಪ್ರಸ್ತಾಪಿಸಿದ ಬಳಿಕ "ತಕ್ಕದ್ದು" ಬರುತ್ತದೆ ಮತ್ತು ವಾಕ್ಯಭಾಗದಲ್ಲಿ ಮುಂದೆ ಬರುವ ಶರತ್ತುಗಳಿಗೆಲ್ಲಾ ಅನ್ವಯವಾಗುತ್ತದೆ. ಈ ಉದ್ಯೋಗವನ್ನು ಎಲ್ಲರ ಮುಂದೆ ಅಪೇಕ್ಷಿಸುವವನು ಗೌರವ ಪಡೆದುಕೊಳ್ಳುವ ಬಯಕೆ ಹೊಂದಿರುತ್ತಾನೆ ಹೊರತು ಸೇವೆ ಮಾಡಬೇಕೆಂದು ಅಲ್ಲ. ಒಬ್ಬ ಹಿರಿಯನು ಆಗಿರುವದು ನಿಜಕ್ಕೂ ಒಂದು "ಸೊಗಸಾದ ಕೆಲಸ," ಮತ್ತು ಒಬ್ಬನು ಆ ಹುದ್ದೆಗೆ ಯೋಗ್ಯವಾದಂತಹ ಅರ್ಹತೆಗಳನ್ನು ಹೊಂದಿರುವದಕ್ಕೆ ಆಕಾಂಕ್ಷಿಸಬೇಕು. ಹೇಗೂ, ಸಭೆಯಲ್ಲಿ ಆ ಹುದ್ದೆಗೆ "ಆಯ್ಕೆಗೊಳ್ಳಲು ಪ್ರಯತ್ನಿಸುವದು" ಹಿರಿಯರು ಮತ್ತು ಸಭಾಸೇವಕರ ಕುರಿತಾದ ಒಂದು ತಪ್ಪಾದ ದೃಷ್ಟಿಕೋನವನ್ನು ನೀಡುತ್ತದೆ. ಒಬ್ಬನು ಅರ್ಹನೆಂದು ಬೇರೆಯವರು ಭಾವಿಸುವದಾದರೆ ಅವರು ಆತನನ್ನು ಆರಿಸಿಕೊಳ್ಳಲಿ; ಆತನ ಕೆಲಸವು ಸಂತೋಷವಾಗಿ ಸೇವೆ ಮಾಡುವದೇ ಆಗಿರುತ್ತದೆ.

ಹಿರಿಯ ಅಥವಾ ಸಭಾಸೇವಕನ ಪಾತ್ರವು ಸ್ವಲ್ಪ ಸಾರ್ವಜನಿಕ ಗೌರವದೊಂದಿಗೆ ಬರುವದಾಗಿದೆ. ಈ ಹುದ್ದೆಗಳನ್ನು ಸ್ವೀಕರಿಸಿಕೊಳ್ಳುವವರು ಆತ್ಮಗಳ ಪ್ರಧಾನ ಕುರುಬನಿಂದ ಸುರಿಸಲ್ಪಡುವಂತಹ ಗೌರವಕ್ಕಾಗಿ ಕಾಯುವದಕ್ಕೆ ಮನಸ್ಸುಳ್ಳವರಾಗಿರ ಬೇಕಾಗಿರುತ್ತದೆ (1 ಪೇತ್ರ 5:1-4). ಕ್ರಿಸ್ತನು ಸ್ವಂತ ಉನ್ನತ್ತಕ್ಕೇರಿಸಲ್ಪಡುವಿಕೆಯನ್ನು ಅಪೇಕ್ಷಿಸಲಿಲ್ಲ; ಬದಲಾಗಿ, ಆತನ ಪುತ್ರತ್ವವನ್ನು ಘೋಷನೆ ಮಾಡಿ ಆತನನ್ನು ನೇಮಕಗೊಳಿಸುವಂತೆ ದೇವರಿಗೆ ಅವಕಾಶವನ್ನು ಕೊಟ್ಟನು (ಇಬ್ರಿಯ 5:5, 6). ಆತನು "ತನ್ನನ್ನು ತಾನೇ ಘನಪಡಿಸಿಕೊಳ್ಳಲಿಲ್ಲ" (ನೋಡಿರಿ ಯೋಹಾನ 8:54; 17:1, 5; ಅಪೊಸ್ತಲರ ಕೃತ್ಯಗಳು 3:13).

ಸಭೆಯ ಅನುಮೋದನೆಯಿಲ್ಲದೆ ಯಾವನೂ ಒಬ್ಬ ಹಿರಿಯನಂತೆ ವರ್ತಿಸುವದಕ್ಕೆ ಧೈರ್ಯಮಾಡಬಾರದು. ಸಭೆಯು ತನ್ನ ಹಿರಿಯರನ್ನು ತಾನೇ ಆರಿಸಿಕೊಳ್ಳತಕ್ಕದ್ದು (ಅಪೊಸ್ತಲರ ಕೃತ್ಯಗಳು 6:3). ಹಿರಿಯ ಸ್ಥಾನವು ಒಬ್ಬ ಅರ್ಹನಲ್ಲದ ಸ್ನೇಹಿತ, ಬಂಧು, ಅಥವಾ ಸಹಪಾಠಿ ಸೇರ್ಪಡೆಗೊಳಿಸಿಕೊಳ್ಳುವದಾದರೆ ಅದಕ್ಕೆ ಬೆಲೆಯನ್ನು ತೆತ್ತಬೇಕಾಗುವದು. ಅದರಿಂದ

ವೈಮನಸ್ಸನ್ನು ಎಬ್ಬಿಸಬಹುದು ಅಥವಾ ಜನರು ಸಭೆಯನ್ನು ತೊರೆದು ಹೋಗುವಂತಾಗಬಹುದು.

ಯಾಜಕರಿಗಾಗಿ ಇರುವ ಹಳೆಯ ಒಡಂಬಡಿಕೆಯ ನಿಯಮಗಳು ಹೊಸ ಒಡಂಬಡಿಕೆಯ ಹಿರಿಯರಿಗೆ ಇರತಕ್ಕ ಅರ್ಹತೆಗಳಂತೆಯೇ ಆಗಿರುವದಿಲ್ಲ, ಆದರೆ ವಿಧೇಯತೆಯ ಕುರಿತ ದೇವರ ತತ್ವಗಳು ಒಂದೇ ಆಗಿರುತ್ತವೆ. ಕ್ರೈಸ್ತ ನಾಯಕನು ದೇವರಿಂದ ಕೊಡಲ್ಪಟ್ಟಿರುವ ಮಾರ್ಗಸೂಚಿಗಳನ್ನು ಅನುಸರಿಸತಕ್ಕದ್ದು, ಅವುಗಳು ಸ್ಪಷ್ಟವಾಗಿ ಹೇಳಲ್ಪಟ್ಟಿದ್ದರೂ ಸರಿಯೆ ಅಥವಾ ಪರೋಕ್ಷವಾಗಿ ಸೂಚಿಸಲ್ಪಟ್ಟಿದ್ದರೂ ಸರಿಯೇ ಅವುಗಳನ್ನು ಅನುಸರಿಸಬೇಕು.

## ದೇವರು ಗೆತ್ಸೇಮನೆಯಲ್ಲಿ ಯೇಸುವಿನ ಪ್ರಾರ್ಥನೆಗೆ ಹೇಗೆ ಉತ್ತರ ಕೊಟ್ಟನು (5:7)

ದೇವರು ಪ್ರಾರ್ಥನೆಗೆ ಮೂರು ವಿಧಗಳಲ್ಲಿ ಉತ್ತರಿಸುತ್ತಾನೆಂದು ನಾವು ಆಗಾಗ್ಗೆ ಹೇಳುತ್ತೇವೆ: "ಹೌದು," "ಇಲ್ಲ," ಅಥವಾ "ಸ್ವಲ್ಪ ತಾಳು." ಅಂಥ ಪದಗಳು ಬೈಬಲಿನಲ್ಲಿ ಸ್ಪಷ್ಟವಾಗಿ ವ್ಯಕ್ತಪಡಿಸಲ್ಪಟ್ಟಿರುವದಿಲ್ಲವಾದ್ದರಿಂದ, ಅವುಗಳನ್ನು ಅನುಮೋದಿಸುವ ಮುನ್ನ ನಾವು ಜಾಗರೂಕತೆಯಿಂದಿರತಕ್ಕದ್ದು.

ಪರಿಣಾಮಕಾರಿಯಾದ ಪ್ರಾರ್ಥನೆಗೆ, ದೇವರು ಉತ್ತರಿಸಬಲ್ಲನು ಮತ್ತು ಉತ್ತರಿಸುತ್ತಾನೆಂದು ನಂಬುವಂತಹ ರೀತಿಯ ಶರತ್ತುಗಳಿರುತ್ತವೆ (ಯಾಕೋಬ 1:5-7). ನಾವು ಯೇಸುವಿನ ಹೆಸರಿನಲ್ಲಿ (ಅಂದರೆ "ಆತನ ಅಧಿಕಾರದಿಂದ") ಪ್ರಾರ್ಥಿಸಬೇಕು (ನೋಡಿರಿ ಯೋಹಾನ 14:13), ಅದು ದೇವರ ಚಿತ್ತದೊಂದಿಗೆ ಸಾಮರಸ್ಯದಿಂದಿರುವ ಕಾರ್ಯಕ್ಕೋಸ್ಕರ ಪ್ರಾರ್ಥಿಸುವದು ಎಂಬುದನ್ನು ಸೂಚ್ಯಾರ್ಥವಾಗಿ ತಿಳಿಸುತ್ತದೆ (1 ಯೋಹಾನ 5:14). ನಮ್ಮ ದೇವರ ವಾಗ್ದಾನಗಳು ಯಾವಾಗಲೂ "ಹೌದು" ಎಂದಾಗಿರುತ್ತವೆಂದು ಪೌಲನು ಹೇಳುತ್ತಾನೆ (2 ಕೊರಿಂಥ 1:18-20). ನಮ್ಮ ಪ್ರಾರ್ಥನೆಗಳು ದೇವರ ಚಿತ್ತದೊಂದಿಗೆ ಸಾಮರಸ್ಯದಿಂದಿರಬೇಕು; ನಾವು ಆತನ ದೀನರಾದ ಮತ್ತು ವಿಧೇಯರಾದ ಮಕ್ಕಳಂತೆ ಪ್ರಾರ್ಥಿಸುವಾಗ ಇದು ಸ್ವಾಭಾವಿಕವಾದ ಫಲಿತವಾಗುತ್ತದೆ. ಯೇಸು ಶಿಲುಬೆಯಿಂದ ಬಿಡುಗಡೆಯಾಗಬೇಕೆಂದಷ್ಟೆ ಪ್ರಾರ್ಥಿಸಲಿಲ್ಲ; ಹೆಚ್ಚು ಪ್ರಾಮುಖ್ಯವಾದದ್ದೆಂದರೆ ಆತನು ದೇವರ ಚಿತ್ತವು ನೆರವೇರಿಸಲ್ಪಡಲಿ ಎಂದು ಪ್ರಾರ್ಥಿಸಿದನು (ಮತ್ತಾಯ 26:42). ಆದುದರಿಂದ, ಆತನ ಪ್ರಾರ್ಥನೆಗೆ "ಹೌದು" ಎಂದು ಉತ್ತರ ಸಿಕ್ಕಿತು.

ಪೌಲನು ಸೈತಾನನಿಂದ ಗುದ್ದುವಂತಹ ಶಾರೀರಿಕ ಕುಂದುಕೊರತೆಯನ್ನು ಹೊಂದಿದ್ದ ವೇಳೆ, ಆತನು ಮೂರು ಸಾರಿ ಅದಕ್ಕಾಗಿ ಪ್ರಾರ್ಥಿಸಿದ ಬಳಿಕ ಉತ್ತರವೊಂದು ಸಿಕ್ಕಿತು. ಆ ಉತ್ತರವು ಏನಾಗಿತ್ತೆಂದರೆ, "ಪೌಲನೇ, ಕೇವಲ ಸ್ವಸ್ಥತೆಗಿಂತಲೂ ಹೆಚ್ಚು ಉತ್ತಮವಾದದ್ದೊಂದನ್ನು ನಿನಗಾಗಿ ಇಟ್ಟಿದ್ದೇನೆ. ನೀನು ಬಾಧೆಗೊಳಪಟ್ಟವನಾಗಿ ಇರುವಾಗ, ನಿನ್ನ ಮೂಲಕವಾಗಿ ನನ್ನ ಸಂದೇಶದ ಶಕ್ತಿಯು ಇನ್ನಷ್ಟು ಪ್ರಕಾಶಮಾನವಾಗಿ ಹೊಳೆಯುವದು." ಈ ಪ್ರತ್ಯುತ್ತರದ ಕಾರಣದಿಂದ ತಾನು ಸಂತೋಷವಾಗಿರಬಲ್ಲೆನೆಂದು ಅರಿಕೆ ಮಾಡಿದನು. ಆತನ ಪ್ರಾರ್ಥನೆಯು ಸಹ "ಹೌದು" ಎಂದು ಉತ್ತರಿಸಲ್ಪಟ್ಟಿತು ಯಾಕೆಂದರೆ ದೇವರು ಆತನ ವಿಷಯದಲ್ಲಿ ಬಯಸಿದ್ದನ್ನು ಪೌಲನು ಅನುಸರಿಸುವದಕ್ಕೆ ಸಿದ್ಧನಿದ್ದನು (2 ಕೊರಿಂಥ 12:7-10).

ನಾವು ಆ ವಿಧವಾದ ಮನೋಭಾವದೊಂದಿಗೆ ಪ್ರಾರ್ಥಿಸಿದಾಗ ನಮ್ಮ ಪ್ರಾರ್ಥನೆಗಳು ಉತ್ತರಿಸಲ್ಪಡುವವು. ಇದನ್ನೇ ಶಾಸ್ತ್ರಗಳು ಕಲಿಸುತ್ತವೆ. ಸಮರ್ಪಕವಾಗಿ ಅರ್ಪಿಸುವ ಪ್ರಾರ್ಥನೆಗಳನ್ನು ದೇವರು ಯಾವಾಗಲೂ ಆಲಿಸುತ್ತಾನೆ. ಇದು ನಮಗೆ ನಂಬಿಕೆಯಿಂದ ಸಲ್ಲಿಸಿದ ಪ್ರಾರ್ಥನೆಗಳಲ್ಲಿ ಹೆಚ್ಚು ದೃಢವಿಶ್ವಾಸವನ್ನು ಒದಗಿಸತಕ್ಕದ್ದು. ನಮ್ಮ ಅತ್ಯಂಥ

ಆಳವಾದ ಅಗತ್ಯತೆಯ ಸಮಯಗಳಲ್ಲಿ ಸಹಾಯಕ್ಕಾಗಿ ಹೇಗೆ ತಿರುಗಿಕೊಳ್ಳಬೇಕೆಂಬುದಕ್ಕೆ ಯೇಸು ಒಂದು ಶಕ್ತಿಶಾಲಿ ಮಾದರಿಯನ್ನು ತೋರಿಸಿ ಕೊಟ್ಟನು.

**ಯೇಸು ಕಲಿತುಕೊಂಡ ಪ್ರಕಾರವೇ, ನಾವೂ ಕಲಿತುಕೊಳ್ಳಬೇಕು (5:8, 9)**

ದೇವರ ಆಜ್ಞೆಗಳು ತಾರ್ಕಿಕವೆಂಬಂತೆ ಕಾಣಿಸಿದಿದ್ದಾಗ್ಯೂ, ಒಬ್ಬನು ನಂಬಿಕೆಯಿಂದ ಅವುಗಳಿಗೆ ವಿಧೇಯನಾಗುವಾಗ ಆತನು ವಿಧೇಯತೆಯನ್ನು ಕಲಿತುಕೊಳ್ಳುತ್ತಾನೆ. ಯಾವದು ತಾರ್ಕಿಕವೆಂಬಂತೆ ಕಾಣಿಸುತ್ತದೋ ಅದನ್ನು ಮಾತ್ರವೇ ಮಾಡುವಂಥದ್ದು ನಿಜವಾದ ವಿಧೇಯತೆಯಾಗುವದಿಲ್ಲ – ಕನಿಷ್ಠ, ಇದು ನಂಬಿಕೆಯಿಂದ ತೋರುವ ವಿಧೇಯತೆಯಂತೂ ಅಲ್ಲ. ನಮ್ಮಿಂದ ದೇವರಿಗೆ ಅಗತ್ಯವಿರುವಂಥವುಗಳು ಯಾವಾಗಲೂ ತಾರ್ಕಿಕವೆಂಬಂತೆ ತೋರದಿರಬಹುದು. ನಾವು ನಮಗೆ ಅತ್ಯಂತ ಪ್ರಿಯವಾದ ವಿಗ್ರಹಗಳನ್ನು ತೊರೆದು ಬಿಟ್ಟು ಚಿಕ್ಕ ಮಕ್ಕಳಂತೆ ಒಪ್ಪಿಸಿ ಕೊಡುವಾಗ ಮಾತ್ರವೇ ನಾವು ವಿಧೇಯರಾದವರಾಗುತ್ತೇವೆ. ಆಗ ಮಾತ್ರವೇ ನಿಜವಾದ ವಿಧೇಯತೆಯು ಏನೆಂಬುದನ್ನು ನಾವು ಕಲಿತವರಾಗುತ್ತೇವೆ. ಈ ತಿಳುವಳಿಕೆಯು ಬಾಧೆಯನ್ನನುಭವಿಸುವ ಮೂಲಕವಾಗಿ ಬರಬಹುದಾಗಿದೆ. ಪ್ರಶ್ನೆಯನ್ನು ಮಾಡದೆಯೇ ವಿಧೇಯರಾಗುವ ಹೊರತು ವಿಧೇಯತೆಯನ್ನು ಪರಿಪೂರ್ಣಗೊಳಿಸಿಕೊಳ್ಳುವದು ಸಾಧ್ಯವಿರುವದಿಲ್ಲ. ನಾವು ನಮ್ಮ ಸ್ವಂತ ಒಳ್ಳೇತನದ ಮೇಲೆ ಹಕ್ಕು ಸಾಧಿಸದೆಯೇ, ಸಂಪೂರ್ಣವಾಗಿ ನಮ್ಮನ್ನು ದೇವರ ಕರುಣೆಗೆ ಒಪ್ಪಿಸಿಕೊಳ್ಳಬೇಕು. ನಾವು ಸಂಪೂರ್ಣವಾಗಿ ವಿಧೇಯರಾದ ಬಳಿಕ ನಾವು ಪರಿಪೂರ್ಣರಾದ, ಸಂಪೂರ್ಣ, ಹಾಗೂ ಪರಿಪಕ್ವವುಳ್ಳ ದೇವಜನರಾಗಿ ಮಾಡಲ್ಪಡುತ್ತೇವೆ.

ದೇವರು ನಮ್ಮ ಬಾಧೆಗಳನ್ನು ಮೀರಿ ನಮ್ಮ ಹಿತಕ್ಕಾಗಿ ಒದಗಿಸುವವನಾಗಿದ್ದಾನೆಂಬುದನ್ನು ಅಂಗೀಕರಿಸಿಕೊಳ್ಳುವಾಗ ಬಾಧೆಯು ಒಂದು ದೊಡ್ಡ ಪ್ರಯೋಜನವಾಗಿರ ಬಲ್ಲದು. ಮನುಷ್ಯರಿಗೆ ಅನ್ಯಾಯಕರವೆಂದು ತೋರುವ ಬಾಧೆಯು ದೇವರ ವಿರುದ್ಧವಾಗಿ ಪಾಪಿಗಳು ಮಾಡುವ ಒಂದು ಅತ್ಯಂಥ ದೊಡ್ಡದಾದ ವಾದ ಆಗಿರುತ್ತದೆ. ಜನರು ಹೀಗೆ ಕೇಳುತ್ತಾರೆ, "ದೇವರು ನನ್ನನ್ನು ನಿಜವಾಗಿಯೂ ಪ್ರೀತಿಸುವದಾಗಿದ್ದರೆ ಏಕೆ ಇದನ್ನು ನನಗೆ ಸಂಭವಿಸುವಂತೆ ಬಿಡಬಲ್ಲನು?" ಯೇಸು ಇದಕ್ಕೆ ನಿಖರವಾದ ಉತ್ತರವನ್ನು ಕೊಡಲಿಲ್ಲವಾದರೂ, ಶಿಲುಬೆಯ ಮೇಲೆ ಆತನು ಪಟ್ಟ ಬಾಧೆಯು ಮನುಷ್ಯರು ಕಲ್ಪಿಸಿಕೊಳ್ಳಬಹುದಾದದ್ದಕ್ಕಿಂತಲೂ ಉತ್ತಮವಾದ ಉತ್ತರವನ್ನು ಕೊಡುತ್ತದೆ. ತಂದೆಯು ಅವರ ಬಗ್ಗೆ ಆಕಾಶದಲ್ಲಿರುವ ಪಕ್ಷಿಗಳಿಗಿಂತ ಮತ್ತು ಅಡವಿಯ ಹೂಗಳಿಗಿಂತ ಹೆಚ್ಚು ಚಿಂತೆಯುಳ್ಳವನಾಗಿದ್ದಾನೆಂಬದಾಗಿ ಆತನು ತನ್ನ ಶಿಷ್ಯರಿಗೆ ಕಲಿಸಿ ಕೊಟ್ಟನು (ಮತ್ತಾಯ 6:26-34), ಆದರೆ ನಾವು ಶಿಲುಬೆಯ ಬಳಿಯಲ್ಲಿ ಮೊಣಕಾಲೂರಿ ರಕ್ಷಕನು ನಮ್ಮ ಪರವಾಗಿ ಸತ್ತನು ಎಂಬುದನ್ನು ಪೂರ್ಣವಾಗಿ ಅಂಗೀಕರಿಸಿದಾಗ ಮಾತ್ರವೇ ಈ ಸತ್ಯಗಳನ್ನು ಅಂಗೀಕರಿಸುವಂತದ್ದು ಬರಬಲ್ಲದು. ಅದು ಯಾವದೇ ಗೋಚರವಾದ ತಾರ್ಕಿಕ ಕಾರಣವಿಲ್ಲದೆ ಮಾಡಲಾದ ಸರ್ವೋಚ್ಚವಾದ ಬಾಧೆಯನ್ನನುಭವಿಸುವಿಕೆ ಯಾಗಿತ್ತು; ಆದರೆ ಅದು ಒಂದು ದೊಡ್ಡ ಉದ್ದೇಶವನ್ನು ಹೊಂದಿತ್ತೆಂದು ನಾವು ನಂಬುತ್ತೇವೆ ಯಾಕೆಂದರೆ ಅದರ ಪರಿಣಾಮತೆಗೆ ದೈವಿಕ ಪ್ರಕಟನೆಯು ಇರುತ್ತದೆ (ರೋಮಾ 3:23-26; 5:8, 9).

ದೇವರ ಏಕೈಕ ಮತ್ತು ವಿಶಿಷ್ಟ ಮಗನಾದ ಯೇಸು ಹೀಗೆ ಕೂಗಿಕೊಂಡನು, "ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈಬಿಟ್ಟಿದ್ದೀ?" ಆ ನೆರವೇರಿಸಲ್ಪಟ್ಟ ಪ್ರವಾದನೆಯ ಆಳಗಳನ್ನು ನಾವು ಅಳೆಯುವದಕ್ಕೆ ಸಾಧ್ಯವಿಲ್ಲ (ಕೀರ್ತನೆ 22:1), ಆದರೆ ಯೇಸುವು ಬಾಧೆಯನ್ನನುಭವಿಸುವದರಲ್ಲಿ ದೇವರಿಂದ ಕೈಬಿಡಲ್ಪಟ್ಟು ಏಕಾಂಗಿಯಾಗಿರಬೇಕಾದ, ಆತನ

ಸಾಮಿಪ್ಯವಿಲ್ಲದೆ ಇರಬೇಕಾದ ಹಂತವನ್ನು ತಲುಪಿದನು ಎಂಬುದನ್ನು ನಾವು ನಂಬಿಕೆಯಿಂದ ಒಪ್ಪಿಕೊಳ್ಳಬಲ್ಲೆವು. ಆತನು ಆ ಮಟ್ಟಿಗೂ ದೇವರ ಚಿತ್ತವನ್ನು ಅಂಗೀಕರಿಸಿಕೊಂಡಿದ್ದನು ಮತ್ತು ನಾವು ಸಹ ಹಾಗೆಯೇ ಅಂಗೀಕರಿಸಿಕೊಳ್ಳಬೇಕು. ದೇವರ ಮಕ್ಕಳಾಗಿ, ನಮ್ಮ ಮೇಲೆ ಆತನು ಇಟ್ಟಿರುವ ಪ್ರೀತಿಯ ಅರ್ಥವು ನಾವು ಬಾಧೆಯಿಂದ ಹೊರಗಿಡಲ್ಪಡುವೆವು ಎಂದಾಗಿರುವದಿಲ್ಲ; ವಾಸ್ತವದಲ್ಲಿ, ಅದು ಅದಕ್ಕೆ ತದ್ವಿರುದ್ಧವಾದದ್ದಾಗಿರುತ್ತದೆ. ನಮ್ಮ ಮನಸ್ಸುಗಳಿಗೆ ಇದು ತಾರ್ಕಿಕವಲ್ಲವೆಂಬಂತೆ ತೋರಬಹುದು, ಯಾಕೆಂದರೆ ನಮಗೆ ಹುಚ್ಚುತನವೆಂದು ತೋರುವ ಅದೇ ಕಾರ್ಯವು ದೇವರ ಜ್ಞಾನವೇ ಆಗಿರಬಲ್ಲದು. ಕ್ರಿಸ್ತನಿಗಾದರೋ ಕಿರೀಟಕ್ಕೆ ಮುನ್ನ ಶಿಲುಬೆಯು ಬಂದಿತು, ಮತ್ತು ನಮಗೂ ಅದು ಹಾಗೆಯೇ ಇರತಕ್ಕದ್ದು. ನಾವು ಕ್ರಿಸ್ತನನ್ನು ಅಂಗೀಕರಿಸಿಕೊಳ್ಳುವಾಗ ನಮಗಿರುವ ತರ್ಕ ಮಾಡುವ ಸಾಮರ್ಥ್ಯವನ್ನು ತ್ಯಜಿಸಿ ಬಿಡುವದಿಲ್ಲ, ಆದರೆ ಸಂಭವಿಸುವ ಪ್ರತಿಯೊಂದರಲ್ಲಿಯೂ ಕಾರಣವನ್ನು ಕಾಣಬೇಕೆಂಬ ಬಯಕೆಯನ್ನು ನಾವು ಜಯಿಸಬೇಕು. ದೇವರಲ್ಲಿ ಭರವಸವಿಡುವ ಮತ್ತು ವಿಧೇಯರಾಗುವ ಮೂಲಕ ಮಾತ್ರವೇ ಕ್ರಿಸ್ತನಲ್ಲಿ ಮತ್ತು ಆತನ ಮರಣದಲ್ಲಿ ಪಾಲುಗಾರಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಾಗ ಸಿಕ್ಕುವ ಕ್ರಿಸ್ತನಲ್ಲಿನ ಹೊಸ ಜೀವನದ ಬಳಿಗೆ ನಾವು ಬರಬಲ್ಲೆವು (ನೋಡಿರಿ ರೋಮಾ 6:3, 4).

## ನಿರಂತರವಾದ ರಕ್ಷಣೆ (5:9)

"ಅದು ನಿರಂತರವಾಗಿರುವದಾದರೆ, ಅದು ಕಳೆದುಕೊಳ್ಳಲ್ಪಡಲಾರದು" ಎಂಬುದು ಕ್ಯಾಲ್ವಿನ್‌ವಾದಿಗಳ "ದೇವಜನರ ಸಂರಕ್ಷಣೆ" ಅಥವಾ "ಮತಭ್ರಷ್ಟತೆಯ ಅಸಾಧ್ಯತೆ" ಸಿದ್ಧಾಂತದ ಪ್ರತಿವಾದ ಆಗಿರುತ್ತದೆ. ಇದು ಒಬ್ಬ ಕ್ರೈಸ್ತನು "ಕೃಪೆಯಿಂದ ಬಿದ್ದು ಹೋಗಲಾರನು" ಎಂಬ ಯೋಚನೆಯಾಗಿರುತ್ತದೆ. ಕ್ರಿಸ್ತನು ನಮಗೆ ಅನುಗ್ರಹಿಸಿರುವ ರಕ್ಷಣೆಯು ನಿತ್ಯವಾದದ್ದು, ಆದರೆ ಆ ಅದ್ಭುತವಾದ ಆಶೀರ್ವಾದದಲ್ಲಿ ಭಾಗಿಯಾಗುವಿಕೆಯನ್ನು ನಾವು ಕಳಕೊಳ್ಳುವ ಸಾಧ್ಯತೆಯಿರುತ್ತದೆ. ನಂಬಿಗಸ್ತರನ್ನು ಮಾತ್ರವೇ "ಅಂತ್ಯಕಾಲದಲ್ಲಿ ಪ್ರತ್ಯಕ್ಷವಾಗುವದಕ್ಕೆ ಸಿದ್ಧವಾಗಿರುವ ರಕ್ಷಣೆಯು . . . ದೊರೆಯಬೇಕೆಂದು ದೇವರ [ಅವರನ್ನು] ತನ್ನ ಬಲದಿಂದ ಕಾಯುತ್ತಾನೆ" (1 ಪೇತ್ರ 1:5).

ಒಬ್ಬನು ತನ್ನ ನಂಬಿಕೆಯನ್ನು ಕಳಕೊಳ್ಳಬಹುದೋ? ಪೌಲನು ಕೆಲವರು "ಕ್ರಿಸ್ತನಂಬಿಕೆಯ ವಿಷಯದಲ್ಲಿ ಹಡಗು ಒಡೆದು ನಷ್ಟ ಪಟ್ಟವರಂತೆ ಇದ್ದಾರೆ" ಎಂಬುದರ ಕುರಿತು ಮಾತಾಡಿದನು (1 ತಿಮೊಥೆ 1:19). ಈ ಅಭಿಪ್ರಾಯದ ಕುರಿತು ರೋಮಾ 11:22ನೇ ವಚನವು ಸಾಧ್ಯವಿರುವ ಅತ್ಯಂಥ ಸ್ಪಷ್ಟವಾದ ಹೇಳಿಕೆಯನ್ನು ನೀಡುತ್ತದೆ: "ಆದದರಿಂದ ದೇವರ ದಯೆಯನ್ನೂ ಕಾಠಿಣ್ಯತೆಯನ್ನೂ ನೋಡು; ಬಿದ್ದವರ ಕಡೆಗೆ ಕಾಠಿಣ್ಯ; ನಿನ್ನ ಕಡೆಗೆ ನೀನು ದೇವರ ದಯೆಯನ್ನು ಆಶ್ರಯಿಸಿಕೊಂಡೇ ಇದ್ದರೆ ಆತನ ದಯೆ." ಗಲಾತ್ಯ 5:4ರಲ್ಲಿನ ಅಷ್ಟೊಂದು ಸ್ಪಷ್ಟವಾದ ಹೇಳಿಕೆಯನ್ನು ಹೇಗೆ ಒಬ್ಬನು ನಿರಾಕರಿಸುವದಕ್ಕೆ ಸಾಧ್ಯವಿರುತ್ತದೆ? ಅಲ್ಲಿ ಪೌಲನು ಹೀಗೆ ಹೇಳುತ್ತಾನೆ, "ನಿಮ್ಮಲ್ಲಿ ಯಾರಾರು ಕರ್ಮಗಳಿಂದ ನೀತಿವಂತರಾಗಬೇಕೆಂದಿರುತ್ತಾರೋ ಅವರು ಕ್ರಿಸ್ತನಿಂದ ಅಗಲಿ ಹೋದರು. ಕೃಪಾಶ್ರಯದೊಳಗಿಂದ ಬಿದ್ದು ಹೋದರು." ಈ ಶಾಸ್ತ್ರಗಳಲ್ಲಿ ಪ್ರಸ್ತಾಪಿಸಲ್ಪಟ್ಟವರೂ ಎಂದಿಗೂ ರಕ್ಷಣೆಯನ್ನೇ ಹೊಂದಿರಲಿಲ್ಲ ಎಂಬ ಕಲ್ಪನೆಯು ಅದಷ್ಟೇ ಆಗಿರುತ್ತದೆ – ಕೇವಲ ಕಲ್ಪನೆಯಷ್ಟೆ.

## "ನೀವು ಇಷ್ಟರೊಳಗೆ ಬೋಧಕರಾಗಿರಬೇಕಾಗಿದ್ದರೂ" (5:12)

ಇಬ್ರಿಯ ಕ್ರೈಸ್ತರಿಗೆ ಬೋಧಿರುವ ಜವಾಬ್ದಾರಿಯು ಇತ್ತು ಯಾಕೆಂದರೆ ಅವರು ವಾಕ್ಯವನ್ನು ಕೇಳಿದ್ದರು, ಅದನ್ನು ಸ್ವೀಕರಿಸಿಕೊಂಡಿದ್ದರು, ಅದಕ್ಕೆ ವಿಧೇಯರಾಗಿದ್ದರು. ತಾನು ಹೇಗೆ ರಕ್ಷಣೆ

ಹೊಂದಿದನೆಂಬ ಬಗ್ಗೆ ತನಗೆ ತಿಳಿದಿರುವದನ್ನು ಹಂಚಿಕೊಳ್ಳುವ ಜವಾಬ್ದಾರಿಯು ಪ್ರತಿಯೊಬ್ಬ ಕ್ರೈಸ್ತನಿಗೆ ಇರುತ್ತದೆ. "ಬೋಧಕರು" ಎಂಬುದು ವೃತ್ತಿಪರ ಬೋಧಕರನ್ನು ಸೂಚಿಸುವದಿಲ್ಲ. ರಕ್ಷಣೆಯನ್ನು ಹೊಂದಿಕೊಂಡಿರುವ ಯಾವನಾದರೂ ಸುವಾರ್ತೆಗೆ ಹೇಗೆ ವಿಧೇಯರಾಗಬೇಕೆಂಬುದನ್ನು ಬೇರೆಯವರೊಂದಿಗೆ ಹಂಚಿಕೊಳ್ಳ ತಕ್ಕದ್ದು. ಒಬ್ಬ ಕ್ರೈಸ್ತನು ವಿಚಾರಿಸುವ ಮಿತ್ರನೊಬ್ಬನಿಗೆ ಕೆಲವೊಂದು ವಾಕ್ಯಗಳನ್ನು ಹಂಚಿಕೊಳ್ಳುವದಕ್ಕೆ ಶಕ್ತನಾಗಿರಬೇಕು. ಒಬ್ಬನು ಕ್ರೈಸ್ತ ಸಿದ್ಧಾಂತದ ಮೂಲಪಾಠಗಳಲ್ಲಿ ನಿಪುಣತೆಯನ್ನು ಸಾಧಿಸಿಕೊಂಡಿಲ್ಲವಾದರೆ, ಕರ್ತನನ್ನು ಮತ್ತು ಆತನ ವಾಕ್ಯವನ್ನು ಪ್ರೀತಿಸುವ ಹಾಗೆ ಆತನು ಬೇರೆಯವರನ್ನು ಪ್ರಭಾವಿತಗೊಳಿಸುವದಕ್ಕೆ ಸಾಧ್ಯವಿರುವದಿಲ್ಲ.

## ಆತ್ಮೀಕ ಪರಿಪಕ್ವತೆಯನ್ನು ಹೇಗೆ ಅಭಿವೃದ್ಧಿಪಡಿಸಿಕೊಳ್ಳುವದು (5:14)

ಆತ್ಮೀಕ ಪರಿಪಕ್ವತೆಯು ಸಕಲ ಪಾಪ ಮತ್ತು ಬಲಹೀನತೆಯನ್ನು ಜಯಿಸುವಂತಹ ಉತ್ಸಾಹದ ಒಂದು ದೊಡ್ಡ ಸ್ಫೋಟದೊಂದಿಗೆ ಕಾಣಿಸಿಕೊಳ್ಳುವಂಥದ್ದಲ್ಲ. ನಾವು ಕೆಲವೊಬ್ಬರು ಹೀಗೆ ಹೇಳುವದನ್ನು ಕೇಳಿಸಿಕೊಂಡಿರುತ್ತೇವೆ, "ನಾನು ಪರಿವರ್ತನೆ ಗೊಂಡೆನು ಮತ್ತು ಮತ್ತೆಂದೂ ಒಂದು ಪೆಗ್ ಮದ್ಯವನ್ನು ಸಹ ಸೇವಿಸಲಿಲ್ಲ" (ಅಥವಾ ಇನ್ನೊಂದು ಸಿಗರೇಟನ್ನು ಸೇದಲಿಲ್ಲ ಅಥವಾ ಮತ್ತೊಂದು ಶಾಪನುಡಿಯನ್ನು ಆಡಲಿಲ್ಲ). ಅದ್ಭುತ! ಅಂಥ ವ್ಯಕ್ತಿಯು ಪರಿವರ್ತನೆಗೊಂಡ ವೇಳೆ ಅದನ್ನು ಮಾಡುವದಕ್ಕೆ ದೃಢತೀರ್ಮಾನ ಮಾಡಿ ಆತನ ಚಟಗಳನ್ನು ಬದಲಾಯಿಸಿಕೊಳ್ಳುವದರಲ್ಲಿ ಶ್ಲಾಘನೀಯವಾಗಿ ಯಶಸ್ವಿಗೊಂಡಿದ್ದಾಗ್ಯೂ, ಆ ಶೋಧನೆಗಳ ಕಡೆಗೆ ಆತನಿಗಿದ್ದ ಸಂವೇದನೆಗಳು ತಕ್ಷಣವೇ ಮತ್ತು ಸಂಪೂರ್ಣವಾಗಿ ನಿರ್ಮೂಲಗೊಂಡೆಂಬುದು ಅಸಂಭವನೀಯವಾಗಿರುತ್ತದೆ. ನಮ್ಮ ಗುರಿಗಳನ್ನು ಸಾಧಿಸುವದಕ್ಕೆ "ನೀತಿವಾಕ್ಯದಲ್ಲಿ" ಸಮಯ ಕಳೆಯುವದು ಮತ್ತು ಅಭ್ಯಾಸ ಮಾಡುವದು ಅಗತ್ಯವಿರುತ್ತದೆ (ವ. 13).

ಜೀವನದಲ್ಲಿನ ನಮ್ಮ ಬದಲಾವಣೆಗಳು ನಾವು ಕಲಿತಿರುವಂಥ ಅಥವಾ ಏನು ಮಾಡಬೇಕೆಂದು ಕಲಿಸಲ್ಪಟ್ಟಿದ್ದೇವೋ ಅದರಿಂದ ವ್ಯತ್ಯಾಸವಿಲ್ಲದೆ ಸಾಧಿಸಲ್ಪಡುತ್ತವೆ. ಇಂಥಿಂತ ಕ್ರಿಯೆಯು ತಪ್ಪು ಮತ್ತು ಪರಿವರ್ತನೆಗೊಂಡಾಗ ಅದನ್ನು ಬಿಟ್ಟು ಬಿಡಬೇಕು ಎಂಬುದಾಗಿ ಒಬ್ಬನು ನಂಬುವಾಗ, ಆತನು ಪಾಪವೆಂಬದಾಗಿ ನೋಡುವ ಆ ಕೃತ್ಯವನ್ನು ಬಿಟ್ಟು ಬಿಡುವದಕ್ಕೆ ಗಂಭೀರವಾದ ಪ್ರಯತ್ನವನ್ನು ಮಾಡುವನು. ನಾವು ಬೋಧನೆಯ ಉತ್ಪನ್ನವಾಗಿದ್ದೇವೆ; ಬಯಸಲ್ಪಡುವ ಹೊಸ ಗುಣಗಳನ್ನು ಪೂರ್ಣವಾಗಿ ನಮ್ಮ ಸ್ವಭಾವದ ಭಾಗವಾಗಿಸಿಕೊಳ್ಳುವದಕ್ಕೆ ಸಮಯ ಮತ್ತು ಅಭಿವೃದ್ಧಿ ಪಡಿಸಿಕೊಳ್ಳುವಿಕೆ ಬೇಕಾಗುತ್ತದೆ. ದೇವಜನರು ತಮ್ಮನ್ನು ಲೋಕದಿಂದ ಪ್ರತ್ಯೇಕಿಸಿಕೊಂಡು ತಮ್ಮ ಪರಿಶುದ್ಧತೆಯನ್ನು ಸಾಧಿಸಿಕೊಳ್ಳಬೇಕೆಂಬುದನ್ನು ಮರೆಯಬೇಡಿರಿ. ನೀವು ಒಬ್ಬ ಪರಿಪಕ್ವವಾದ, "ಮಾಂಸ ತಿನ್ನುವ" ಕ್ರೈಸ್ತರಾಗಿ ಬೆಳೆಯುವಂತೆ ದೇವರು ಸಹಾಯವನ್ನು ಮಾಡುವ ಹಾಗೆ ಪ್ರಾರ್ಥಿಸಿರಿ.

". . . ನನಗೇನೂ ತಪ್ಪು ಕಾಣಿಸುವದಿಲ್ಲ" ಎಂದು ಹೇಳುವದು ಒಬ್ಬನಿಗೆ ಆತ್ಮೀಕ ವಿವೇಚಿಸುವಿಕೆಯ ಕೊರತೆಯಿರುವದನ್ನು ತೋರಿಸುತ್ತದೆ, ಹೊರತು ಪರಿಗಣನೆಯಲ್ಲಿರುವ ಆಚಾರವು ತಪ್ಪೋ ಅಥವಾ ಸರಿಯೋ ಎಂಬುದಲ್ಲ. ಕೆಲವೊಂದು "ಮಸುಕಾದ ಕ್ಷೇತ್ರಗಳು" ಇದ್ದು ಅವುಗಳಲ್ಲಿ ಒಂದು ಕಾರ್ಯವನ್ನು ಮಾಡುವದು ಸರಿಯೋ ಎಂದು ನಿರ್ಧರಿಸುವದನ್ನು ಕಷ್ಟಕರವಾಗುತ್ತದೆ. ಹೇಗೂ, ಒಬ್ಬನು ದೇವರ ಧರ್ಮಶಾಸ್ತ್ರದ ನೀತಿಯ ಅಗತ್ಯತೆಗಳನ್ನು ಮತ್ತು ಪಾಪಿಗಳ ಕಡೆಗೆ ಅವಶ್ಯಕವಾದ ಕರುಣೆಯ ವ್ಯಾಪ್ತಿಯನ್ನು ಅರ್ಥಮಾಡಿಕೊಳ್ಳುವ ಹಾಗೆ

ಆತ್ಮದಲ್ಲಿ ಬೆಳೆಯುವವನು ಸರ್ವಶಕ್ತನಿಗೆ ಮೆಚ್ಚಿಕೆಯಾಗುವ ರೀತಿಯಲ್ಲಿ ಜೀವಿಸುವನು. ಇಂದು ಸಭೆಯಲ್ಲಿರುವ ನಮ್ಮ ಅತ್ಯಂಥ ದುಃಖಕರವಾದ ಸಮಸ್ಯೆಯು ಏನೆಂದರೆ ವ್ಯಾಪಕ ಪ್ರಮಾಣದ ಕ್ರೈಸ್ತರು ಸುಳ್ಳು ಬೋಧನೆಯ ಅಪಾಯವನ್ನು ನಿರ್ಧರಿಸುವದಕ್ಕೆ ಅಶಕ್ತರಾಗಿರುವದೇ ಆಗಿದೆ.

ಒಬ್ಬ ಪ್ರಸಂಗಿಯು ಒಮ್ಮೆ ಹೀಗೆ ಹೇಳಿದನು, "ಬಹುಪಾಲು ಕ್ರೈಸ್ತರು 'ನಡುವಿನವರು.'" ಆತನ ಅರ್ಥವು ಏನಾಗಿತ್ತೆಂದರೆ, "ಅವರು ಐಗುಪ್ತ ಮತ್ತು ಕಾನಾನ್ ದೇಶದ ನಡುವಿನವರು – ಅಪಾಯದ ಸ್ಥಳದಿಂದ ಹೊರಗೆ ಬಂದವರು, ಆದರೆ ಇನ್ನೂ ವಿಶ್ರಾಂತಿ ಹಾಗೂ ಐಶ್ವರ್ಯಭರಿತ ಸ್ವಾಸ್ಥ್ಯದೊಳಗೆ ಸೇರದವರು ಆಗಿದ್ದಾರೆ."[39] ನಮ್ಮ ನಂಬಿಕೆಯನ್ನು ನಾಚಿಕೆಯಿಲ್ಲದೆ ಕಾರ್ಯರೂಪಕ್ಕೆ ತರುವಂಥದ್ದು ನಮ್ಮನ್ನು "ನಡುವಿನವರು" ಗುಂಪಿನಿಂದ ಹೊರಕ್ಕೆ ಕರೆತರುವದು.

---

## ಅಡಿಟಿಪ್ಪಣಿಗಳು

[1]Josephus *Wars* 4.3.6, 10. [2]James Burton Coffman, *Commentary on Hebrews* (Austin, Tex.: Firm Foundation Publishing House, 1971), 97-98. [3]Raymond Brown, *The Message of Hebrews: Christ Above All*, The Bible Speaks Today (Downers Grove, Ill.: Inter-Varsity Press, 1982), 97. [4]Donald A. Hagner, *Encountering the Book of Hebrews: An Exposition*, Encountering Biblical Studies (Grand Rapids, Mich.: Baker Academic, 2002), 82. [5]Thomas Hewitt, *The Epistle to the Hebrews: An Introduction and Commentary*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1960), 95; Donald Guthrie, *Hebrews,* The Tyndale New Testament Commentaries (Grand Rapids, Mich.: Inter-Varsity Press, 1983), 125. [6]Craig R. Koester, *Hebrews: A New Translation with Introduction and Commentary*, The Anchor Bible, vol. 36 (New York: Doubleday, 2001), 287ರಲ್ಲಿ ಹಲವಾರು ಮೂಲಗಳನ್ನು ಹೆಸರಿಸಲಾಗಿದೆ. [7]ಈ ಕೆಳಗಿರುವಂಥದ್ದು ಮಹಾಯಾಜಕನು ತನಗೋಸ್ಕರವೂ ತನ್ನ ಕುಟುಂಬಕ್ಕೋಸ್ಕರವೂ ಅರ್ಪಿಸುತ್ತಿದ್ದ ಒಂದು ಪ್ರಾಚೀನ ಪ್ರಾರ್ಥನೆಯಾಗಿರುತ್ತದೆ: "ಓ ದೇವರೇ, ನಾನು ದುಷ್ಟತನವನ್ನು ಮತ್ತು ಅಪರಾಧವನ್ನು ಮಾಡಿದ್ದೇನೆ ಮತ್ತು ನಿನ್ನ ಮುಂದೆ ಪಾಪ ಮಾಡಿದ್ದೇನೆ, ನಾನು ಮತ್ತು ನನ್ನ ಮನೆಯವರು ಮತ್ತು ಆರೋನನ ಮಕ್ಕಳು, ನಿನ್ನ ಪರಿಶುದ್ಧ ಜನರು. ಓ ದೇವರೇ, ನನ್ನನ್ನು ಕ್ಷಮಿಸು ಎಂದು ಬೇಡುತ್ತೇನೆ, ನಾನು ಮಾಡಿರುವ ದುಷ್ಟತನಗಳು ಮತ್ತು ಅಪರಾಧಗಳು ಮತ್ತು ನಿನ್ನ ಮುಂದೆ ಮಾಡಿದ ಪಾಪ, ಹಾಗೂ ನನ್ನ ಮನೆಯವರು" (*Midrash Yoma* 4:2; quoted in Gareth L. Reese, *A Critical and Exegetical Commentary on the Epistle to the Hebrews* [Moberly, Mo.: Scripture Exposition Books, 1992], 73, n. 15). ಇದನ್ನು ದೇವಾಲಯದ ಪರದೆಯನ್ನು ದಾಟುವದಕ್ಕೆ ಸ್ವಲ್ಪ ಮುಂಚೆ ಉಚ್ಚರಿಸಲ್ಪಡುತ್ತಿತ್ತು. [8]Hewitt, 96. [9]Koester, 286. [10]James T. Draper, Jr., *Hebrews, the Life That Pleases God* (Wheaton, Ill.: Tyndale House Publishers, 1976), 115.

[11]Josephus *Antiquities* 15.3.1; 2 Maccabees 4:7. [12]ಅಪೊಸ್ತಲರ ಕೃತ್ಯಗಳು 6:1-7ರಲ್ಲಿ ಸಭೆಯ ಸೇವೆಯನ್ನು ಮಾಡುವದಕ್ಕೆ ಆರಿಸಿಕೊಳ್ಳಲ್ಪಟ್ಟ ವ್ಯಕ್ತಿಗಳು ಪವಿತ್ರಾತ್ಮನಿಂದ ಪ್ರಕಟಗೊಳಿಸಲ್ಪಟ್ಟ ಅರ್ಹತೆಗಳಿಗೆ ಅನುಗುಣವಾಗಿ ಸಭೆಯವರಿಂದ ಆರಿಸಿಕೊಂಡವರಾಗಿದ್ದರು. ಆದದರಿಂದ ಪರೋಕ್ಷವಾಗಿ ಮಾಡಲ್ಪಟ್ಟಾಗ್ಯೂ, ಏಳು ಮಂದಿ ಸೇವಕರು ಪವಿತ್ರಾತ್ಮನ ಮೂಲಕವಾಗಿ ಅವರ ಪಾತ್ರದಲ್ಲಿ ಇಡಲ್ಪಟ್ಟರೆಂದಾಗಬಲ್ಲದು. ಏಳು ಜನರು "ಸಭಾಸೇವಕರು" ಎಂದು ಕರೆಯಲ್ಪಡಲಿಲ್ಲವಾದರೂ, ಅವರ ಸೇವೆಯ ಕೆಲಸವನ್ನು ಬಣ್ಣಿಸಲು ಬಳಸಲ್ಪಟ್ಟಿರುವ ಕ್ರಿಯಾಪದದ ರೂಪವು "ಸಭಾಸೇವಕ," "ದಾಸನು," ಅಥವಾ "ಸೇವಕನು" ಎಂಬ ಅರ್ಥವನ್ನು ಕೊಡುವ ಅದೇ ಪದದಿಂದ ಬಂದದ್ದಾಗಿದೆ. [13]Philip Edgcumbe Hughes, *A Commentary on the Epistle to the Hebrews* (Grand Rapids, Mich.: Wm. B. Eerdmans Publishing Co., 1977), 181. [14]Ibid., 15. [15]F. F. Bruce, *The Epistle to the Hebrews*, The New International Commentary on the New Testament (Grand Rapids, Mich.: Wm. B. Eerdmans Publishing Co., 1964), 97. [16]"ಸದಾಕಾಲವೂ" ಎಂಬುದು ಯೇಸುವಿನ ಯಾಜಕತ್ವಕ್ಕೆ ಸಹ "ಕಾಲವು ಇರುವ ತನಕ" ಎಂದರ್ಥವಾಗಿರಬಲ್ಲದು. ಅದು ಕ್ರೈಸ್ತ ಯುಗದುದ್ದಕ್ಕೂ ಇರುವಂಥದ್ದಾಗಿತ್ತು, ಮೋಶೆಯ ಯುಗ ಮತ್ತು ಧರ್ಮಶಾಸ್ತ್ರವು ಚಾಲನೆಯಲ್ಲಿರುವ ತನಕ ಆರೋನನ ಯಾಜಕತ್ವವು ಮುಂದುವರೆದ ಪ್ರಕಾರವೇ ಅದು ಯೇಸುವಿನ ಯಾಜಕತ್ವವು ಆತನ ಎರಡನೆಯ ಬರೋಣದಲ್ಲಿ ಅಂತ್ಯಗೊಳ್ಳುವದು (ವಿಮೋಚನಕಾಂಡ

40:15; ಅರಣ್ಯಕಾಂಡ 25:13). (Reese, 76, n. 26.) [17]Hewitt, 100–1. [18]ಮರಣಕ್ಕೆ ಕಾಪಾಡಶಕ್ತನಾಗಿರುವಾತನಿಂದ ಆತನು ಕೇಳಲ್ಪಟ್ಟನು ಎಂಬದಾಗಿ ಹೇಳಿರುವದರ ಹೊರತಾಗಿಯೂ ಗೆತ್ಸೇಮನೆ ತೋಟದಲ್ಲಿ ಯೇಸುವಿನ ಪ್ರಾರ್ಥನೆಗೆ ಉತ್ತರ ಸಿಕ್ಕಲಿಲ್ಲವೆಂದು ಅನೇಕ ವ್ಯಾಖ್ಯಾನಕಾರರು ಹೇಳುತ್ತಾರೆ. [19]James Thompson, *The Letter to the Hebrews,* The Living Word Commentary (Austin, Tex.: R. B. Sweet Co., 1971), 77. [20]Brown, 100.

[21]Neil R. Lightfootನು ಬಿಡುಗಡೆಗೊಳಿಸಬೇಕೆಂಬ ಯೇಸುವಿನ ಪ್ರಾರ್ಥನೆಗೆ ದೇವರು ಉತ್ತರಿಸಿರಬಹುದಾದ ಅನೇಕ ರೀತಿಗಳನ್ನು ಮುಂದಿಡುತ್ತಾನೆ, ಅದರಲ್ಲಿ ಆತನ ಭಯವನ್ನು ನಿರಾಳಗೊಳಿಸಿದ್ದು, ಗೆತ್ಸೇಮನೆಯಲ್ಲಿ ಆತನು ಅಕಾಲಿಕ ಮರಣ ಹೊಂದದಂತೆ ಉಳಿಸಿದ್ದು, ಮತ್ತು ಪುನರುತ್ಥಾನದ ದಾರಿಯ ಮೂಲಕ ಆತನನ್ನು ಮರಣದಿಂದ ಬಿಡಿಸಿದ್ದ ಸೇರಿರುತ್ತವೆ. (Neil R. Lightfoot, *Jesus Christ Today: A Commentary on the Book of Hebrews* [Grand Rapids, Mich.: Baker Book House, 1976], 109, 114–15.) James T. Draper, Jr., told it best: “God did hear his prayer. God did respond to his prayer” (Draper, 123). [22]Ray C. Stedman, *Hebrews,* The IVP New Testament Commentary Series (Downers Grove, Ill.: InterVarsity Press, 1992), 65. [23]Brooke Foss Westcott, *The Epistle to the Hebrews: The Greek Text with Notes and Essays* (London: Macmillan & Co., 1889; reprint, Grand Rapids, Mich.: Wm. B. Eerdmans Publishing Co., 1973), 126. [24]Simon J. Kistemaker, *Exposition of the Epistle to the Hebrews,* New Testament Commentary (Grand Rapids, Mich.: Baker Book House, 1984), 137. [25]W. H. Griffith Thomas, *Hebrews: A Devotional Commentary* (Grand Rapids, Mich.: Wm. B. Eerdmans Publishing Co., 1975), 64. [26]Reese, 78, n. 33. [27]Lightfoot, 110. [28]Brown, 101. [29]Guthrie, 131. [30]Thompson, 78.

[31]Koester, 290. [32]Thompson, 79. [33]Brown, 102. [34]Arthur W. Pink*, An Exposition of Hebrews* (Grand Rapids, Mich.: Baker Book House, 1954), 262. [35]“ಮಾಡುವವರು ಆಗಿದ್ದಾರೆ” ಎಂಬುದರ ಸಂಪೂರ್ಣಕಾಲರೂಪವು “ಒಂದು ಗತಕಾಳದ ಕೃತ್ಯದ ಸದಾ ಉಳಿಯುವ ಫಲಿತವನ್ನು” ಸೂಚಿಸುತ್ತದೆ (Brown, 105.) [36]Lightfoot, 112. [37]Guthrie, 125-26. [38]J. Harry Cotton, “The Epistle to the Hebrews: Exposition,” in *The Interpreter's Bible*, ed. George Arthur Buttrick (Nashville: Abingdon Press, 1955), 11:641. [39]Warren W. Wiersbe*, Be Confident: An Expository Study of the Epistle to the Hebrews* (Wheaton, Ill.: Victor Books, 1982), 61.